ಸಂಪುಟ 15
ಸಂಚಿಕೆ 28

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
18 ಜುಲೈ 1993

ನಿಲ್ಲದ ಕಾಂಗ್ರೆಸ್ (ಐ) ಬೇಜವಾಬ್ದಾರಿತನ - ಬೇಸತ್ತ ಬಡಜನತೆ

ಕರ್ನಾಟಕದಲ್ಲಿ ಕಾಂಗ್ರೆಸ್(ಐ) ಪಕ್ಷಕ್ಕಾಗಲಿ ಕಾಂಗ್ರೆಸ್(ಐ) ಆಡಳಿತೆಗಾಗಲಿ ಜವಾಬ್ದಾರಿ ಎಂಬುದು ಇಲ್ಲವೇ ಇಲ್ಲ ಎಂದು ತೋರುತ್ತದೆ. ಹಿರಿಯ ಕಾಂಗ್ರೆಸ್ಸ್ ಮುಂದಾಳುಗಳಿಂದ ಹಿಡಿದು ಹಿರಿಯ-ಕಿರಿಯ ಮಂತ್ರಿಗಳವರೆಗೂ ಅಧಿಕಾರಕ್ಕಾಗಿ ಗುದ್ದಾಟವೇ ಗುದ್ದಾಟ. ತಮಗೆ ಜನತೆ ರಾಜ್ಯದಲ್ಲಿ "ಜ[illegible]ದಳಕ್ಕಿಂತ ಉತ್ತಮ ಆಡಳಿತ ನಡೆಸಲು ಅಧಿಕಾರ ಕೊಟ್ಟಿದೆ. ಈ ಅವಕಾಶವನ್ನು ನಾವು ಸದುಪಯೋಗ ಮಾಡಿಕೊಳ್ಳಬೇಕು. ಜನತೆಗೆ ನಾವು ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಬೇಕು.... "ಈ ಎಲ್ಲಾ ಪ್ರಜಾಪ್ರಭುತ್ವ ಸತ್‌ಸಂಪ್ರಾದಯಗಳ ಬಗ್ಗೆ ಎಳ್ಳಷ್ಟೂ ಕಾಳಜಿ ಕರ್ನಾಟಕದ ಕಾಂಗ್ರೆಸ್(ಐ) ಪಕ್ಷಕ್ಕೂ ಇಲ್ಲ, ಕಾಂಗ್ರೆಸ್ಸ್(ಐ) ಮಂತ್ರಿವರ್ಯರಿಗೂ ಇಲ್ಲವೆಂದು ಈಗ ಸಾಬೀತಾಗಿದೆ.

ಜುಲೈ 10 ಒಂದೇ ದಿನದ ಪತ್ರಿಕೆಯ ಕನ್ನಡಪ್ರಭ ಮುಖಪುಟದ ಶಿರ್ಷಿಕೆಗಳನ್ನೇ ನೋಡಿರಿ: "ನಿಲ್ಲದ ಕಾಂಗ್ರೈ ಕದನ", "ಕೃಷ್ಣ ಭೇಟಿ, ವಿವರ ನೀಡಲು ಸೇಟ್ ನಕಾರ", "ವರದಿ ತಪ್ಪಾಗಿದ್ದರೂ, ವಿವರಣೆ ನೀಡೆ ಉಪಮುಖ್ಯಮಂತ್ರಿ ಕೃಷ್ಣ ಉವಾಚ", ಬಿಜಾಪುರ ಜಿಲ್ಲೆ ಶಾಸಕರ ಜತೆ ಮೊಯ್ಲಿ ಚರ್ಚೆ".....

ಪ್ರತಿಯೊಂದು ಶಿರ್ಷಿಕೆಯೂ ಕಾಂಗ್ರೈ ಪಕ್ಷ ಮತ್ತು ಆಡಳಿತೆಗಳೊಳಗಿನ ತೀವ್ರ ಬಿಕ್ಕಟನ್ನು ಎತ್ತಿ ತೋರಿಸುತ್ತದೆ. ಶ್ರೀ ವೀರಪ್ಪಮೊಯಿಲಿಯವರ ಮಂತ್ರಿ ಮಂಡಳವನ್ನು ಉರುಳಿಸುವ ಹಂಚಿಕೆ ಶ್ರೀ ವಿರಪ್ಪಮೊಯಿಲಿಯವರ ಮಂತ್ರಿಮಂಡಳದ ಉಪಮುಖ್ಯಮಂತ್ರಿಯ ಮನೆಯಲ್ಲೇ ನಡೆಯುತ್ತಿದೆ ಎಂದರೆ ಇವರಿಗೆಲ್ಲಾ ಅಧಿಕಾರದ ಹುಚ್ಚು ಎಷ್ಟು ಹಿಡಿದಿದೆ ಎಂದು ಸ್ಪಷ್ಟವಾಗುತ್ತದೆ

ರಾಜ್ಯದ ಜನತೆಯ ಎದುರಿನ ಪ್ರಶ್ನೆಗಳಂತೂ ಅನೇಕ ಮತ್ತು ಅತಿ ಗಂಭೀರ ಕೆಲವು ಪ್ರಶ್ನೆಗಳತ್ತ ಗಮನ ಹರಿಸೋಣ;

1. ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಸೇರಿ ವಿದ್ಯಾಭ್ಯಾಸ ಮಾಡಲು ಕಾದು ಕುಳಿತ ಸಾವಿರಾರು ವಿದ್ಯಾರ್ಥಿಗಳ ಎದುರು ಇರುವ ಪ್ರಶ್ನೆ - ಈ ಕಾಲೇಜುಗಳು, ಮಠಾಧಿಪತಿಗಳು ಮತ್ತು ಖಾಸಗಿ ಮ್ಯಾನೇಜ್‌ಮೆಂಟುಗಳು ಭೀತಿ ಹರಡಿಸಿದ ಹಾಗೆ, ಮುಚ್ಚುವವೋ!? ತೆರೆದರೆ ಕ್ಯಾಪಿಟೇಷನ್‌ನನ್ನು "ಮೇಜಿನ ಅಡಿಯಲ್ಲಿ ತೆಗೆದುಕೊಳ್ಳಲಾಗುವುದೋ" ಫೀಸ್ ಇನ್ನಷ್ಟು ಹೆಚ್ಚಸಲ್ಪಟ್ಟು ವಿದ್ಯಾಭ್ಯಾಸವೇ ಬಹುಮಂದಿ ಯೋಗ್ಯ ಬಡಮಂದಿಗೆ ದಕ್ಕದಂತಾಗುವುದೋ ಈ ಬಗ್ಗೆ ಯಾವ ಮಂತ್ರಿಗೂ, ಯಾವ ಕಾಂಗ್ರೈ ಮುಖಂಡರಿಗೂ ಕಾಳಜಿ ಇದೆಯೇ!

2. ದಶಂಬರದ ಒಳಗೆ ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳು 3 ಹಂತಗಳಲ್ಲಿ ನಡೆಯಬೇಕಾಗಿದೆ. ಅದರ ಮುನ್ನ ಸರ್ವ ಸಮ್ಮತ ರೀತಿಯಲ್ಲಿ ಕ್ಷೇತ್ರಗಳ ವಿಂಗಡಣೆ ಆಗಬೇಕಾಗಿದೆ. ಈ ಕೆಲಸಕ್ಕೆ ಯಾವ ಮಂತ್ರಿಗಳು ಲಕ್ಷಕೊಡುತ್ತಿದ್ದಾರೆ? ಕ್ರಮಬದ್ಧವಾಗಿ, 16 ವರ್ಷಗಳಲ್ಲಿ 4 ಸಲ ಪಂಚಾಯತ್ ಚುನಾವಣೆಗಳನ್ನು ನಡೆಸದ ಪಶ್ಚಿಮ ಬಂಗಾಳದ ಎಡರಂಗದ ಸರಕಾರವೆಲ್ಲಿ ಸಕಾಲದಲ್ಲಿ ಚುನಾವಣೆಗಳನ್ನು ನಡೆಸಿದೆ, ತಡೆಹಿಡಿದು, ಹಿಂದಿನ ಪಂಚಾಯತ್ ಮಸೂದೆಯಲ್ಲಿದ್ದ ಪ್ರಮುಖ ವಿಕೇಂದ್ರೀಕರಣ ಕಲಮುಗಳನ್ನು ಕಿತ್ತುಹಾಕಿ ಈಗಲೂ ಚುನಾವಣೆಗಳಿಗೆ ಏನೇನೂ ಸಿದ್ಧತೆ ಮಾಡದ ಕಾಂಗ್ರೆಸ್(ಐ) ಸರಕಾರವೆಲ್ಲಿ? ಅದೇ ವೇಳೆ ಅವರ ಪಕ್ಷದ ಅಧ್ಯಕ್ಷ ಹಾಗೂ ಪ್ರಧಾನಮಂತ್ರಿ ನರಸಿಂಹ ರಾವ್ ಇವರು ದಿನನಿತ್ಯ ಪಂಚಾಯತ್ ಆಡಳಿತೆ ಕಾಂಗ್ರೆಸ್ಸ್‌ನ ಕೊಡುಗೆ' ' ಎಂದೆಲ್ಲಾ ಮಾತಾಡುತ್ತಿರುವುದು ಹಾಸ್ಯಾಸ್ಪದವಲ್ಲವೇ?

3. ಎಲ್ಲಾ ಜನೋಪಯೋಗಿ ಕಾರ್ಯಕ್ರಮಗಳು ಹಣವಿಲ್ಲದೆ ಸ್ಥಗಿತವಾಗಿವೆ.... ಒಂದು ಲಾಬಿಯ ನಂತರ ಇನ್ನೊಂದೂ ಲಾಬಿಯವರು ಒಂದೆಡೆ ಸರಕಾರಕ್ಕೇ ಸವಾಲು ಹಾಕಿ ತಮ್ಮ ದುರ್ಲಾಭದ ವ್ಯವಹಾರಗಳನ್ನು ಮುಂದುವರಿಸುತ್ತಲೇ ಇದ್ದಾರೆ....

ರಾಜ್ಯದ ಬಡಜನತೆಯಂತೂ ಸರಕಾರದತ್ತ ನೋಡಿ ನೋಡಿ ಬೇಸತ್ತಿದ್ದಾರೆ. ತಾವು ಅಸಮಾಧಾನದಿಂದ ಕುದಿಯುತ್ತಿದ್ದಾರೆ. ಈ ಅಸಮಾಧಾನವನ್ನು "ಮತೀಯತೆ"ಯ ಕಡೆಗೆ, ಕೋಮುವಾದದತ್ತ ತಿರುಗಿಸಿ ತಮ್ಮ ಬೇಳೆ ಬೇಯಿಸಲು ಬಿಜೆಪಿ ನೋಡುತ್ತಿದೆ.......

ಸಿಪಿಐ(ಎಂ) ಈ ಎಲ್ಲವನ್ನೂ ನೋಡಿ ಕಣ್ಣುಮುಚ್ಚಿಕುಳಿತುಕೊಳ್ಳಲು ತಯಾರಿಲ್ಲ. ರಾಜ್ಯದಾದ್ಯಂತ ಈ ಎಲ್ಲಾ ಅಂಶಗಳನ್ನು ತಿಳಿಯಪಡಿಸಲು ಜನಜಾಗೃತಿಉಂಟುಮಾಡಲು ಮುಂದಾಗಬೇಕು. ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಈ ಕುರಿತು ವಿಸ್ತೃತ ಪ್ರಚಾರ, ಪ್ರಕ್ಷೋಭೆ, ಹೋರಾಟಗಳನ್ನು ನಡೆಸಲು ಮುಂದಾಗಬೇಕು.

-- ಪಿ. ರಾಮಚಂದ್ರರಾವ್

ಒಳಪುಟಗಳಲ್ಲಿ

"ನಾವೇ ಮುಂದಿನ ಆಡಳಿತಗಾರರು" ಎಂದು ಸಾಧಿಸಲು ಸೋತ ಬಿಜೆಪಿ
ಪ್ರಕಾಶ್ ಕಾರಟ್

ಅಡ್ವಾಣಿಯವರೇ ನಿಮ್ಮ ಪೂರ್ವ ಇತಿಹಾಸದ ಬಗ್ಗೆ ಉತ್ತರಿಸುತ್ತೀರಾ?
ಕಾಂ.ಜಿ.ವಿ. ಶ್ರೀ ರಾಮರೆಡ್ಡಿ

ಕೇಂದ್ರ ಸಮಿತಿ ಸಭೆ ಸ್ವಾಗತ ಸಮಿತಿ ರಚನೆ

ಬೆಂಗಳೂರಿನಲ್ಲಿ ಆಗಸ್ಟ್ 20-21 ರಂದು ನಡೆಯಲಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಭೆ ಹಾಗೂ ಆಗಸ್ಟ್ 22-24 ರವರೆಗೆ ನಡೆಯಲಿರುವ ಕೇಂದ್ರ ಸಮಿತಿಯ ಸಭೆಯನ್ನು ಯಶಸ್ವಿಯಾಗಿ ನಡೆಸಲು ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಪದಾಧಿಕಾರಿಗಳ ವಿವರ ಹೀಗಿದೆ.

ಅಧ್ಯಕ್ಷರು
ಕಾಂ. ಎಸ್. ಸೂರ್ಯನಾರಾಯಣ.ರಾವ್,

ಉಪಾಧ್ಯಕ್ಷರುಗಳು
ಕಾಂ. ಎನ್.ಕೆ. ಉಪಾಧ್ಯಾಯ,
ಕಾಂ. ಸಿ. ನಂಜುಂಡಪ್ಪ,
ಕಾಂ. ಚಂದ್ರಶೇಖರ ಬಾಳೆ,
ಕಾಂ. ವಿ.ಎನ್. ಗೋಪಾಲಗೌಡ
ಕಾಂ.ನಾಗಮೋಹನ್ ದಾಸ್
ಕಾಂ.ಕೆ.ವಿ. ಶ್ರೀನಿವಾಸ್
ಕಾಂ. ಪಿ. ಜಗನ್ನಾಥ್

ಪ್ರಧಾನ ಕಾರ್ಯದರ್ಶಿ
ಕಾಂ. ಪಿ. ರಾಮಚಂದ್ರರಾವ್

ಕಾರ್ಯದರ್ಶಿಗಳು
ಕಾಂ. ಶ್ರೀ ರಾಮರೆಡ್ಡಿ
ಕಾಂ. ಕೆ. ಆರ್. ಶ್ರೀಯಾನ್
ಕಾಂ. ಆರ್. ಶ್ರೀನಿವಾಸ್
ಕಾಂ. ಎಸ್.ವೈ. ಗುರುಶಾಂತ್
ಕಾಂ. ಜಿಸಿ. ಬಯ್ಯಾರೆಡ್ಡಿ
ಕಾಂ. ಜಿ.ಎನ್. ನಾಗರಾಜ್

ಬೆಂಗಳೂರಿನಲ್ಲಿ ನಡೆಯಲಿರುವ ಈ ಮಹತ್ವದ ಸಭೆಗಳು ಜನಸಾಮಾನ್ಯರಿಗೆ ಸಿಪಿಐ(ಎಂ) ನಿಲುವುಗಳನ್ನು ವಿವರಿಸಲು, ರಾಜ್ಯದಲ್ಲಿ ಪ್ರಜಾಪ್ರಭುತ್ವ ಆಂದೋಲನವನ್ನು ಬಲಗೊಳಿಸಲು ಒಂದು ಉತ್ತಮ ಅವಕಾಶ. ಇದರ ಸದುಪಯೋಗ ಪಡೆಯಬೇಕು. ಆಗಸ್ಟ್ 24,1993 ರಂದು ನಡೆಯಲಿರುವ ಕೋಮುಸೌಹಾರ್ದ ರ್‍ಯಾಲಿಯನ್ನು ದೊಡ್ಡ ಪ್ರಮಾಣದಲ್ಲಿ ನಡೆಸಬೇಕು ಎಂದು ನಿರ್ಧರಿಸಲಾಯಿತು.

ಜುಲೈ 16 ರಂದು ಸಭೆ

ಜುಲೈ 16,1993 ರ ಸಂಜೆ 5-30 ಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ಕಛೇರಿಯಲ್ಲಿ ಸ್ವಾಗತ ಸಮಿತಿಯ ಸಭೆ ನಡೆಯಲಿದ್ದು ಇದರಲ್ಲಿ ಎಲ್ಲಾ ಸದಸ್ಯರು ಒಂದು ದಿನದ ವಂತಿಗೆ ಹಣ, ಉಪಸಮಿತಿಗಳ ಕ್ರಿಯಾಯೋಜನೆಯ ವಿವರಗಳೊಡನೆ ಹಾಜರಿರಬೇಕೆಂದು ವಿನಂತಿಸಲಾಗಿದೆ.

ಕಾವಿ ಪಡೆಗಳೊಂದಿಗೆ ಸ್ಪರ್ಧೆ ನಿಲ್ಲಿಸಿ


--ಪೊಲಿಟ್‌ಬ್ಯೂರೋ

ಕಾವಿಪಡೆಗಳು ಏನು ಮಾಡಬೇಕೆಂದಿರುವರೋ ಅದನ್ನು ತಾವೇ ಮಾಡುವುದೇ ಈ ದೇಶದ ಐಕ್ಯತೆಯನ್ನು, ಜಾತ್ಯತೀತತೆಯನ್ನು ರಕ್ಷಿಸಲು ಇರುವ ದಾರಿ ಎಂದು ಪ್ರಧಾನಮಂತ್ರಿಗಳು ಜನಗಳನ್ನು ನಂಬಿಸಲು ಪ್ರಯತ್ನಿಸುತ್ತಿದ್ದಾರೆಯೇ? ಅಥವಾ ತಮ್ಮ ಅಧಿಕಾರ ಉಳಿಸಿಕೊಳ್ಳಲು ಹಿಂದೂ ಮತ ಬ್ಯಾಂಕ್ ಬಿಜೆಪಿಗೆ ಸಿಗದಂತೆ ಮಾಡಲು ಇದೊಂದೇ ದಾರಿ ಎಂದು ಬಗೆದಿದ್ದಾರೆಯೇ? ಅಯೋಧ್ಯೆಯಲ್ಲಿ 'ಸೋಮಯಜ್ಞ' ಪ್ರದರ್ಶನವಾಯಿತು. 'ಸೋಮಯಜ್ಞ' ನಡೆಸಿದವರು ವಿ.ಹೆಚ್.ಪಿ.ಯನ್ನು ವಿರೋಧಿಸಿದರೂ ದೇವಸ್ಥಾನವನ್ನು ವಿವಾದಗ್ರಸ್ತ ಸ್ಥಳದಲ್ಲೇ ಕಟ್ಟಬೇಕು ಎಂದರು. ಈಗ ಧಾರ್ಮಿಕ ವಿಷಯಗಳಲ್ಲಿ ರಾಜಕೀಯ ಪಕ್ಷಗಳು ಮೂಗುತೂರಿಸಬಾರದೆಂದು ಹೇಳಿರುವ ನಾಲ್ಕು ಶಂಕರಾಚಾರ್ಯರುಗಳೂ ಅದೇ ನಿಲುವು ಪ್ರದರ್ಶಿಸಿದ್ದಾರೆ.

ಶೃಂಗೇರಿಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಶೃಂಗೇರಿ, ದ್ವಾರಕಾ ಪುರಿ ಹಾಗೂ ಕಂಚೀ ಮಠದ ಶಂಕರಾಚಾರ್ಯರುಗಳಲ್ಲಿ ಈ ಇಡೀ ವಿವಾದದ ಬಗ್ಗೆ ಐಕ್ಯಮತ್ಯ ಇದ್ದಿರಲಿಲ್ಲ. ಪುರಿಯ ಶಂಕರಾಚಾರ್ಯರು 'ಧರ್ಮಾಚಾರ್ಯರುಗಳಿಗೆ ರಾಜಕೀಯದಲ್ಲಿ ಒಂದು ಪಾತ್ರವಿದೆ' ಎಂದರೆ, ಶೃಂಗೇರಿ ಶಂಕರಾಚಾರ್ಯರು 'ಮಠಾಧೀಶರು ರಾಜಕೀಯದಲ್ಲಿ ತಲೆಹಾಕಬಾರದು, ರಾಜಕಾರಣಿಗಳೊಂದಿಗೆ ಕೈ ಮಿಲಾಯಿಸಿದಾತ' ಸ್ವಾಮಿಯಾಗಿರುವುದು ಹೇಗೆ? ಎಂದಿದ್ದರು. ಡಿಸೆಂಬರ್ 6 ರ ಘಟನೆ ಸರಿಯೆಂದು ಪುರಿಯ ಶಂಕರಾಚಾರ್ಯರು ಹೇಳಿದ್ದಾರೆ. ದ್ವಾರಕೆಯ ಶಂಕರಾಚಾರ್ಯರು ಅದು ಸರಿಯಲ್ಲ ಎಂದಿದ್ದರು. ಈ ನಾಲ್ಕು ಶಂಕರಾಚಾರ್ಯರುಗಳ ಸಭೆಯ ನಂತರ ಹೊರಡಿಸಿದ ಸಂಸ್ಕೃತದ ಹೇಳಿಕೆಯಲ್ಲಿ ಒಂದೆಡೆ ಅವರು 'ರಾಜಕೀಯ ಪಕ್ಷಗಳು ಹಾಗೂ ಸಂಸ್ಥೆಗಳು ಧರ್ಮ ಹಾಗೂ ಧಾರ್ಮಿಕ ವಿಷಯಗಳಲ್ಲಿ ಮಧ್ಯೆ ಪ್ರವೇಶಿಸಬಾರದು' ಎಂದು ವಿ.ಹೆಚ್.ಪಿ. ನಿಲುವನ್ನು ವಿರೋಧಿಸಿದರೂ, ದೇವಸ್ಥಾನ ಕಟ್ಟುವ ವಿಚಾರದಲ್ಲಿ ಮಾತ್ರ ವಿವಾದಗ್ರಸ್ತ ಸ್ಥಳದಲ್ಲೇ ಕಟ್ಟಬೇಕೆಂದು ವಿಹೆಚ್‌ಪಿಯಂತೆ ಅವರೂ ಕರೆ ನೀಡಿದ್ದಾರೆ.

ಇದು ಒಂದು ಜಾತ್ಯಾತೀತ ಪ್ರಭುತ್ವದಲ್ಲಿ ಗಂಭೀರ ಪರಿಣಾಮ ಬೀರುವ ನಿಲುವು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ವಿವಾದಗ್ರಸ್ತ ಸ್ಥಳವನ್ನು ಒಪ್ಪಿಸಿ ಎಂದು ಹೇಳುತ್ತಾ ಶಂಕರಾಚಾರ್ಯರುಗಳು ಸಮಸ್ಯೆಗೆ ಪಕ್ಷಪಾತಪೂರ್ಣ ಪರಿಹಾರ ನೀಡಿದಂತಾಗಿದೆ ಎಂದು ಪಿ.ಬಿ. ಅಭಿಪ್ರಾಯಪಟ್ಟಿದೆ.

ಇಂತಹ ನಿಲುವು ಮೂಡಲು ಪ್ರಧಾನಿ ನರಸಿಂಹರಾಯರು ಬಹಳಷ್ಟು ಕಾಣಿಕೆ ನೀಡಿದ್ದಾರೆ. ಅವರು ಸರಕಾರ - ನೇಮಿತ ಟ್ರಸ್ಟ್‌ನ ಮೂಲಕ ದೇವಸ್ಥಾನ ಕಟ್ಟುವ ಮಾತನಾಡುತ್ತಲೇ ಬರುತ್ತಿದ್ದಾರೆ. ಶಂಕರಾಚಾರ್ಯರುಗಳ ಈ ಸಭೆ ಇತ್ತೀಚಿನ ಸೋಮಯಜ್ಞದಂತೆ ದೇವಸ್ಥಾನದ ರಚನೆಯ ಪ್ರಶ್ನೆಯನ್ನು ವಿ.ಹೆಚ್.ಪಿ.ಯ ಕೈಯಿಂದ ಕಿತ್ತುಕೊಳ್ಳುವ ನರಸಿಂಹರಾಯರ ಪ್ರಯತ್ನವೆಂದೇ ಜನ ಕಾಣುವಂತಾಗಿದೆ. ಕೇಂದ್ರ ಸರಕಾರ ಶಂಕರಾಚಾರ್ಯರುಗಳ ಈ ಆಗ್ರಹವನ್ನು ದೃಢವಾಗಿ ತಿರಸ್ಕರಿಸಬೇಕು. 143 ನೇ ಕಲಮಿನ ಪ್ರಕಾರ ಸುಪ್ರಿಂ ಕೋರ್ಟಿಗೆ ಈ ವಿವಾದವನ್ನು ಒಪ್ಪಿಸುವ ಕ್ರಮವೂ ಸೇರಿದಂತೆ ಸರಕಾರ ತನ್ನ 'ಅಯೋಧ್ಯಾ ಪರಿಹಾರ ಸೂತ್ರ' ವನ್ನು ಹಿಂತೆಗೆದುಕೊಂಡು ಇಡೀ ವಿವಾದವನ್ನು ಸುಪ್ರೀಂ ಕೋರ್ಟಿನ ಪರಿಶೀಲನೆಗೆ ಒಪ್ಪಿಸಿ ಒಂದು ತ್ವರಿತ ತೀರ್ಮಾನ ಬರುವಂತೆ ವ್ಯವಸ್ಥೆ ಮಾಡಬೇಕು ಅಯೋಧ್ಯಾ ವಿವಾದ ಪರಿಹಾರಕ್ಕೆ ಇದೊಂದೇ ಮಾರ್ಗ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.



"ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯಲ್ಲಿ ಪೊನ್ನಪ್ಪ ಅವರ ವ್ಯಂಗ್ಯ ಚಿತ್ರ

ಭಾಜಪ ಸಭೆಯಲ್ಲಿ ಹೊಡೆದಾಟ : ಹಲವರಿಗೆ ಗಾಯ

ಭಾರತೀಯ ಜನತಾಪಕ್ಷದ ಮೈಸೂರು ಘಟಕದ ಸಭೆಯಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ನಾಯಕರ ಮಧ್ಯೆ ಜಗಳ, ಜಗ್ಗಾಟ, ಹಾಗೂ ಹೊಡೆದಾಟಗಳು ನಡೆದು ಹಲವಾರು ಮಂದಿ ಗಾಯಗೊಂಡರು.

ಶನಿವಾರ ರಾತ್ರಿ ನಡೆದ ಸಭೆಯಲ್ಲಿ ಕಾರ್ಯಕರ್ತರು ಹಾಗೂ ನಾಯಕರ ಮಧ್ಯೆ ಕಬ್ಬಿಣ ಸಲಾಕೆಗಳಿಂದ ಕಾಳಗ ನಡೆಯಿತು. ಈ ಘರ್ಷಣೆಯಲ್ಲಿ ಭಾಜಪ ಮೈಸೂರು ಘಟಕ ಅಧ್ಯಕ್ಷ ಮಾರುತಿ ರಾವ್ ಪವಾರ್, ಪ್ರಧಾನ ಕಾರ್ಯದರ್ಶಿ ನರಸಿಂಹಪ್ರಸಾದ್ ಹಾಗೂ ಉಪಾಧ್ಯಕ್ಷ ಪ್ರೊ. ಆರ್ಕನಾಥ್‌ಗೆ ಗಾಯಗಳಾಗಿವೆ.

ಮಾಜಿ ಉಪಮೇಯರ್ ಗೋಪಾಲ ಸ್ವಾಮಿ ಅವರ ಇಬ್ಬರು ಮಕ್ಕಳು ಹಾಗೂ ಹತ್ತು ಜನರ ತಂಡ ಕಬ್ಬಿಣ ಸಲಾಕೆಗಳನ್ನು ಹಿಡಿದು ಸಭೆಗೆ ನುಗ್ಗಿ, ಕಾರ್ಯಕರ್ತರು ಹಾಗೂ ನಾಯಕರ ಜತೆಗೆ ಕಾದಾಟ ಆರಂಭಿಸಿದರು ಎಂದು ಪ್ರಧಾನ ಕಾರ್ಯದರ್ಶಿ ನರಸಿಂಹ ಪ್ರಸಾದ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಪ್ರೊ. ಆರ್ಕನಾಥ್ ಅವರಿಗೆ ಕಪಾಳ ಮೋಕ್ಷ ಮಾಡಿದ ತಂಡ ಮಾರುತಿ ಪವಾರ್ ಅವರ ಮುಖಕ್ಕೆ ಗುದ್ದಿದರು. ಈ ಕಾದಾಟದಲ್ಲಿ ಮನೋಜಕುಮಾರ್, ಪ್ರಾಣೇಶ್ ಹಾಗೂ ವರದಾಚಾರ್ ಕೂಡಾ ಗಾಯಗೊಂಡಿದ್ದಾರೆ.

ಹಲವಾರು ಜನರ ಅಂಗಿ ಹರಿಹೋದವಲ್ಲದೇ, ಇನ್ನು ಕೆಲವರ ಅಂಗಿ, ಪ್ಯಾಂಟ್‌ಗಳು ರಕ್ತ ಸಿಕ್ತವಾಗಿದ್ದವು.

ಸಭೆಗೆ ನುಗ್ಗಿ ಕಾರ್ಯಕರ್ತರ ಹಾಗೂ ನಾಯಕರ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪವಾರ್ ಅವರು ಬೆಂಗಳೂರಿನ ಪಕ್ಷದ ನಾಯಕರಿಗೆ ಕಳಿಸಿದ ಘಟನೆಯ ವರದಿಯಲ್ಲಿ ತಿಳಿಸಿದ್ದಾರೆ.

ಕನ್ನಡಪ್ರಭ, ಜು.5

ಸಮಾವೇಶಕ್ಕೆ ಸಾವಿರ ಬಸ್ ಪ್ರಯಾಣಿಕರ ಪರದಾಟ

ಬೆಂಗಳೂರು : ನಗರದಲ್ಲಿ ಜುಲೈ 30 ರಂದು ಪ್ರಧಾನಿ ಪಿ.ವಿ. ನರಸಿಂಹರಾವ್. ನೇತೃತ್ವದ ಸರ್ಕಾರದ ಸಾಧನೆಗಳನ್ನು ಜನತೆಗೆ ತಿಳಿಸಲು ಏರ್ಪಡಿಸಿದ್ದ ಸಮಾವೇಶಕ್ಕೆ ಸಾರಿಗೆ ಸಂಸ್ಥೆಯು 1,000 ಕ್ಕೂ ಹೆಚ್ಚು ಬಸ್ಸುಗಳನ್ನು ಉಪಯೋಗಿಸಿದ್ದರಿಂದ ಸಾರ್ವಜನಿಕರು ಪರದಾಡಬೇಕಾಯಿತು.

ಬಿಟಿಎಸ್‌ನಿಂದ 300 ಕ್ಕೂ ಹೆಚ್ಚು ಮತ್ತು ಗ್ರಾಮಾಂತರ ವಿಭಾಗದಿಂದ 700 ಬಸ್ಸುಗಳನ್ನು ಪಡೆದಿದ್ದರಿಂದ ತಮ್ಮ ದಿನನಿತ್ಯದ ಚಟುವಟಿಕೆಗಳಿಗೆ ಬಸ್ಸುಗಳನ್ನೇ ನಂಬಿದ್ದ ಪ್ರಯಾಣಿಕರು ಹಾಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಯಿತು. ನಗರದ ಹಾಗೂ ಸುತ್ತಮುತ್ತಲಿನ ಪ್ರಯಾಣಿಕರಿಗೆ ಪ್ರಧಾನಿ ಸಮಾವೇಶ ಕಹಿ ಅನುಭವ ನೀಡಿತು.

ಇಷ್ಟೊಂದು ಸಂಖ್ಯೆಯ ಬಸ್ಸುಗಳನ್ನು ಒಮ್ಮೆಯೇ ನೀಡಿದರೆ ಸಾರ್ವಜನಿಕರು ತೊಂದರೆ ಅನುಭವಿಸಬೇಕಾಗುತ್ತದೆ ಎಂಬುದನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಯಿತು. ಆದರೂ ಕಾರ್ಯಕ್ರಮಕ್ಕೆ ಅಷ್ಟೊಂದು ಬಸ್ಸುಗಳನ್ನು ನೀಡಲೇಬೇಕು ಎಂದು ಸರ್ಕಾರ ಒತ್ತಾಯ ಮಾಡಿತು ಎಂದು ಸಾರಿಗೆ ಸಂಸ್ಥೆಯ ಅಧಿಕಾರಿಯೊಬ್ಬರು ಹೇಳಿದರು.

ಪ್ರಜಾವಾಣಿ, ಜು.1

ಕಾಣಿಕೆ ಕಾಲೇಜುಗಳ ಶುಲ್ಕ ಏರಿಕೆ ಸಂಭವ

ಕಲ್ಬುರ್ಗಿ : ವೃತ್ತಿ ಶಿಕ್ಷಣ ಕಾಲೇಜುಗಳಿಗೆ ನಿಗದಿ ಮಾಡಿರುವ ಶುಲ್ಕವನ್ನು ಏರಿಸುವ ಸಂಭವಿದೆ.

ರಾಜ್ಯದ ಸಾರಿಗೆ ಸಚಿವ ಭೀಮಣ್ಣ ಖಂಡ್ರೆ ಅವರು ಇಂದು ಇಲ್ಲಿ ಈ ಇಂಗಿತ ವ್ಯಕ್ತಪಡಿಸಿದರು.

ಸುಪ್ರಿಂ ಕೋರ್ಟಿನ ತೀರ್ಪಿನ ವ್ಯಾಪ್ತಿಯೊಳಗೆ ರಾಜೀ ಸೂತ್ರವನ್ನು ರೂಪಿಸುವ ವಿಚಾರ ಸರ್ಕಾರಕ್ಕಿದೆ. ಶುಲ್ಕವನ್ನು ಏರಿಸುವ ಬಗ್ಗೆ ಮರು ಪರಿಶೀಲಿಸಲು ಅದು ಒಪ್ಪಬಹುದು. ಎಂದು ಖಂಡ್ರೆ ತಿಳಿಸಿದರು.

ಕನ್ನಡಪ್ರಭ, ಜೂನ್ 28

ಹೊನ್ನಾವರ: ಶಾಂತಿ ಸಮಿತಿ ಸಭೆ

ಹೊನ್ನಾವರ : ಭಟ್ಕಳದಲ್ಲಿ ಎರಿಂದ ನಡೆಯುತ್ತಿದ್ದ ಹಿಂಸಾತ್ಮಕ ಘಟನೆಗಳನ್ನು ಹಾಗೂ ಹಿಂದಿನ ಎರಡು ದಿನ್ನಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಹಲವು ಊರುಗಳಲ್ಲಿ ನಡೆದ ಹಿಂಸಾತ್ಮಕ ಘಟನೆಗಳನ್ನು ತೀವ್ರವಾಗಿ ಖಂಡಿಸಿ ಒಮ್ಮತದ ನಿರ್ಣಯ ಕೈಗೊಂಡು ಶಾಂತಿ ಸ್ಥಾಪನೆಗೆ ಕರ ನೀಡುವ ಸಭೆ ಹೊನ್ನಾವರ ತಹಶೀಲ್ದಾರ್ ಕಚೇರಿಯಲ್ಲಿ ಜೂನ್ 30 ರಂದು ನಡೆಯಿತು.

ಭಟ್ಕಳದಲ್ಲಿ ಶಾಂತಿ ಸ್ಥಾಪನೆ ವಿಳಂಬವಾಗುತ್ತಿರುವುದು ಇತರ ತಾಲೂಕು ಜನ ಕೆರಳಲು ಕಾರಣವಾಗಿದೆ. ಇದರಿಂದ ಸಂಬಂಧವಿಲ್ಲದ ಜನ ತೊಂದರೆಗೊಳಗಾಗುತ್ತಿದ್ದಾರೆ. ಭಟ್ಕಳದ ಜನಜೀವನ ಸಹಜವಾದರೆ ಉಳಿದೆಡೆ ಶಾಂತಿ ಸ್ಥಾಪನೆಯಾಗುತ್ತದೆ ಎಂದು ಡಾ. ಕರ್ಕಿ ಅಭಿಪ್ರಾಯಪಟ್ಟರು. ಸರಕಾರದ ವಿಫಲತೆಯನ್ನು ನಗರಸಭಾಧ್ಯಕ್ಷರು ಎತ್ತಿ ಹೇಳಿದರು.

ಉದಯವಾಣಿ ಜು.1

ಮಹಾಪೌರರ ಘೋಷಣೆ ಎಷ್ಟು ಸಮಂಜಸ?

ಕಲಬುರ್ಗಿ : ಜನತಂತ್ರ ನಿಯಮಗಳಂತೆ ಚುನಾವಣೆ ನಡೆದು ಮಹಾಪೌರರಾಗಿ ಕಾಂಗ್ರೆಸ್ ಬಂಡು ಅಭ್ಯರ್ಥಿ ಆಯ್ಕೆಯಾಗಿದ್ದಾರೆಂದು ಸಭೆಯಲ್ಲಿ ಘೋಷಿಸಿ, ಸಭೆಯ ನಂತರ ಈ ಆಯ್ಕೆ

.. ಅಲ್ಲಿಂದ ಇಲ್ಲಿಂದ ..

ಅಕ್ರಮವೆಂದು ಬಸವರಾಜ ಯಾಲಕ್ಕಿ ಅವರು ಸಾರಿರುವದು ಸರಿಯೆ ಎಂಬ ಜಿಜ್ಞಾಸೆ ಜಿಲ್ಲಾ ಕಾಂಗ್ರೆಸ್ ಪಕ್ಷದೊಳಗೆ ಉಂಟಾಗಿದೆ.

ಮತದಾನಕ್ಕೆ ಮೊದಲು ಸಭೆಯಲ್ಲಿ ಸಾಕಷ್ಟು ಗಲಭೆ ಉಂಟಾದರೂ ನಂತರ ಮಹಾಪೌರರು ನಡೆಸಿದ ಮತದಾನ, ಮತಗಳ ಎಣಿಕೆ ಶಾಂತಿಯುತವಾಗಿಯೆ ನಡೆದಿದೆ ಕಾಂಗ್ರೆ ಬಂಡು ಅಭ್ಯರ್ಥಿಯು ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಬಸವರಾಜ ಯಾಲಕ್ಕಿ ಅವರೆ ಘೋಷಿಸಿದ್ದಾರೆ. ಈ ಸಂಗತಿಗಳನ್ನು ಯಾರೂ ಅಲ್ಲಗಳೆಯುವಂತಿಲ್ಲ.

ನಂತರ ಉಪಮಹಾಪೌರರ ಚುನಾವಣಾ ವಿಧಾನವೂ ಆರಂಭಗೊಂಡು ಗೊಂದಲದಲ್ಲಿ ಹಠಾತ್ತನೆ ಸಭೆ ಮುಂದೂಡಲ್ಪಟ್ಟಿದೆ. ವಿಧಿವತ್ತಾಗಿ ನಡೆದಿದ್ದ ಮಹಾಪೌರರ ಆಯ್ಕೆ ಅಕ್ರಮವೆಂದು ಸಾರಿರುವದು ಸೌಜನ್ಯವಲ್ಲ ಎಂದು ಅನೇಕ ಹಿರಿಯ ಕಾಂಗ್ರೆಸ್ಸಿಗರು ಅಭಿಪ್ರಾಯಪಟ್ಟಿದ್ದಾರೆ.

ಸಂಯುಕ್ತ ಕರ್ನಾಟಕ, ಜು.3

ಒಗ್ಗಟ್ಟಿನ ನಡೆ - ದಳ ಮುಖಂಡರ ಭರವಸೆ

ಮಂಡ್ಯ : 'ಇನ್ನುಮುಂದೆ ಮನೆ ಒಡೆಯುವ ಕೆಲಸ ಮಾಡುವುದಿಲ್ಲ. ರಾಜ್ಯದ ಹಿತಕ್ಕಾಗಿ ಒಗ್ಗಟ್ಟಿನಿಂದ ಇದ್ದು ಕಂಕಣಬದ್ಧರಾಗಿ ದುಡಿಯುತ್ತೇವೆ' ಎಂದು ಏಕೀಕೃತ ಜನತಾದಳ ಮುಖಂಡರು ಪಕ್ಷದ ಕಾರ್‍ಯಕರ್ತರಿಗೆ ಗುರುವಾರ ಇಲ್ಲಿ ಭರವಸೆ ನೀಡಿದರು.

ಜಿಲ್ಲಾ ಜನತಾದಳ ಮತ್ತು ಸಮಾಜವಾದಿ ಜನತಾ ಪಕ್ಷಗಳ ಕಾರ್‍ಯಕರ್ತರ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಎರಡೂ ಪಕ್ಷಗಳ ಧುರೀಣರು ಕಾರ್‍ಯಕರ್ತರಿಗೆ ಅರ್ಪಣಾ ಭಾವದಿಂದ ಈ ವಚನ ನೀಡಿದರು.

ಆ. 9" ರಂದು ವಿಧ್ಯುಕ್ತ ವಿಲೀನಕ್ಕೆ ಮೊದಲು, ಒಡೆದು ಹೋಗಿರುವ ಕಾರ್‍ಯಕರ್ತರ ಮನಸ್ಸನ್ನು ಒಂದುಗೂಡಿಸಲು ಎರಡು ಪಕ್ಷಗಳ ಮುಖಂಡರು ಜಂಟಿಯಾಗಿ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಪ್ರವಾಸ ಕಾರ್‍ಯಕ್ರಮದ ದಮೊದಲ ಹೆಜ್ಜೆಯಾಗಿ ಗುರುವಾರ ಈ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಜನತಾದಳದಲ್ಲಿ ವಿರಸ ಮೊದಲ ಬಾರಿಗೆ ಪ್ರಕಟಗೊಂಡ ಮಂಡ್ಯದಲ್ಲೇ ಏಕೀಕೃತ ಜನತಾ ದಳವನ್ನು ಬಲಪಡಿಸುವ ಮೊದಲ ಸಭೆ ಏರ್ಪಡಿಸಿದುದು ಗಮನಾರ್ಹ.

ಪ್ರಜಾವಾಣಿ ಜು. 3

ವರ್ಗಾವಣೆ ವ್ಯಾಪಾರ

ಬಳ್ಳಾರಿ : ಮುಖ್ಯಮಂತ್ರಿ ಅವರು ನಿಭಾಯಿಸುತ್ತಿರುವ ಪೊಲೀಸ್ ಇಲಾಖೆಯ ವರ್ಗಾವಣೆ ಪರಿ ಎಷ್ಟು ಹೇಳಿದರೂ ತೀರದು. ವರ್ಗಾವಣೆ ಆದೇಶ ಪಡೆದ ಎಲ್ಲ ಸರ್ಕಲ್ ಇನ್ಸ್ಪೆಕ್ಟರುಗಳು ವರ್ಗದ ಸ್ಥಳವನ್ನು ಬದಲಾಯಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ವರ್ಗ ಮಾರ್ಪಾಟು ಮಾಡಿಸಿಕೊಂಡು ತಮಗೆ ಬೇಕಾದ ಸ್ಥಳಕ್ಕೆ ಹೋಗಿದ್ದಾರೆ. ವರ್ಗ ಬದಲಾವಣೆ ಮಾಡಿಸಿಕೊಳ್ಳುವಲ್ಲಿ ರಾಜಕೀಯಸ್ತರ ಮೊರೆ ಹೋದ ಈ ಸರ್ಕಲ್ ಇನ್ಸ್ಪೆಕ್ಟರ್‌ಗಳ ಸೇವೆ ಸಾರ್ವಜನಿಕರಿಗೆ ಮೀಸಲೇ ಇಲ್ಲ ವರ್ಗ ಮಾಡಿಸಿದ ರಾಜಕೀಯ ಧಣಿಗಳಿಗೋ ಎಂಬ ಶಂಕೆಗೆ ಆಸ್ಪದವಾಗಿದೆ. ಪ್ರಭಾವಿಗಳ ಒತ್ತಡಕ್ಕೆ ಮಣಿದು ವರ್ಗ ಸ್ಥಳ ಬದಲಾಯಿಸಲಾಗಿದೆ. ಮುಖ್ಯಮಂತ್ರಿಗಳು ಮೇ 9 ರಂದು 82 ಜನರಿಗೆ 10 ರಂದು 42 ಜನರಿಗೆ, 27 ರಂದು 89 ಜನರಿಗೆ ಮತ್ತು 28 ರಂದು 13 ಜನರಿಗೆ ಸ್ಥಳ ಬದಲಾವಣೆಗೆ ಅನುಮತಿ ನೀಡಿದ್ದಾರೆ. ವರ್ಗಾವಣೆಗೆ ಮೇ 30 ರಂದು 202 ಇನ್ಸ್ಪೆಕ್ಟರುಗಳಿಗೆ ಆದೇಶ ಹೊರಡಿಸಿ 231 ಮರು ವರ್ಗಾವಣೆ ಆದೇಶ ನೀಡಿದ್ದು ಮುಖ್ಯಮಂತ್ರಿಗಳು ಮಾಡಿದ ಹೇಗಿದೆ ವರ್ಗಾವಣೆ ವ್ಯಾಪಾರ?

ಕನ್ನಡಪ್ರಭ, ಜು. 4

ಪ್ರಾಣ ಬೆದರಿಕೆ - ಮಾಜಿ ಮೇಯರ್ ಆರೋಪ

ಬೆಂಗಳೂರು : ಬೆಂಗಳೂರು ಮಹಾನಗರಪಾಲಿಕೆಯ ಆಡಳಿತ ಪಕ್ಷದ ನಾಯಕರು ಮಧ್ಯರಾತ್ರಿಯಲ್ಲಿ ದೂರವಾಣಿ ಮುಖೇನ ತಮಗೆ ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದು ಅದೇ ಪಕ್ಷದ ಮಾಜಿ ಮೇಯರ್ ಆರೋಪಿಸಿ, ಸೂಕ್ತ ರಕ್ಷಣೆಗೆ ಪೊಲೀಸ್ ಕಮಿಷನರ್ ಅವರಿಗೆ ಸೂಚಿಸಬೇಕು ಎಂದು ಪಾಲಿಕೆಯ ಇಂದಿನ ಸಭೆಯಲ್ಲಿ ಮೇಯರ್ ಅವರಲ್ಲಿ ಮೊರೆಯಿಟ್ಟರು.

"ಮೇಯರ್ ಚುನಾವಣೆಯಲ್ಲಿ ನನಗೆ ಅಡ್ಡಿ ಮಾಡಿದ್ದೀರ. ಮುಂದಿನ ಸಲವಾದರೂ ಸಹಾಯ ಮಾಡುತ್ತೀರಾ. ಇಲ್ಲವಾ?" ತಮ್ಮ ಪಕ್ಷದವರೇ ಆದ ಜಿ. ಕುಪ್ಪಸ್ವಾಮಿ ಶುಕ್ರವಾರ ಮಧ್ಯರಾತ್ರಿಯಲ್ಲಿ ಮನೆಗೆ ಫೋನ್ ಮಾಡಿ ಪ್ರಾಣ ಬೆದರಿಕೆ ಒಡ್ಡಿದರೆಂದು ಮಾಜಿ ಮೇಯರ್ ಕೆ. ನಾರಾಯಣಸ್ವಾಮಿ ಅವರು ತೆರಿಗೆ ಅಪೀಲು ಸಮಿತಿ ಚುನಾವಣೆಗೆ ಸೇರಿದ್ದ ಸಭೆಯಲ್ಲಿ ನೇರವಾಗಿ ಆರೋಪಿಸಿದರು.

ಪ್ರಜಾವಾಣಿ, ಜು.4

ಏಕ ಶಿಕ್ಷಕ ಪ್ರೌಢಶಾಲೆ!

ನಾಗಮಂಗಲ : ನಾಗಮಂಗಲಕ್ಕೆ ಸುಮಾರು ಎಂಟು ಕಿ.ಮಿ ದೂರದಲ್ಲಿ ಕಾಂತಪುರ ಎಂಬ ಗ್ರಾಮವಿದೆ. ಅಲ್ಲಿಗೆ ಸರ್ಕಾರವು 1991-92 ರಲ್ಲಿ ಒಂದು ಪ್ರೌಢಶಾಲೆ ಮಂಜೂರಾತಿ ನೀಡಿ ಒಬ್ಬ ಶಿಕ್ಷಕರನ್ನು ನೇಮಿಸಿ ಮರೆತುಬಿಟ್ಟಿತು.

ಅವರೊಬ್ಬರೆ ಇಂಗ್ಲೀಷ್, ಹಿಂದಿ, ಕನ್ನಡ, ವಿಜ್ಞಾನ, ಗಣಿತ, ಸಮಾಜ ಶಾಸ್ತ್ರ, ಎಲ್ಲ ಬೋಧಿಸಬೇಕು. ಬೋಧಿಸಿದರು.

ಎಂಟನೆ ತರಗತಿ ಆಯಿತು. ಒಂಬತ್ತಾಯಿತು. ಈ ಸಲ ಹತ್ತನೇದು ಕೂಡ ತೆರೆಯಿತು. ನೂರಕ್ಕೂ ಮೇಲ್ಪಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದ್ದಾರೆ. ಬೋಧಕರು ಮಾತ್ರ ಏಕಮೇವಾದ್ವಿತೀಯರು.

ಈ ಮೊದಲಿದ್ದ ಶಿಕ್ಷಕರು ಜೂನ್ 30 ಕ್ಕೆ ನಿವೃತ್ತರಾಗುತ್ತಾರೆ. ಕಾಂತಾಪುರ ಮತ್ತೆ ಏಕೋಪಾಧ್ಯಾಯ ಶಾಲೆ!

ಪ್ರಜಾವಾಣಿ, ಜು.4

ಬಾಲಕಾರ್ಮಿಕರ ಶೋಷಣೆ ತಡೆಯುವಲ್ಲಿ ವಿಫಲವಾದ ಕಾರ್ಮಿಕ ಅಧಿಕಾರಿಗಳ ಅಮಾನತ್ತಿಗೆ ಒತ್ತಾಯ

ಇತ್ತೀಚೆಗೆ ಬೆಂಗಳೂರಿನ ಕಲಾಸಿಪಾಳ್ಯಂ ಹಾಗೂ ಚಿಕ್ಕಪೇಟೆಯಲ್ಲಿರುವ ಅಯೋಧ್ಯಾ ಹೋಟೆಲ್‌ಗಳು ಹಾಗೂ ರಾಜಾಜಿನಗರದಲ್ಲಿರುವ ಅಭಿರುಚಿ ಹೋಟೆಲ್‌ಗಳಲ್ಲಿ ಬಾಲ ಕಾರ್ಮಿಕರನ್ನು ಬಂಧನದಲ್ಲಿಟ್ಟು ದುಡಿಸಿಕೊಳ್ಳುತ್ತಿದ್ದ ವಿಷಯ ಬಹಿರಂಗವಾಗಿದೆ. ಇದೇ ರೀತಿ ನಗರದಲ್ಲಿ ಇನ್ನೂ ನೂರಾರು ಹೋಟೆಲ್‌ಗಳಲ್ಲಿ ಈ ಪರಿಸ್ಥಿತಿ ಮುಂದುವರಿದಿದೆ. ಕಳೆದ ಮೂರು ತಿಂಗಳಲ್ಲಿ ಈ ರೀತಿಯ ಮೂರು ಘಟನೆಗಳನ್ನು ಬೆಂಗಳೂರಿನಲ್ಲಿ ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಸಹಾಯದಿಂದ ಪೋಲೀಸರು ಪತ್ತೆ ಹಚ್ಚಿದ್ದಾರೆ. ಕಳೆದ ವರ್ಷ ದೇವಯ್ಯ ಪಾರ್ಕ್ ಬಳಿಯ ಸುರುಚಿ ಹೋಟೆಲ್‌ನಲ್ಲಿ ಬೆಂಕಿ ಅಪಘಾತ ನಡೆದು ನಾಲ್ವರು ಕಾರ್ಮಿಕರು ಮೃತರಾಗಿದ್ದಾರೆ. ಈ ಕಾರ್ಮಿಕರ ವಿವರ ಈವರೆಗೂ ಪತ್ತೆಯಾಗಿಲ್ಲ. ಈ ವಿಷಯಗಳಲ್ಲಿ ನಿಜವಾಗಿ ಕ್ರಮವಹಿಸಬೇಕಾದ ಕಾರ್ಮಿಕ ಇಲಾಖೆ ಮೇಲಿನ ಪ್ರಕರಣಗಳಲ್ಲಿ ತಪ್ಪಿತಸ್ಥ ಹೋಟೆಲ್ ಮಾಲೀಕರ ಮೇಲೆ ಯಾವ ಕ್ರಮ ಕೈಗೊಂಡಿರುವುದಿಲ್ಲ. ಕಾರ್ಮಿಕ ಅಧಿಕಾರಿಗಳು ಹಾಗೂ ಇನ್ಸ್ಪೆಕ್ಟರ್‌ಗಳು ಹೋಟೆಲ್‌ಗಳ ತನಿಖೆ ನಡೆಸಿ ಅಲ್ಲಿ ದುಡಿಯುವ ಕಾರ್ಮಿಕರ ದಾಖಲೆ ತಯಾರಿಸುವುದರಲ್ಲಿ ಸಂಪೂರ್ಣ ವಿಫಲಾಗಿದ್ದಾರೆ. ಅಂಗಡಿ ಹಾಗೂ ವಾಣಿಜ್ಯ ಸಂಸ್ಥೆಗಳ ಕಾನೂನು, 1961 ರ ಸೆಕ್ಷನ್ 7 ರ ಪ್ರಕಾರ ಕೆಲಸಗಾರರು ಹೆಸರು ಮತ್ತು ಕೆಲಸದ ಸಮಯ ವಾರದ ರಜಾ ದಿನಗಳು ವಿವರಗಳು, ಸಂಬಳ ದಿನಾಂಕ ಇವುಗಳನ್ನು ಜಾರಿ ಮಾಡಿಸಬೇಕಾದ ಕಾರ್ಮಿಕ ಇನ್ಸ್ಪೆಕ್ಟರ್‌ಗಳು ಮಾಲೀಕರ ದಲ್ಲಾಳಿಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಲ್. ರಾಜನ್ ಪತ್ರಿಕಾ ಹೇಳಿಕೆಯೊಂದರಲ್ಲಿ ಆಪಾದಿಸಿದ್ದಾರೆ.

ಮೇಲಿನ ಮೂರು ಪ್ರಕರಣಗಳು ನಡೆದ [illegible] ಕಾರ್ಮಿಕ ಅಧಿಕಾರಿ ಹಾಗೂ ಇನ್ಸ್ಪೆಕ್ಟರ್‌ಗಳನ್ನು ಕೂಡಲೇ ಅಮಾನತ್ತಿನಲ್ಲಿಡಬೇಕೆಂದು, ಬೆಂಗಳೂರಿನ 28 ಕಾರ್ಮಿಕ ಇನ್ಸ್ಪೆಕ್ಟರ್‌ಗಳ ವಿಭಾಗಕ್ಕೆ ಸಂಬಂಧಪಟ್ಟಂತೆ ತ್ರಿಪಕ್ಷ ಸಮಿತಿಗಳನ್ನು 15 ದಿನದೊಳಗೆ ರಚಿಸಿ ಕಾರ್ಮಿಕ ಕಾಯಿದೆಗಳ ಸಂಪೂರ್ಣ ಜಾರಿಗೆ ಕ್ರಮ ವಹಿಸಬೇಕೆಂದು ಒತ್ತಾಯಿಸಲು ದಿನಾಂಕ ಜುಲೈ 2,1993 ರಂದು ಕಾರ್ಮಿಕ ಇಲಾಖೆ ಕಚೇರಿ ಮುಂದೆ ಹೋಟೆಲ್ ಕಾರ್ಮಿಕರ ಬೃಹತ್ ಪ್ರತಿಭಟನೆ ಕಾರ್ಯಕ್ರಮದ ಸಂದರ್ಭದಲ್ಲಿ ಈ ಪತ್ರಿಕಾ ಹೇಳಿಕೆ ನೀಡಲಾಗಿತ್ತು.

ಅಸಂಘಟಿತ ಕಾರ್ಮಿಕರ ಸಮಾವೇಶ

ದಿನಾಂಕ ಮೇ 16,1993 ರಂದು ಅಸಂಘಟಿತ ವಲಯದ ಕಾರ್ಮಿಕರ ಒಂದು ಸಮಾವೇಶವು ಬೆಂಗಳೂರಿನ ಕುಂಬಳಗೋಡಿನ ಯುವಜನ ತರಬೇತಿ ಕೇಂದ್ರದಲ್ಲಿ ನಡೆಯಿತು.. ಈ ಸಭೆಗೆ ಕೆ.ಎಸ್. ಸುಬ್ರಮಣ್ಯಂ ಅವರು ಅಧ್ಯಕ್ಷತೆ ವಹಿಸಿದ್ದರು ಈ ಸಮಾವೇಶಕ್ಕೆ ಸಿಪಿಐ(ಎಂ) ನ ಬೆಂಗಳೂರು ಜಿಲ್ಲಾ ಕಾರ್‍ಯದರ್ಶಿಗಳಾದ ಆರ್. ಶ್ರೀನಿವಾಸ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹಾಗೂ ವಿ.ಜೆ.ಕೆ. ನಾಯರ್‌ರವರು ಮುಖ್ಯ ಭಾಷಣಕಾರರಾಗಿದ್ದರು. ಅತಿಥಿಗಳಾಗಿ ಕುಂಬಳಗೂಡು ಕೈಗಾರಿಕಾ ಪ್ರದೇಶದ ಕಾರ್ಮಿಕ ಸಂಘಗಳ ಕಛೇರಿಯ ಅಧ್ಯಕ್ಷರಾದ ರಾಜಣ್ಣನವರು ಹಾಗೂ ಮೈಸೂರು ರಸ್ತೆಯ ಮೈಸೂರು ಫೀಡ್ಸ್ ಕಾರ್ಮಿಕ ಸಂಘದ ಅಧ್ಯಕ್ಷರಾದ ರಾಮಚಂದ್ರಯ್ಯನವರು ಭಾಗವಹಿಸಿದ್ದರು.

ಆರ್. ಶ್ರೀನಿವಾಸ್ ಮಾತನಾಡುತ್ತಾ ಕಾರ್ಮಿಕರು ಹೆಚ್ಚು ಹೆಚ್ಚು ಸಂಘಟಿತರಾಗಬೇಕೆಂದು ಹಾಗೂ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡು ದೇಶದ ಐಕ್ಯತೆಯನ್ನು ಹಾಗೂ ಕೋಮು ಸೌಹಾರ್ದತೆಯನ್ನು ಕಾಪಾಡಲು ಬದ್ಧರಾಗಬೇಕೆಂದು ಕರೆಯಿತ್ತರು. ಮುಖ್ಯ ಭಾಷಣಕಾರರಾಗಿ ಮಾತನಾಡಿದ ವಿ.ಜೆ.ಕೆ. ನಾಯರ್‌ರವರು ಸಂಘಟಿತರಿಗೂ ಮತ್ತು ಅಸಂಘಟಿತರಿಗೂ ಇರುವ ವ್ಯತ್ಯಾಸಗಳನ್ನು ವಿವರಿಸುತ್ತಾ ಸಂಘಟಿತರು ಅಸಂಘಟಿತ ಕಾರ್ಮಿಕರನ್ನು ಹೆಚ್ಚು ಹೆಚ್ಚು ಸಂಘಟಿತರನ್ನಾಗಿ ಮಾಡಬೇಕು. ಈಗಿನ ಬೆಲೆಯೇರಿಕೆಯ ಮಟ್ಟದಲ್ಲಿ ಪ್ರತಿಯೊಬ್ಬ ಮನುಷ್ಯನು ಕನಿಷ್ಟ ಜೀವನವನ್ನು ನಡೆಸಲು ಹೋರಾಟ ಮಾಡಬೇಕಾಗಿದೆ. ಆದ್ದರಿಂದ ಪ್ರತಿಯೊಬ್ಬರು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಅತಿಥಿಗಳಾದ ರಾಜಣ್ಣನವರು ಸಂಘಟಿತ ಕಾರ್ಮಿಕರು ಅಸಂಘಟಿತ ಕಾರ್ಮಿಕರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಕರೆಯಿತ್ತರು.

ಕಾಂ.ಕೆ.ಎಸ್. ಸುಬ್ರಮಣ್ಯರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಈಗಿನ ಕೇಂದ್ರ ಸರ್ಕಾರದ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳಿಂದ ಉದ್ಭವಿಸುತ್ತಿರುವ ಪರಿಸ್ಥಿತಿ ಮತ್ತು ಸಮಸ್ಯೆಗಳನ್ನು ವಿವರಿಸಿದರು. ಕೇಂದ್ರ ಸರ್ಕಾರದ ಈ ನೀತಿಗಳ ಧೋರಣೆಯಿಂದ ಲಕ್ಷಾಂತರ ಕಾರ್ಮಿಕರು ಒಂದೆಡೆ ಬೀದಿ ಪಾಲಾಗುತ್ತಿದ್ದಾರೆ ಇನ್ನೊಂದೆಡೆ ಬಹುರಾಷ್ಟ್ರೀಯ ಕಂಪೆನಿಗಳ ಸ್ಪರ್ಧೆಯ ತೀವ್ರತೆಯಲ್ಲಿ ನಮ್ಮ ದೇಶದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ತೀವ್ರವಾಗಿ ನಲುಗಿ ಹಾನಿಗೊಳಗಾಗುವ ಪರಿಸ್ಥಿತಿ ಬಂದಿದೆ. ಇದನ್ನೆಲ್ಲಾ ಎದುರಿಸಲು ರೈತರು, ಕಾರ್ಮಿಕರು, ಮಹಿಳೆಯರು, ಯುವಜನರು ಮತ್ತು ವಿದ್ಯಾರ್ಥಿಗಳು ಒಂದಾಗಿ ಹೋರಾಡಬೇಕೆಂದು ಹಾಗೂ ಸೆಪ್ಟೆಂಬರ್ 9ರ 'ಭಾರತ್‌ಬಂದ್'ನ್ನು ಯಶಸ್ವಿಯಾಗಲೂ ಎಲ್ಲರನ್ನು ಈ ಹೋರಾಟದಲ್ಲಿ ಪಾಲ್ಗೊಳಿಸಲು ಶ್ರಮ ಪಡಬೇಕೆಂದು ಕರೆಯಿತ್ತರು.

ಎಸ್. ವರಲಕ್ಷ್ಮಿಯವರು ಸ್ವಾಗತಿಸಿದ ಈ ಸಭೆಯ ವಂದನಾರ್ಪಣೆಯನ್ನು ಎಸ್.ಆರ್. ಕೆ. ಪ್ರಸಾದ್ ಮಾಡಿದರು.

ಬಸ್ ವ್ಯವಸ್ಥೆ ಸರಿಪಡಿಸಲು ಒತ್ತಾಯ

ಶಿರಸಿ : ಎಸ್.ಎಫ್.ಐ ಉತ್ತರ ಕನ್ನಡ ಜಿಲ್ಲಾ ಸಮಿತಿಯ ಪ್ರತಿನಿಧಿಗಳು ಜುಲೈ ಒಂದರಂದು ಶಿರಸಿಯ ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ಅಧಿಕಾರಿ ಅವರನ್ನು ಭೇಟಿಯಾಗಿ ಭಟ್ಕಳ ಗ್ರಾಮಾಂತರ ಪ್ರವೇಶದ ಸಾರಿಗೆ ಅವ್ಯವಸ್ಥೆಯನ್ನು ಸರಿಪಡಿಸಲು ಒತ್ತಾಯಿಸಿದರು. ಈ ಗ್ರಾಮಾಂತರ ಪ್ರದೇಶಕ್ಕೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬಸ್ ಸೌಲಭ್ಯ ಒದಗಿಸಬೇಕು.

ಬಸ್ ಸ್ಟಾಂಡಿನ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಪ್ರಯಾಣಿಕರ ಅನುಕೂಲಕ್ಕಾಗಿ ಮೈಕ್ ವ್ಯವಸ್ಥೆ ಮಾಡಬೇಕು.

ವಿದ್ಯಾರ್ಥಿಗಳಿಗೆ ಶೀಘ್ರವಾಗಿ ಪಾಸ್ ವಿತರಣೆ,ಹಾಗೂ ಸೋರುವ ಬಸ್ಸುಗಳ ಶೀಘ್ರ ರಿಪೇರಿ - ಈ ಬೇಡಿಕೆಗಳು ಹದಿನೈದು ದಿನಗಳೊಳಗಾಗಿ ಈಡೇರದಿದ್ದ ಪಕ್ಷದಲ್ಲಿ ಎಸ್.ಎಫ್.ಐ. ಪದಾದಿಕಾರಿಗಳು ವಿಭಾಗಾಧಿಕಾರಿಗಳ ಕಛೇರಿ ಮುಂದೆ ಧರಣೆ ಸತ್ಯಾಗ್ರಹ ನಡೆಸುವುದಾಗಿ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಿಗೆ ತಿಳಿಸಿದರು. ನಿಯೋಗದ ನಾಯಕತ್ವವನ್ನು ಜಿಲ್ಲಾ ಎಸ್. ಎಫ್.ಐ. ಕಾರ್ಯದರ್ಶಿ ಸುರೇಶ್ ತಾಂಡೇಲ, ಭಟ್ಕಳ ತಾಲೂಕು ಘಟಕದ ಅಧ್ಯಕ್ಷ ಆನಂದ ಶೆಟ್ಟಿ ಕಾರ್ಯದರ್ಶಿ ಗುರುದತ್ತ ಶಿರಾಲಿ, ಸಹ ಕಾರ್ಯದರ್ಶಿಗಳಾದ ಶಂಬು ಭಟ್ಟ ಹಾಗೂ ಜೋಸ್. ಕೆ. ಥಾಮಸ್ ವಹಿಸಿದ್ದರು.

ಡಿ.ವೈ.ಎಫ್.ಐ ಅಧ್ಯಯನ ಶಿಬಿರಗಳು - ಕೋಲಾರ

ಇತ್ತೀಚೆಗೆ ಡಿ.ವೈಎಫ್.ಐ ಕೋಲಾರ ತಾಲೂಕು ಮಟ್ಟದ ಮತ್ತು ತಾಲೂಕಿನ ಒಂದು ಮಂಡಲ ವ್ಯಾಪ್ತಿಯ ಅಧ್ಯಯನ ಶಿಬಿರಗಳನ್ನು ಏರ್ಪಡಿಸಲಾಗಿತ್ತು.

ಕೋಲಾರ ತಾಲ್ಲೂಕು ಸಮಿತಿ ಸದಸ್ಯರಿಗೆ ಮತ್ತು ತಾಲ್ಲೂಕಿನ ಮುಖ್ಯಕಾರ್ಯಕರ್ತರಿಗೆ ಒಟ್ಟು 35 ಜನಕ್ಕೆ ಒಂದು ದಿನ ತರಬೇತಿ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಸಂವಿಧಾನ ಮತ್ತು ಕಾರ್ಯಕ್ರಮವನ್ನು ಡಿ.ವೈ.ಎಫ್. ಐ. ರಾಜ್ಯ ಅಧ್ಯಕ್ಷರಾದ ಕಾಂ. ಹೆಚ್.ಎನ್. ನಾಗಮೋಹನ್‌ದಾಸ್ ಬಾರೀ ಸರಳವಾಗಿ ತುಂಬಾ ಉದಾಹರಣೆಗಳನ್ನು ನೀಡುತ್ತಾ ಪರಿಣಾಮಕಾರಿಯಾಗಿ ನಡೆಸಿಕೊಟ್ಟರು. ನಂತರ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡಿದರು. ಮಧ್ಯಾಹ್ನದ ತರಗತಿಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಸಂಘಟನೆ, ಸ್ಥಳೀಯ ಸಮಸ್ಯೆಗಳು, ಅದಕ್ಕೆ ಪರಿಹಾರ [illegible] ತರಗತಿ ನಡೆಸಿ ಕೊಟ್ಟರು. ಕೋಲಾರ ಜಿಲ್ಲಾ ಎಸ್.ಎಫ್.ಐ ಅಧ್ಯಕ್ಷರಾದ ಎಂ.ವಿ. ನಾರಾಯಣ ಸ್ವಾಮಿ ಶುಭಕೋರಿ ಮಾತನಾಡುತ್ತಾ.. ಎಸ್.ಎಫ್.ಐ. ಮತ್ತು ಡಿ.ವೈಎಫ್‌ನ ಹಲವಾರು ಹೋರಾಟಗಳು ಜಂಟಿಯಾಗಿ ಚಿರ[illegible] ಬೇಕು ಎಂದು ವಿನಂತಿಸಿದರು. ಡಿ. ವೈ.ಎಫ್.ಐನ ತಾಲೂಕು ಸಮಿತಿಯ ಸಂಚಾಲಕರಾದ ನಾರಾಯಣ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಹಸಂಚಾಲಕರಾದ ವೆಂಕಟರಾಮ್ ಸ್ವಾಗತಿಸಿದರು.

ತಾಲ್ಲೂಕಿನ ಶಾಪುರ ಮಂಡಲದ ಅಧ್ಯಯನ ಶಿಬಿರ: ಮಂಡಲ ವ್ಯಾಪ್ತಿಯ ಶಿಬಿರ ದಿನಾಂಕ ಜೂನ್ 14,1993 ರಂದು ಮಂಡಲ ವ್ಯಾಪ್ತಿಯ ಹಳೆಯ ಸೋಮರಸನ ಹಳ್ಳಿಯಲ್ಲಿ ನಡೆಯಿತು. ಸುಮಾರು 75 ಜನ ಮಂಡಲ ವ್ಯಾಪ್ತಿಯ ಕಾರ್ಯಕರ್ತರು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಈ ಶಿಬಿರಕ್ಕೆ ರಾಜ್ಯ ಡಿ.ವೈ.ಎಫ್.ಐನ ಕಾರ್ಯದರ್ಶಿಗಳಾದ ಎಸ್.ವೈ. ಗುರುಶಾಂತ್ ಮುಖ್ಯ ಅತಿಥಿಯಾಗಿ ಹಾಜರಿದ್ದು ಸಂವಿಧಾನ ಕಾರ್ಯಕ್ರಮ - ಸಂಘಟನೆ ಬಗ್ಗೆ ಮಾತನಾಡಿದರು. ಡಿ.ವೈ.ಎಫ್.ಐ ಕೋಲಾರ ಜಿಲ್ಲಾ ಸಮಿತಿ ಸಹಕಾರ್ಯದರ್ಶಿಗಳಾದ ಎಂ.ವಿ. ನಾರಾಯಣಸ್ವಾಮಿ ಸ್ಥಳೀಯ ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರ ಸಂಘಟನೆಯ ವಿಸ್ತರಣೆಯ ಬಗ್ಗೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಹಳೆಯ ಸೋಮರಸನ ಹಳ್ಳಿಯ ಗ್ರಾಮ ಘಟಕವನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಎಚ್. ಗೋವಿಂದಪ್ಪ ಮತ್ತು ತಾಲ್ಲೂಕು ಸಮಿತಿಯ ಸದಸ್ಯರಾಗಿ ಗೋವಿಂದಪ್ಪ ಆರ್. ಇವರನ್ನು ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಇದೇ ಸಂದರ್ಭದಲ್ಲಿ ಈ ವ್ಯಾಪ್ತಿಯ ಸಾರ್ವಜನಿಕ ಸಮಸ್ಯೆಗಳನ್ನು ಬಸ್, ವಿದ್ಯುತ್, ಮುಂತಾದ 4 ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸಲು ತೀರ್ಮಾನಿಸಲಾಯಿತು.

ಡಿ.ವೈ.ಎಫ್.ಐ. ಸಂಘಟನೆಯ ಬಗ್ಗೆ ತಾಲೂಕು ಸಂಚಾಲಕ ನಾರಾಯಣಸ್ವಾಮಿ ಮಾತನಾಡಿದರು. ತಾಲೂಕು ಸಮಿತಿ ಸಹಸಂಚಾಲಕ ವೆಂಕಟರಾಮ್ ಸ್ವಾಗತಿಸಿ, ಗೋವಿಂದಪ್ಪ ವಂದಿಸಿದರು.

ಬಡರೈತ - ಕೃಷಿಕೂಲಿಕಾರರ ಸಂಘಟನೆ ಬೆಳೆಸಿ

-- ಕಾಂ ರಾಮಚಂದ್ರ ಪಿಳ್ಳೆ

ಕೃಷಿ ಕೂಲಿಕಾರರಿಂದ ಶ್ರೀಮಂತ ರೈತರವರಿಗೆ ಗ್ರಾಮೀಣ ರೈತಾಪಿ ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳು, ಆ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯುವುದು ಬಂಡವಾಳ ಶಾಹಿ ಭೂಮಾಲೀಕ ಪದ್ಧತಿಯನ್ನು ನಾಶ ಮಾಡುವ ಕರ್ಷಕ ಕ್ರಾಂತಿಯಿಂದ ಮಾತ್ರ ಸಾಧ್ಯ. ಆದರೆ ಆ ದಿಕ್ಕಿನತ್ತ ರೈತರ ಐಕ್ಯತೆಯನ್ನು ಸಾಧಿಸಿ ಅವರ ಜಾಗೃತಿಯನ್ನು ಬೆಳೆಸುವ ಕರ್ತವ್ಯ ನಮ್ಮ ಮೇಲಿದೆ. ರೈತಾಪಿಯ ಜನತೆಯ ಮೇಲೆ ಬಂಡವಾಳಶಾಹಿ ಭೂಮಾಲಿಕ ರಾಜಕೀಯ ಸಿದ್ಧಾಂತಗಳ ಪ್ರಭಾವ ಬೀರಿವೆ. ಆ ಪ್ರಭಾವದಿಂದ ಹೊರತರಲು ವಿಶಾಲವಾದ ಸಾಮೂಹಿಕವಾದ ಸ್ವತಂತ್ರವಾದ ರೈತ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘಟನೆಗಳ ಕಾರ್ಯಾಚರಣೆಯಿಂದ ಸಾಧ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು, ಅಖಿಲ ಭಾರತ ಕಿಸಾನ್ ಸಭಾದ ಹಣಕಾಸು ಕಾರ್ಯದರ್ಶಿಗಳೂ ಆದ ಕಾಂ.ಎಸ್. ರಾಮಚಂದ್ರಪಿಳ್ಳೆಯವರು ಹೇಳಿದ್ದಾರೆ. ಅವರು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳ ಮುಖಂಡರನ್ನುದ್ದೇಶಿ ಜೂನ್ 21 ರಂದು ಮಾತನಾಡುತ್ತಿದ್ದರು. ಯಾವುದೇ ರಾಜಕೀಯ ಪಕ್ಷದ ಒಡಿತವಿಲ್ಲದ ರೈತಾಪಿ, ಕೃಷಿಕೂಲಿಕಾರರ ಸಂಘಟನೆಗಳನ್ನು ಕಟ್ಟಲು ರಾಜ್ಯ ಸಮಿತಿಯಿಂದ ಕೆಳಹಂತದವರೆಗೆ ನಮ್ಮ ಕಾರ್ಯಾಚರಣೆಯಲ್ಲಿ ಸ್ವತಂತ್ರವಾದ ಪ್ರಜಾಪ್ರಭುತ್ವ ಕಾರ್ಯಾಚರಣೆಯ ಮುಖಾಂತರ ರೈತಾಪಿ ಜನತೆಯ ಜೀವನವನ್ನು ಬಾದಿಸುವ ಎಲ್ಲಾ ತರಹದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಲೇ, ಸರಕಾರದ ಎಲ್ಲಾ ಸೌಲಭ್ಯಗಳನ್ನು ಗ್ರಾಮೀಣ ದುಡಿಯುವ ಜನತೆಗೆ ಮುಟ್ಟಿಸಲು ಬೇಕಾದ ಎಲ್ಲಾ ಸಂಘ-ಸಂಸ್ಥೆಗಳನ್ನು ರಚಿಸಲು, ಈಗಿರುವ ಪಂಚಾಯಿತಿ, ಸಹಕಾರಿ ಸಂಘಟನೆಗಳಿಗೂ ಇತರ ಸಂಸ್ಥೆಗಳಲ್ಲಿ ಪಾಲುಗೊಳ್ಳುವಂತಾಗಬೇಕೆಂದು ಪಶ್ಚಿಮಬಂಗಾಳ, ಕೇರಳಾ, ತ್ರಿಪುರಾ ಕಿಸಾನ್ ಹಾಗೂ ಕೃಷಿ ಕೂಲಿಕಾರರ ಸಂಘಟನೆಯ ಅನುಭವವನ್ನು ಅವರು ವಿವರಿಸಿದರು.

ಭೂಮಿ, ಕೂಲಿ, ಅಗತ್ಯ ವಸ್ತುಗಳ ವಿತರಣೆ, ಸಾಲ, ನೀರಾವರಿ, ವಿದ್ಯುತ್, ವಿಮೆ ದೆಂಬಲಿತ ಬೆಲೆ, ವಸತಿ ಇರುವಂತಹ ಬೇಡಿಕೆಗಳು ಸೇರಿದಂತೆ ಗ್ರಾಮೀಣ ಜೀವನಕ್ಕೆ ಅವಶ್ಯಕವೆನಿಸುವ ಮಧ್ಯಮ ರೈತ, ಶ್ರೀಮಂತ ರೈತರನ್ನು ಅಣಿ ನೆರೆಸುವುದನ್ನು ಮೈಗೂಡಿಸಿಕೊಳ್ಳುವುದು ಹೇಗೆಂದು ಸರಳವಾಗಿ ವಿವರಿಸಿದರು.

ಇದೊಂದು ಅಪೂರ್ವವಾದ ಶಾಲೆಯಾಗಿತ್ತು. ಜೂನ್ 22 ರಂದು ಪ್ರಾಂತ ರೈತ ಸಂಘದ ಕಾರ್ಯಕಾರಿ ಸಮಿತಿ ಸಭೆ ಮುಂದುವರಿದು ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿತು.

ಆಗಸ್ಟ್ 5 ರಿಂದ 11 ರವರೆಗೆ ಕರಪತ್ರ, ಬೈಸಿಕಲ್ ಜಾತಾ, ಜೀಪ್ ಜಾತಾಗಳ ಮುಖಾಂತರ ಪ್ರಾಂತ ರೈತ ಸಂಘದ ಬ್ಯಾನರ್ ಅಡಿಯಲ್ಲಿ ಪ್ರಚಾರ ನಡೆಸಿ ಆಗಸ್ಟ್ 12 ರಂದು ಸಾಧ್ಯವಾದಷ್ಟು ಅತೀ ಹೆಚ್ಚಿನ ಪಂಚಾಯಿತಿ ಕೇಂದ್ರ ಹಾಗೂ ಪ್ರಮುಖ ಗ್ರಾಮಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸಲು ಕರೆ ಕೊಡಲಾಯಿತು. ಆಗಸ್ಟ್ ವಾರಾದ್ಯಂತ ಪ್ರಚಾರದಲ್ಲಿ ಆಯಾ ಜಿಲ್ಲೆಯ ಪದಾಧಿಕಾರಿಗಳೆಲ್ಲಾ ಪಾಲುಗೊಳ್ಳಬೇಕು ಹಾಗೂ ಕೋಮುವಾದಿ ಶಕ್ತಿ, ಬಿಜೆಪಿ ಹಾಗೂ ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತರುತ್ತಿರುವ ಕಾಂಗ್ರೆಸ್‌ನ್ನು ಗ್ರಾಮೀಣ ಬಹುಸಂಖ್ಯಾತರು ಅರ್ಥ ಮಾಡಿಕೊಳ್ಳುವಂತಾಗಬೇಕು ಆಗಸ್ಟ್19 ರ ಜೈಲ್‌ಭರೋ ಚಳುವಳಿಯಲ್ಲಿ ಹಾಗೂ ಭಾರತ್ ಬಂದ್ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲುಗೊಳ್ಳುವಂತಾಗಬೇಕು ಎಂದು ಕಾರ್ಯಸಮಿತಿ ತೀರ್ಮಾನಿಸಿತು.

ಆಗಸ್ಟ್ 19 ರಂದು ರಾಜ್ಯದಲ್ಲಿ ಕನಿಷ್ಟ 20,000 ರೈತರನ್ನು ಜೈಲ್ ಭರೋ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಎಂದು ರಾಜ್ಯ ಸಮಿತಿ ಅಂದಾಜು ಮಾಡಿದೆ.

ಇಡೀ ಗ್ರಾಮೀಣ ಕರ್ನಾಟಕದಲ್ಲಿ 'ಭಾರತ್ ಬಂದ್' ಚರ್ಚೆಯ ವಿಷಯವಾಗುವಂತೆ ಕರ್ನಾಟಕ ಪ್ರಾಂತ ರೈತ ಸಂಘಟನೆ ಶ್ರಮಿಸಬೇಕೆಂದು ರಾಜ್ಯ ಸಮಿತಿ ನಿರ್ಧರಿಸಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರಿಗೆ ರಾಜ್ಯ ಮಟ್ಟದ ಶಾಲೆಯನ್ನು ಅಕ್ಟೋಬರ್ ತಿಂಗಳಲ್ಲಿ ನಡೆಸಲಾಗುವುದು. ಕಾಂ ಎಸ್. ರಾಮಚಂದ್ರ ಪಿಳ್ಳೆ ಹಾಗೂ ಇತರ ಅಖಿಲ ಭಾರತ ಮುಖಂಡರು ಈ ಶಾಲೆಯಲ್ಲಿ ಪಾಠ ಮಾಡಲಿದ್ದಾರೆ ಎಂದು ತಿಳಿದು ಬಂದಿದೆ. ಇದಕ್ಕೆ ತಯಾರಿಯಾಗಿ ಜಿಲ್ಲಾವಾರು ಎರಡು ದಿನದ ಶಾಲೆಗಳು ನಡೆಯಲಿದೆ.

ಆದಿವಾಸಿಗಳ ಸಮಾವೇಶ

ಅಖಿಲ ಭಾರತ ಮಟ್ಟದಲ್ಲಿ ಆದಿವಾಸಿಗಳ ಸಮ್ಮೇಳನ ನಡೆಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಲಂಬಾಣಿ, ಸಿದ್ದಿ, ಇತರೆ ಆದಿವಾಸಿಗಳನ್ನು ಸಂಘಟಿಸಲಾಗಿದೆ. ಪ್ರಾಂತ ಕೃಷಿ ಕೂಲಿಕಾರ ಸಂಘಟನೆಯ ಜೊತೆ ಜಂಟಿ ಪ್ರಚಾರದೊಂದಿಗೆ ಡಿಸೆಂಬರ್ ತಿಂಗಳಲ್ಲಿ ರಾಜ್ಯ ಸಮಾವೇಶ ನಡೆಸಲು ತೀರ್ಮಾನಿಸಲಾಯಿತು.

ಮುದ್ರಣ ಕಾರ್ಮಿಕರ ಸಂಘದ 54ನೇ ವಾರ್ಷಿಕ ಮಹಾಸಭೆ

ಎಸ್.ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ 54ನೇ ವಾರ್ಷಿಕ ಮಹಾಸಭೆಯು ದಿನಾಂಕ ಜೂನ್ 27,1993 ನೇ ರವಿವಾರದಂದು ಮೈದಾನ ರಸ್ತೆಯಲ್ಲಿರುವ ಸಂಘದ ಕಚೇರಿಯಲ್ಲಿ ನಡೆಯಿತು. ಯೂನಿಯನ್ನಿನ ಅಧ್ಯಕ್ಷರಾದ ಕಾಂ. ಕೆ. ಮೂಸಬ್ಬರವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿ ಹಾಗೂ ಕೋಶಾಧಿಕಾರಿಯವರು ಕ್ರಮವಾಗಿ ಮಂಡಿಸಿದ ವಾರ್ಷಿಕ ವರದಿ ಹಾಗೂ ವಾರ್ಷಿಕ ಲೆಕ್ಕ ಪತ್ರಗಳನ್ನು ಸಭೆಯು ಕೂಲಂಕುಶವಾಗಿ ಪರಿಶೀಲಿಸಿ ಚರ್ಚೆ ನಡೆಸಿದ ಬಳಿಕ ಸರ್ವಾನುಮತದಿಂದ ಅಂಗೀಕರಿಸಿತು.

ಸಭೆಗೆ ಮುಖ್ಯ ಅಥಿತಿಗಳಾಗಿ ಆಗಮಿಸಿದ ದಕ್ಷಿಣ ಕನ್ನಡ ಜಿಲ್ಲಾ ಸಿಐಟಿಯುನ ಅಧ್ಯಕ್ಷರಾದ ಕಾಂ. ಬಿ. ಮಾಧವ ಇವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಇಂದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ಹಾಗೂ ಕೈಗಾರಿಕಾ ನೀತಿಯ ಪರಿಣಾಮವಾಗಿ ವಿಪರೀತವಾಗಿ ಬೆಲೆ ಏರುತ್ತಿರುವುದನ್ನು ವಿವರಿಸಿದರಲ್ಲದೇ ಕಳೆದ 2 ವರ್ಷಗಳಲ್ಲಿ ಸಾವಿರಾರು ಕಾರ್ಖಾನೆಗಳು ಮುಚ್ಚಲ್ಪಟ್ಟು ಲಕ್ಷಗಟ್ಟಲೇ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ ಎಂದರು.

ಡಂಕೆಲ್ ಪೇಟೆಂಟ್ ಆಕ್ಷನ್ ವರದಿಯನ್ನು ಕೇಂದ್ರ ಸರಕಾರವು ಅಗೀಕರಿಸಿದಲ್ಲಿ ಆಗುವ ಅನಾಹುತಗಳನ್ನು ಅವರು ವಿವರಿಸಿದರು.

ಪೆನ್‌ಷನ್ ಸ್ಕೀಂನ ಹೆಸರಿನಲ್ಲಿ ಕಾರ್ಮಿಕರ ಪ್ರಾವಿಡೆಂಟ್ ಫಂಡ್‌ನಲ್ಲಿರುವ 30 ಸಾವಿರ ಕೋಟಿ ಹಾಗೂ ಫ್ಯಾಮಿಲಿ ಪೆನ್ಶನ್ ಸ್ಕೀಂನಲ್ಲಿರುವ 5 ಸಾವಿರ ಕೋಟಿ ರೂಪಾಯಿಗಳನ್ನು ಲಪಾಯಿಸಲು ಯೋಚಿಸುತ್ತಿರುವುದನ್ನು ವಿವರಿಸಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕೋಮು ಗಲಭೆಗಳು, ಇವುಗಳನ್ನು ನಿಯಂತ್ರಿಸುವಲ್ಲಿ ಕೇಂದ್ರ ಸರಕಾರದ ವಿಫಲತೆಯನ್ನು ವಿವರಿಸಿದರು. ಅಲ್ಲದೆ ಜಾತ್ಯತೀತೆಯ ರಕ್ಷಣೆಗೋಸ್ಕರ ಕಾರ್ಮಿಕರು ಜಾಗ್ರತರಾಗಬೇಕಾದ ಕಾಲ ಸನ್ನಿಹಿತವಾಗಿದೆ ಎಂದರಲ್ಲದೆ ಈ ಬಗ್ಗೆ ಮುಂದೆ ನಡೆಸಲಿರುವ ಜುಲೈ 14 ರ ಅಖಿಲ ಭಾರತ ಮುಷ್ಕರ, ಆಗಸ್ಟ್ 19ರ ಜೈಲ್‌ಭರೋ ಕಾರ್ಯಕ್ರಮ ಹಾಗೂ ಸೆಪ್ಟೆಂಬರ್ 9 ರಂದು ನಡೆಯಲಿರುವ ಭಾರತ ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಪ್ರೆಸ್ ಕಾರ್ಮಿಕರಲ್ಲಿ ಅವರು ಮನವಿ ಮಾಡಿದರು.

ಬಳಿಕ ನೂತನ ವರ್ಷದ ಪದಾಧಿಕಾರಿಗಳನ್ನಾಗಿ ಈ ಕೆಳಗಿನವರನ್ನು ಆರಿಸಲಾಯ್ತು.

ಕೆ. ಮೂಸಬ್ಬ ಅಧ್ಯಕ್ಷರು, ಯು.ಪಿ. ಡಿಸೋಜ, ನಾರಾಯಣ ಶೆಟ್ಟಿ ಉಪಾಧ್ಯಕ್ಷರುಗಳು, ಬಿ. ಉಮಾನಾಥ್ ಕಾರ್ಯದರ್ಶಿ, ಕೆ. ಸದಾಶಿವ ಶೆಟ್ಟಿ ವಸಂತ ಕೆ., ಕೆ. ಮಂಜುನಾಥ ಸಹಕಾರ್ಯದರ್ಶಿ ಕೆ ಜನಾರ್ಧನ ಕೋಶಾಧಿಕಾರಿ ಅಲ್ಲದೆ ಹದಿನೈದು ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯ್ತು.

ಮಹಾಸಭೆಯಲ್ಲಿ ಹಲವು ಠರಾವುಗಳನ್ನು ಅಂಗೀಕರಿಸಲಾಯ್ತು.

ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಕೆ. ಮೂಸಬ್ಬನವರು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ನರಸಿಂಹರಾವ್ ಸರಕಾರವು ಅನುಸರಿಸುತ್ತಿರುವ ಹೊಸ ಆರ್ಥಿಕ ಹಾಗೂ ಕೈಗಾರಿಕಾ ನೀತಿಯ ವಿರುದ್ಧ ಕಾರ್ಮಿಕರು ಜಾಗೃತರಾಗಬೇಕಲ್ಲದೇ ಕೋಮುವಾದಿ ಪಕ್ಷಗಳು ಜನರಲ್ಲಿ ಕೋಮು ಭಾವನೆಗಳನ್ನು ಪ್ರಚೋದಿಸುತ್ತಿರುವುದರ ವಿರುದ್ಧ ಹೋರಾಟ ನಡೆಸಲು ಸಿದ್ಧರಾಗಬೇಕೆಂದು ಹೇಳಿದರಲ್ಲದೆ ಮುಂದೆ ಸಿಐಟಿಯುನ ನೇತೃತ್ವದಲ್ಲಿ ನಡೆಯುವ ಹೋರಾಟಗಳಿಗೆ ಸಂಪೂರ್ಣ ಬೆಂಬಲ ನೀಡಬೇಕೆಂದು ಪ್ರೆಸ್ ಕಾರ್ಮಿಕರಲ್ಲಿ ವಿನಂತಿಸಿದರು.



ನಿರುದ್ಯೋಗ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಎಸ್‌ಎಫ್‌ಐ ಅಧ್ಯಕ್ಷರ ಕರೆ

ಪ್ರಧಾನಮಂತ್ರಿಗಳನ್ನೊಳಗೊಂಡ ದೇಶದ ಆಡಳಿತ ನಡೆಸುತ್ತಿರುವ ಮಂತ್ರಿಗಳು, ಅಧಿಕಾರಿಗಳು ಭ್ರಷ್ಟಾಚಾರದ ತುತ್ತ ತುದಿಯಲ್ಲಿದ್ದಾರೆ. ಪ್ರಧಾನ ಮಂತ್ರಿಗಳು ಒಂದು ಕೋಟಿ ಲಂಚ ಪಡೆದಿರುವುದಾಗಿ ಹರ್ಷದ್ ಮೆಹತಾ ನೇರವಾಗಿ ಆರೋಪಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಸಕರು ರಾಜ್ಯದ ಮಂತ್ರಿಗಳು ಒಂದಿಲ್ಲೊಂದು ಭ್ರಷ್ಟಾಚಾರದಲ್ಲಿ ಶಾಮೀಲಾಗಿರುವುದು ಸಾಬೀತಾಗುತ್ತಿದೆ. ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಯುವಜನರಲ್ಲಿ ಅಸ್ಥಿರತೆಗೆ ಕಾರಣವಾಗಿದೆ ಇದರಿಂದ ಸಮಾಜದಲ್ಲಿ ದರೋಡೆ, ಭಯೋತ್ಪಾದಕತೆ ಇತ್ಯಾದಿ ಸಮಾಜ ವಿರೋಧಿ ಕೃತ್ಯಗಳಿಗೆ ಮಾರಾಗುತ್ತಿದೆ. ಇದಕ್ಕೆ ಸರಕಾರ ಹೊಸ ಆರ್ಥಿಕ ನೀತಿಯ ಕೊಡುಗೆ ದೊಡ್ಡ ರೀತಿಯಲ್ಲಿದೆ. ದೇಶದ ಅಭಿವೃದ್ಧಿಗೆ ತೊಡಕಾಗುವ ನಿರುದ್ಯೋಗ ಮತ್ತು ಭ್ರಷ್ಟಾಚಾರದ ವಿರುದ್ಧ ದೇಶಾದ್ಯಂತ ವಿದ್ಯಾರ್ಥಿಗಳ ಹೋರಾಟಕ್ಕೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರೆ ನೀಡಿದೆ. ಎಂದು ಅಖಿಲ ಭಾರತ ಅಧ್ಯಕ್ಷರಾದ ವೈ ವೆಂಕಟೇಶ್ವರರಾವ್ ತಿಳಿಸಿದರು. ಅವರು ಶಹಾಪೂರದಲ್ಲಿ ಎಸ್.ಎಫ್.ಐ ನ ಕರ್ನಾಟಕ ರಾಜ್ಯಮಟ್ಟದ ವಿದ್ಯಾರ್ಥಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ದೇಶದ ಏಕೈಕ ಬಲಿಷ್ಟ ವಿದ್ಯಾರ್ಥಿ ಸಂಘಟನೆ ಎಸ್.ಎಫ್.ಐ. ಮಾತ್ರ 1992 ರಲ್ಲಿ 22 ಲಕ್ಷ 50 ಸಾವಿರಕ್ಕೂ ಹೆಚ್ಚು ಸದಸ್ಯತ್ವ ಹೊಂದಿದ್ದು 1993 ರಲ್ಲಿ 25 ಲಕ್ಷ ಸದಸ್ಯತ್ವ ನೊಂದಾಯಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ತಿಳಿಸಿದರು. ಶಿಬಿರದ ವೇಳೆಯಲ್ಲಿ ನಡೆದ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಮಾತನಾಡಿದ ಚರಬಸವೇಶ್ವರ ಪೀಠದ ಸ್ವಾಮಿಗಳು ಮಾತಿನಂತೆ ಕೃತಿ ಇರಬೇಕು, ಸಮಾಜದಲ್ಲಿ ಶಾಂತಿ ಸೌಹಾರ್ದತೆ ನೆಲೆಸುವಂತಾಗಬೇಕು, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವ ಎಸ್.ಎಫ್.ಐ ಸಂಘಟನಾಕಾರರಿಗೆ ಶುಭಾಶಯಗಳೆಂದು ತಿಳಿಸಿದರು. ಸಮಾರೋಪ ಸಭೆಯ ಅತಿಥಿಗಳಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಮಾರುತಿ ಮಾನ್ಪಡೆ, ಚನ್ನಪ್ಪಾ ಆನೆಗುಂದಿ ಸ್ವಾಗತ ಸಮಿತಿಯ ಅಧ್ಯಕ್ಷ, ಈರಣ್ಣಾಗೌಡ ಮಲ್ಲಾಬಾದಿ, ಎಸ್.ಎಫ್.ಐ ನ ರಾಜ್ಯ ಕಾರ್ಯದರ್ಶಿ ಶಾಂತಾರಾಮ ನಾಯಕ, ಉಪಾಧ್ಯಕ್ಷ, ಮಂಜುನಾಥ, ಡಿ.ವೈ.ಎಫ್.ಐ ರಾಜ್ಯಕಾರ್ಯದರ್ಶಿ ಎಸ್.ವೈ. ಗುರುಶಾಂತ ಮುಂತಾದವರು ಭಾಗವಹಿಸಿದ್ದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಎಫ್.ಐ. ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ ವಹಿಸಿದ್ದರು.

ಪ್ರಾರಂಭದಲ್ಲಿ ರಾಯಣ್ಣಾ ಚನ್ನೂರ ಸ್ವಾಗತಿಸಿದರು. ಸಭೆಯ ವಂದನಾರ್ಪಣೆ ಅಮಲಪ್ಪ ದೇವಿನ ಕಟ್ಟಿ ಅರ್ಪಿಸಿದರು. ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷರಾದ ಈಶ್ವರಚಂದ್ರ ಕಾರ್ಯಕ್ರಮ ನಿರ್ವಹಿಸಿದರು.

ಬಾಗೇಪಲ್ಲಿಯಲ್ಲಿ ಆಸ್ಪತ್ರೆ ಸೌಲಭ್ಯಕ್ಕಾಗಿ ಹೋರಾಟ

ಬಾಗೆಪಲ್ಲಿ ತಾಲ್ಲೂಕು ಡಿ.ವೈ.ಎಫ್.ಐ ಮತ್ತು ಎಸ್.ಎಫ್.ಐ. ಸಮಿತಿಗಳ ಆಶ್ರಯದಲ್ಲಿ ಬಾಗೇಪಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಿಸಲು ಒತ್ತಾಯಿಸಿ ಅನಿರ್ದಿಷ್ಟ ಕಾಲದ ಧರಣಿ ಸತ್ಯಾಗ್ರಹವನ್ನು ಮಾಡಲಾಯಿತು. ಸುಮಾರು ಆರು ತಿಂಗಳಿಂದ ಐದು ಜನ ವೈದ್ಯರಿರುವ ಆಸ್ಪತ್ರೆಯಲ್ಲಿ ಕೇವಲ ಒಬ್ಬರು ಮಾತ್ರ ಕೆಲಸ ನಿರ್ವಹಿಸುತ್ತಿದ್ದು, ಕೆಲಸ ಮಾಡಲಾಗದೆ ರೋಗಿಗಳಿಗೆ ಬಹಳ ತೊಂದರೆಯಾಗಿತ್ತು. ಆಸ್ಪತ್ರೆಯಲ್ಲಿ ಔಷದಿ ಕೊಡದೆ, ಎಲ್ಲವನ್ನೂ ಅಂಗಡಿಗೆ ಬರೆದುಕೊಡುತ್ತಿದ್ದು, ಜವಾಬ್ದಾರಿಯುಳ್ಳ ಎಂ.ಎಲ್.ಎ. ಆಗಲಿ ಯಾರೇ ಆಗಲಿ ಮಾತಾಡುತ್ತಿಲ್ಲ. ಆಸ್ಪತ್ರೆಯ ಕ್ಷ-ಕಿರಣ ಯಂತ್ರವು ಕೆಟ್ಟುಹೋಗಿ 6 ವರ್ಷವಾದರೂ ಏನೂ ಕ್ರಮಕೈಗೊಂಡಿಲ್ಲದ್ದರಿಂದ ಅಂಬುಲೆನ್ಸ್ ಒದಗಿಸಲಿಲ್ಲವಾದ್ದರಿಂದ ಯುವಕರೇ ಈ ಬಗ್ಗೆ ಮುತುವರ್ಜಿ ವಹಿಸಿ ವಿಚಾರಿಸಿ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದಕೋಸ್ಕರ ಒತ್ತಾಯಿಸಿ ಧರಣಿ ಸತ್ಯಾಗ್ರಹವನ್ನು ದಿನಾಂಕ ಜೂನ್ 22,1993 ರಂದು ಆಚರಿಸಿದರು. ಸುಮಾರು 150 ಜನ ಯುವಕರು ಮತ್ತು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಡಿ.ಎಮ್.ಓ ಬಂದು ಎಲ್ಲ ಸಮಸ್ಯೆಗಳನ್ನು ಡಿ.ಹೆಚ್.ಓ ಗೆ ತಿಳಿಸುವುದಾಗಿ ಹೇಳಿದರೂ ಸಹ ಯುವಜನ-ವಿದ್ಯಾರ್ಥಿಗಳು ಕೇಳದೆ ಡಿ.ಹೆಚ್.ಓ ರವರೇ ಬರಬೇಕು ಎಂದು ಪಟ್ಟು ಹಿಡಿದಾಗ ರಾತ್ರಿ 11-30 ಗಂಟೆಗೆ ಡಿ.ಹೆಚ್.ಓ ಸಾಹೇಬರವರು ಬಂದರು. ಬೇಡಿಕೆಗಳನ್ನು ಮುಂದಿಟ್ಟು ಹತ್ತು ದಿನದ ಒಳಗೆ ಪರಿಹರಿಸಬೇಕೆಂದು ಯುವಜನರು ಒತ್ತಾಯಿಸಿದರು. ಡಿ.ಹೆಚ್.ಓ ರವರು ಹದಿನೈದು ದಿನದ ಒಳಗೆ ಪರಿಹರಿಸುತ್ತೇವೆಂದು ಹೇಳಿದಾಗ ಹದಿನೈದು ದಿನದೊಳಗೆ ಕ್ರಮಕೈಗೊಳ್ಳದಿದ್ದರೆ ಮತ್ತೆ ತೀವ್ರ ರೂಪದಲ್ಲಿ ಪಿಕೆಟಿಂಗ್ ಮಾಡಲಾಗುತ್ತದೆ ಎಂದು ಹೇಳಿ ಧರಣಿಯನ್ನು ಮುಕ್ತಾಯ ಗೊಳಿಸಲಾಯಿತು. ಸತ್ಯಾಗ್ರಹದಲ್ಲಿ ಡಿ.ವೈ.ಎಫ್.ಐ ಅಧ್ಯಕ್ಷರಾದ ಮಹಮದ್ ಅಕ್ರಂ, ಕಾರ್ಯದರ್ಶಿ ಭಾಸ್ಕರರೆಡ್ಡಿ ಮತ್ತು ಎಸ್.ಎಫ್.ಐ. ಅಧ್ಯಕ್ಷರಾದ ಜಿ.ಎನ್. ಮದ್ದಿರೆಡ್ಡಿಯವರು ಭಾಗವಹಿಸಿದ್ದರು.

ಬೆಲೆಸೂಚ್ಯಂಕದಲ್ಲಿ ಮೋಸ ಸಿಐಟಿಯು ಟಿಪ್ಪಣಿ

ಆಗಸ್ಟ್ 1992ರ ಗ್ರಾಹಕ ಬೆಲೆ ಸೂಚ್ಯಂಕವನ್ನು ಪ್ರಕಟಿಸುವಲ್ಲಿ ಕರ್ನಾಟಕ ರಾಜ್ಯ ಸರಕಾರದ ವಿಳಂಬ ನೋಡಿ ಹಲವು ಸಂದೇಹಗಳು ಎದ್ದಿದ್ದವು. 1991ರಲ್ಲಿ ರಾಜ್ಯದಲ್ಲಿ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕ 191 ಪಾಯಿಂಟುಗಳಷ್ಟು ಏರಿತು (976 ರಿಂದ1167ಕ್ಕೆ). 1992ರಲ್ಲಿ ಬೆಲೆಗಳು ಇನ್ನೂ ವೇಗವಾಗಿ ಏರುತ್ತಿದ್ದವು. ಆದರೆ ಸೂಚ್ಯಂಕ 142 ಪಾಯಿಂಟುಗಳಷ್ಟೇ ಏರಿದವು (1167 ರಿಂದ 1309ರವರೆಗೆ) ಕನಿಷ್ಠ ಕೂಲಿ ವಲಯದಲ್ಲಿ ತುಟ್ಟಿಭತ್ಯೆ ಈ ಸೂಚ್ಯಂಕವನ್ನು ಆಧರಿಸಿರುತ್ತದೆ.

ಸೂಚ್ಯಂಕ ಆಧಾರವರ್ಷವನ್ನು 1960 ರಿಂದ 1987-88 ಕ್ಕೆ ಬದಲಿಸಲು ಸಿಐಟಿಯು ವಿರೋಧದ ಬಗ್ಗೆ ಸರಕಾರಕ್ಕೆ ಮನವಿ ನೀಡಲು ಮಾಹಿತಿ ಸಂಗ್ರಹಿಸಲು ರಾಜ್ಯದ 3 ಕೇಂದ್ರಗಳ ಅಂಕೆ - ಸಂಖ್ಯೆಗಳನ್ನು ಪರಿಶೀಲಿಸುವಾಗ ರಾಜ್ಯದ ಸರಾಸರಿ ಸರಕಾರ ಪ್ರಕಟಿಸಿದಂತೆ 1309 ಅಲ್ಲ, 1360 ಆಗುತ್ತದೆ ಎಂಬುದು ನಮ್ಮ ಗಮನಕ್ಕೆ ಬಂತು.

ಈ ಬಗ್ಗೆ ಸಿಐಟಿಯುವಿನಿಂದ ಒಂದು ನಿಯೋಗ ಜುಲೈ 3 ರಂದು ಅಂಕೆ - ಸಂಖ್ಯೆ ಇಲಾಖೆಯ ನಿರ್ದೇಶಕ ಡಾ. ಶಾಂತಪ್ಪರವರನ್ನು ಭೇಟಿ ಮಾಡಿತು. ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ನೇತೃತ್ವದದ ಈ ನಿಯೋಗದಲ್ಲಿ ಕೆ.ವಿ. ಶ್ರೀನಿವಾಸ್ ಹಾಗೂ ಕೆ. ಶಂಕರ್ ಇದ್ದರು. ಸೂಚ್ಯಂಕವನ್ನು ಕೃತಕವಾಗಿ ಕೆಳಗೆ ತರಲಾಗಿದೆ ಎಂಬ ಸಿಐಟಿಯು ಆಪಾದನೆಗೆ ಪ್ರತಿಕ್ರಿಯಿಸುತ್ತಾ ನಿರ್ದೇಶಕರು ಸೂಚ್ಯಂಕದ ವಿವಿಧ ಅಂಶಗಳಿಗೆ ಬೇರೆ-ಬೇರೆ ಒತ್ತು ನೀಡಿರುವ ಒಂದು ಸರಾಸರಿಯನ್ನು ಲೆಕ್ಕ ಮಾಡಲಾಗಿತ್ತು ಎಂದರು. ಆದರೂ ಕೂಡಾ ಸೂಚ್ಯಂಕದಲ್ಲಿ ಅಷ್ಟೊಂದು ವ್ಯತ್ಯಾಸ ಬರಲು ಸಾಧ್ಯವಿಲ್ಲ ಎಂದು ಕಾಂ. ವಿ.ಜೆ.ಕೆ. ಹೇಳುತ್ತಾರೆ. ಆದ್ದರಿಂದ ಸರಾಸರಿ ಲೆಕ್ಕಹಾಕುವಲ್ಲಿ ಮೋಸವಿರಬೇಕು ಎಂದು ಊಹಿಸಲಾಗಿದೆ. ಈ ಬಗ್ಗೆ ಸರಿಯಾದ ವಿವರಣೆ ನೀಡಬೇಕೆಂದು ಸಿಐಟಿಯು ಒತ್ತಾಯಿಸಿದೆ. ತೃಪ್ತಿಕರ ವಿವರಣೆ ನೀಡದಿದ್ದರೆ ಕಾರ್ಮಿಕರು ರಾಜ್ಯದೆಲ್ಲೆಲ್ಲಾ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಹೇಳಿದೆ.

ಕೇಂದ್ರ	1992ರಲ್ಲಿ ಸರಾಸರಿ ಮಾಸಿಕ ಸೂಚ್ಯಂಕ
ಬಳ್ಳಾರಿ	1244
ಭದ್ರಾವತಿ	1460
ದಾವಣಗೆರೆ	1330
ಗುಲ್ಬರ್ಗಾ	1437
ಹರಿಹರ	1327
ಹಾಸನ	1422
ಮಂಡ್ಯ	1250
ಮಂಗಳೂರು	1429
ಮೈಸೂರು	1394
ಬೆಂಗಳೂರು	1303
ರಾಜ್ಯದ ಸರಾಸರಿ	1360

“ನಾವೇ ಮುಂದಿನ ಆಡಳಿತಗಾರರು” ಸಾಧಿಸಲು ಸೋತ ಬಿ.ಜೆ.ಪಿ

ಬೆಂಗಳೂರು ಅಧಿವೇಶನ ಬಯಲಿಗೆಳೆದ ಬಿಜೆಪಿಯ ನಿಜಸ್ವರೂಪ

-- ಕಾಂ. ಪ್ರಕಾಶ್ ಕಾರಾಟ್

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಮಂಡಳಿ ಅಧಿವೇಶನದಿಂದ ಹೊಸತೇನೂ ಹೊರಹೊಮ್ಮಿಲ್ಲ. ದಿಲ್ಲಿ ದರ್ಬಾರಿನ ತಮ್ಮ ದಿನಗಳು ಇನ್ನೇನು ಸಮೀಪಿಸಿಯೇ ಬಿಟ್ಟಿವೆ ಎಂಬ ಅವರ ವಿಪರೀತ ನಿರೀಕ್ಷೆಯ ವಾತಾವರಣವಷ್ಟೇ ಹೊಸದೆನ್ನಬಹುದಾದ ಸಂಗತಿ. ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶಗಳಲ್ಲಿ ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಮುಖಂಡರು ಅತ್ಯಂತ ಶ್ರಮಪಟ್ಟು ಇಂತಹ ನಿರೀಕ್ಷೆಯೆಬ್ಬಿಸಿದ್ದಾರೆ. ಇನ್ನು ಮುಂದೆ ತಮ್ಮದು ಕೇವಲ ಅಧಿಕಾರಕ್ಕಾಗಿ ಕಾದಿರುವ ಪಕ್ಷವಲ್ಲ, ಸದ್ಯ ಭವಿಷ್ಯತ್ತಿನಲ್ಲೇ ಅಧಿಕಾರ ನಡೆಸುವ ಪಕ್ಷ ಎಂಬ ಭಾವನೆ ಇಡೀ ಅಧಿವೇಶನವನ್ನು ವ್ಯಾಪಿಸಿದಂತಿತ್ತು. ಆದ್ದರಿಂದ ಅಡ್ವಾಣಿಯವರ ಅಧ್ಯಕ್ಷೀಯ ಭಾಷಣದಿಂದ ಹಿಡಿದು, ಸಾಮಾಜಿಕ ಧೋರಣೆಯ ಹೇಳಿಕೆಯ ವರೆಗೆ ಎಲ್ಲದರಲ್ಲೂ ತಮ್ಮದು ಆಳ್ವಿಕೆ ನಡೆಸಬಲ್ಲ ಜವಾಬ್ದಾರಿಯುತ ಪಕ್ಷ ಎಂದು ನಂಬಿಸುವ ಪ್ರಯತ್ನ ಎದ್ದು ಕಾಣುತ್ತದೆ.

ಆದರೆ ಈ ನಿಲುವು ಎಷ್ಟೊಂದು ವಿರೋಧಾಭಾಸಗಳಿಂದ ಕೂಡಿದೆಯೆಂಬುದು ಈ ಭಾಷಣಗಳನ್ನು ಅವರಿಗೆ ನಿರ್ಣಯಗಳನ್ನು ಹತ್ತಿರದಿಂದ ಪರಿಶೀಲಿಸಿದಾಗ ಕಾಣುತ್ತದೆ. ರಾಷ್ಟ್ರೀಯ ಪ್ರಶ್ನೆಗಳೆಲ್ಲದರ ಬಗ್ಗೆಯೂ ತಮ್ಮಲ್ಲಿ ವಿಶ್ವಾಸಾರ್ಹ ಪರ್ಯಾಯ ನೀತಿಗಳಿವೆ ಎಂಬ ಭಾವನೆ ಹರಡುವ ಪ್ರಯತ್ನದ ನಡುವೆ ರಾಮದೇವಸ್ಥಾನ ಆಧಾರಿತ ಕೋಮುವಾದೀ ವಿಚಾರವೇ ಈಗಲೂ ಬಿಜೆಪಿಯ ಏಕಮಾತ್ರ ಕೇಂದ್ರ ಪ್ರಶ್ನೆ ಎಂಬ ಅಂಶ ಮತ್ತೆ-ಮತ್ತೆ ಈ ಅಧಿವೇಶನದಲ್ಲೇ ಕಂಡು ಬಂತು.

> **ಕೇಂದ್ರದಲ್ಲಿ ಆಳುವ ಪಕ್ಷವಾಗುವ ಕನಸು ನನಸಾಗುವ ಮೊದಲೇ ಅಧಿಕಾರಕ್ಕಾಗಿ ಇಂತಹ ಕಿತ್ತಾಟ ಬಿಜೆಪಿ ಕೂಡಾ ಒಂದು ಸಮಯಸಾಧಕ ಬೂರ್ಜ್ವಾ ಪಕ್ಷವಲ್ಲದೆ ಬೇರೇನೂ ಅಲ್ಲ ಎಂಬುದನ್ನು ಬಯಲಿಗೆಳೆದಿದೆ.**

ಅದೇ ಜೀವಾಳ

'ಹಿಂದುತ್ವ'ವೇ ಬಿಜೆಪಿಯ ಅಸ್ತಿತ್ವದ ಜೀವಾಳವೆಂಬುದು ಅಡ್ವಾಣಿಯವರ ಭಾಷಣದಲ್ಲಿ ಸ್ಪಷ್ಟವಾಗಿ ಕಂಡುಬಂತು. “ಹಿಂದುತ್ವ ನಮ್ಮ ಪ್ರಕಾರ ಈ ದೇಶದ ಮೌಲ್ಯಗಳು, ನೈತಿಕತೆ ಹಾಗೂ ಆಕಾಂಕ್ಷೆಗಳಿಗೆ ಭಾರತ ವರ್ಷದ ನಾಗರಿಕತೆಗೆ ನಮ್ಮ ಬದ್ಧತೆಯನ್ನು ಸಾರುವ ಸಂಕ್ಷಿಪ್ತ ಪದ" ಎಂಬ ಒಂದು ಹೊಸ ಅಂಶ ಬಿಟ್ಟರೆ ಬೇರೆಲ್ಲಾ ಎಂದಿನಂತೆ ಖೋಟಾ- ಜಾತ್ಯಾತೀತತೆ, ಅಲ್ಪ ಸಂಖ್ಯಾಕವಾದ ಇತ್ಯಾದಿ ಪದಪುಂಜಗಳ ಪುನರಾವರ್ತನೆಯಷ್ಟೇ ಕಂಡುಬಂತು.

ಅಂದರೆ ಬಿಜೆಪಿ ರಾಮದೇವಸ್ಥಾನವನ್ನು ಅಯೋಧ್ಯೆಯ ವಿವಾದಗ್ರಸ್ತ ಸ್ಥಳದಲ್ಲೇ ಕಟ್ಟಬೇಕೆನ್ನುವುದು, ಸಂವಿಧಾನದ 370 ನೇ ಕಲಮನ್ನು ರದ್ದುಮಾಡಬೇಕೆನ್ನುವುದು ಹಾಗೂ ಬಾಂಗ್ಲಾದೇಶಿ ವಲಸೆಗೆ ಕೋಮುವಾದೀ ತಿರುವು ನೀಡಬಯಸುವುದು - ಇವೆಲ್ಲಾ ಇದೇ 'ಹಿಂದುತ್ವ'ಕ್ಕೆ ಬದ್ಧತೆಯ ಸಂಕೇತಗಳು! ಬಿಜೆಪಿ ಮತೀಯ ಪ್ರಭುತ್ವವನ್ನು ತಿರಸ್ಕರಿಸುತ್ತದೆ ಎಂದು ಸಾಧಿಸಲು ಅಡ್ವಾಣಿಯವರು ಬಹಳ ತಿಣುಕಬೇಕಾಯಿತು. ಭಾರತದಲ್ಲಿ ಬಹುಪಾಲು ಹಿಂದೂಗಳಿರುವದರಿಂದಲೇ ಅದು ಜಾತ್ಯತೀತವಾಗಿದೆ. ಎಂಬ ವಾದ ಸರಣಿಯ ಮೂಲಕ ತಾವು ಮತೀಯ ಪ್ರಭುತ್ವವನ್ನು ವಿರೋಧಿಸುತ್ತೇವೆ ಎಂದು ಸಾಬೀತು ಪಡಿಸಲು ಅವರು ಹೆಣಗಿದರು.

ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಅವರ ಸೂತ್ರ ಏನು? ಮಾಜಿ ಸೈನಿಕರನ್ನು ಕಾಶ್ಮೀರ ಕಣಿವೆಯಲ್ಲಿ ನೆಲೆಗೊಳಿಸಿ “ಒಂದು ಹೊಸ ಭಾರತೀಯ ಭದ್ರತಾ ವಲಯ ಸೃಷ್ಟಿಸುವುದು". ಇದರಲ್ಲಿ ಇಸ್ರೇಲಿ ವಿದೇಶಾಂಗ ಮಂತ್ರಿ ಅವರಿಗೆ ಇತ್ತೀಚೆಗೆ ನೀಡಿದ ಸಲಹೆಯ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಮುಂಬೈಯಲ್ಲಿನ ಮಾರ್ಚ್ ಸ್ಫೋಟಗಳನ್ನು ಎತ್ತಿ ತೋರಿದ ಬಿಜೆಪಿ.ಮುಖಂಡರು ಅದೇ ನಗರದಲ್ಲಿ ತನ್ನ ಮಿತ್ರ ಶಿವಸೇನೆಯ ನೇತೃತ್ವದಲ್ಲಿ 600 ಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾದ ಭಯಾನಕ ಗಲಭೆಗಳ ಬಗ್ಗೆ ಚಕಾರವೆತ್ತದೆ ಇತ್ತೀಚಿನ ಇತಿಹಾಸದಲ್ಲಿ ಭಯಾನಕವಾದ ಈ ಮುಸ್ಲಿಂ- ವಿರೋಧಿ ಹತ್ಯಾಕಾಂಡದಲ್ಲಿ ತಾವೂ ಶಾಮೀಲು ಎಂಬುದನ್ನು ಬಯಲುಗೊಳಿಸಿಕೊಂಡರು.

“ಉದಾರೀಕರಣ”ಕ್ಕೆ ಹಾರ್ದಿಕ ಬೆಂಬಲ'

ಈ ಅಧಿವೇಶನದಲ್ಲಿ ಪ್ರತಿಪಾದಿಸಿದ ಆರ್ಥಿಕ ನೀತಿ ಬಿಜೆಪಿ ಒಂದು ಬಲಪಂಥೀಯ ಪ್ರತಿಗಾಮಿ ಪಕ್ಷ ಎಂಬುದನ್ನು ಮತ್ತೊಮ್ಮೆ ಎತ್ತಿ ತೋರಿತು. 'ಜಾಗತೀಕರಣ' ಕ್ಕಿಂತ ಮೊದಲು 'ಆಂತರಿಕ ಉದಾರೀಕರಣ' ಎಂದು ಮತ್ತೊಮ್ಮೆ ಅಡ್ವಾಣಿಯವರು ಪ್ರತಿಪಾದಿಸಿದರೂ ಕಾಂಗ್ರೆಸ್(ಐ)ನ ಉದಾರೀಕರಣಕ್ಕೆ ಬಿಜೆಪಿಯ ಸಂಪೂರ್ಣ ಬೆಂಬಲವಿದೆಯೆಂಬ ಅಂಶವನ್ನು ಮರೆಮಾಚಲು ಬಿಜೆಪಿ ಮತ್ತೊಮ್ಮೆ ವಿಫಲಗೊಂಡಿತು. ಏಕೆಂದರೆ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮುಕ್ತ ಅವಕಾಶ, ವಿದೇಶೀ ಸಾಲದ, ಮೂಲಕ 'ಜಾಗತೀಕರಣ'ವಿಲ್ಲದೆ ಆಂತರಿಕವಾಗಿ 'ಉದಾರೀಕರಣ'ನಡೆಸುವುದು ಹೇಗೆ ಸಾಧ್ಯ ಎಂಬುದನ್ನು ವಿವರಿಸಲು ಬಿಜೆಪಿಗೆ ಈಗಲೂ ಆಗಿಲ್ಲ.

ದೇಶದ ಭವಿಷ್ಯತ್ತನ್ನೇ ಬದಲಿಸುವ ಹತ್ತು ವರ್ಷಗಳ ಒಂದು 'ಭವ್ಯ ಯೋಜನೆ' ಯನ್ನು ಅಡ್ವಾಣಿ ಸಾರಿದರು. ನಾಲ್ಕು ಮೂಲಭೂತ ಕರ್ತವ್ಯ ನೆರವೇರಿಸಿದರೆ ಇದು ಸಾಧ್ಯವಂತೆ. ಅವೆಂದರೆ 1) ಪ್ರತಿ ಹಳ್ಳಿ-ಪಟ್ಟಣಕ್ಕೆ ಸಾಕಷ್ಟು ನೀರು 2) ಪ್ರತಿಯೊಬ್ಬರಿಗೂ ಸಾಕಷ್ಟು ಆಹಾರ 3) ಪ್ರತಿ ಕಾರ್ಖಾನೆ ಮನೆಗೆ ಸಾಕಷ್ಟು ವಿದ್ಯುತ್ 4) ದೂರಸಂಪರ್ಕವೂ ಸೇರಿದಂತೆ ತ್ವರಿತವಾದ, ಅಗ್ಗವಾದ ಆಧುನಿಕ ಸಂಪರ್ಕ ವ್ಯವಸ್ಥೆ.

ಈ ನಾಲ್ಕು ಕರ್ತವ್ಯಗಳನ್ನು ಈಗಿನ ಆಸ್ತಿ ಸಂಬಂಧಗಳನ್ನು ವರ್ಗ ಸಂಬಂಧಗಳನ್ನು ಬದಲಿಸದೆಯೇ ಈಡೇರಿಸಬೇಕು! ಸಹಜವಾಗಿಯೇ ದೊಡ್ಡ ಬಂಡವಾಳಗಾರರ ವರ್ತನೆಗಳ ಬಗ್ಗೆ ಟೀಕೆಯ ಒಂದೂ ಮಾತಿಲ್ಲ, ಆರ್ಥಿಕ ಅಸಮಾನತೆಗಳನ್ನು ತಗ್ಗಿಸುವ ಮಾತಿಲ್ಲ. ಕಪ್ಪು ಹಣವನ್ನು ಬಯಲಿಗೆಳೆಯುವ ಮಾತು ಕೂಡಾ ಇಲ್ಲ. ಆದರೆ ಉತ್ಪಾದನೆ ಹೆಚ್ಚಿಸುವ, ಅದಕ್ಕಾಗಿ ದೊಡ್ಡ ಬಂಡವಾಳದ ಮೇಲಿನ ಹತೋಟಿ, ಮಿತಿಗಳನ್ನೆಲ್ಲಾ ತೆಗೆಯುವುದು ಅಗತ್ಯ ಎಂಬ ಮಾತು ಮಾತ್ರ ಧಾರಾಳವಾಗಿದೆ. ದೊಡ್ಡ ಬಂಡವಾಳಿಗಾರರ ಗುತ್ತೇದಾರಿಗಳ ಗುಂಪುಗಳ ಹಾರ್ದಿಕ ಸ್ವಾಗತ ಗಿಟ್ಟಿಸುವ ನೀತಿಗಳಿವು. ಬಿಜೆಪಿಯವರೂ ಸ್ವದೇಶಿ ಮಾತನ್ನಾಡುತ್ತಾರೆ ಎಂದರೆ ವಿದೇಶೀ ಬಂಡವಾಳವನ್ನು ವಿರೋಧಿಸುತ್ತಾರೆ ಎಂದರ್ಥವಲ್ಲ ಎಂದು ಸ್ಪಷ್ಟ ಪಡಿಸಲು ಅಡ್ವಾಣಿಯವರು ಬಹಳ ಹೆಣಗಿದರು. ಅಷ್ಟೇ ಅಲ್ಲ ವಿದೇಶೀ ಬಂಡವಾಳವನ್ನು ನಮ್ಮ ಉದ್ದಿಮೆಗಳೊಂದಿಗೆ ಸರಿಸಮಾನವಾಗಿ ಕಾಣಲಾಗುವುದು, ಅವರಿಗೆ ಆದ್ಯತೆ ನೀಡುವುದಿಲ್ಲ ಅಷ್ಟೆ ಎಂದೂ ಅಡ್ವಾಣಿ ಸಾರಿದರು. ವಿದೇಶೀ ಬಂಡವಾಳಿಗರೂ ಕೂಡಾ ವಿಶೇಷ ಆದ್ಯತೆಯನ್ನೇನೂ ಕೇಳುತ್ತಿಲ್ಲ. ಆದ್ದರಿಂದ ಅಡ್ವಾಣಿಯವರು 'ಜಾಗತೀಕರಣ'ವನ್ನು ಮಾತಲ್ಲಿ ವಿರೋಧಿಸಿದರೂ ಕಾರ್ಯತಃ ವಿದೇಶೀ ಬಂಡವಾಳಿಗರ ಬೇಡಿಕೆಗಳಿಗೂ ದನಿ ಗೂಡಿದರು.

ಬಿಜೆಪಿ ಮುಖಂಡತ್ವದಲ್ಲಿ ಈ ಬಗ್ಗೆ ಇರುವ ಸಂದಿಗ್ಧತೆಯೂ ಈ ಅಧಿವೇಶನದಲ್ಲಿ ವ್ಯಕ್ತಗೊಂಡಿತು. ಮುರಳಿ ಮನೋಹರ ಜೋಷಿ ತಮ್ಮ ವಿದಾಯ ಭಾಷಣದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಭಾರತವನ್ನು ಶೋಷಿಸದಂತೆ ತಡೆಯಬೇಕು ಎಂದು ಜೋರಾಗಿ ಆಗ್ರಹ ಪಡಿಸಿ “ಸ್ವದೇಶಿ" ಯ 'ಶುದ್ಧತೆ'ಯನ್ನು ಕಾಪಾಡಲು ಯತ್ನಿಸಿದರು. ಇವೆರಡರಲ್ಲಿ ಅಡ್ವಾಣಿಯವ ನಿಲುವಿಗೆ ಮಾರುಕಟ್ಟೆ ದೊಡ್ಡದು ಎಂಬುದು ಸ್ಪಷ್ಟ. ಇಲ್ಲವಾದರೆ ತಮ್ಮದು ಭವಿಷ್ಯದ ಆಳುವ ಪಕ್ಷ ಎಂದು ತೋರಿಸಿಕೊಡುವಲ್ಲಿ ದೊಡ್ಡ ಬಂಡವಾಳಶಾಹಿಗಳ ಬೆಂಬಲ ಪಡೆಯುವುದು ಹೇಗೆ ಸಾಧ್ಯ?

ಅದೇ ಕಪ್ಪುಹಣದ ಬಲ

ಬಿಜೆಪಿ ಅಧಿವೇಶನದ ಸಮಯದಲ್ಲೇ ಹರ್ಷದ್ ಮೆಹ್ತಾರ ಒಂದು ಕೋಟಿ ರೂ ಕೊಡುಗೆ ದೊಡ್ಡ ಸುದ್ದಿ

ಅಡ್ವಾಣಿಯವರೇ ನಿಮ್ಮ ಪೂರ್ವ ಇತಿಹಾಸದ ಬಗ್ಗೆ ಉತ್ತರಿಸುತ್ತೀರಾ?

ಜಿ.ವಿ. ಶ್ರೀ ರಾಮರೆಡ್ಡಿ

ದಿನಾಂಕ ಜೂನ್ 18 ರಿಂದ 21 ರವರೆವಿಗೂ ಬೆಂಗಳೂರಿನಲ್ಲಿ ನಡೆದ ಭಾರತೀಯ ಜನತಾ ಪಕ್ಷದ ಹದಿನಾಲ್ಕನೇ ರಾಷ್ಟ್ರ ಕಾರ್ಯಕಾರಿ ಸಮಿತಿಯ ಅಧಿವೇಶನ ಕೊನೆಯಲ್ಲಿ ಹಿಂದಿನ ಅಧ್ಯಕ್ಷ ಡಾ. ಮುರಳೀ ಮನೋಹರ ಜೋಷಿಯವರಿಂದ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿದ ನಂತರ ಸುದ್ದಿಗಾರರೊಡನೆ ಮಾತನಾಡಿದ ಶ್ರೀ ಲಾಲ್ ಕೃಷ್ಣ ಅಡ್ವಾಣಿಯವರು ನಮಗೆ ಅಧಿಕಾರ ಸಿಕ್ಕಿದರೆ ಈ ದೇಶವನ್ನು ದೊಂಬಿರಹಿತ ಮತ್ತು ಋಣಮುಕ್ತವನ್ನಾಗಿ ಮಾಡುತ್ತೇವೆಂದು ದೇಶದ ಜನತೆಗೆ ಆಶ್ವಾಸನೆ ಇತ್ತಿದ್ದಾರೆ. ಇದು ರಾಜಕೀಯ ಪಕ್ಷವಾಗಿ ಬಿಜೆಪಿ ಈ ಶತಮಾನದಲ್ಲಿ ಹೇಳಿರುವ ಅತಿ ದೊಡ್ಡ ಸುಳ್ಳುಗಳಲ್ಲಿ ಒಂದು. ಹಾಗೆ ಈ ಎಲ್.ಕೆ. ಅಡ್ವಾಣಿ ಅವರು ಭಾರತದ ಜನತೆಗೆ ಹಲವಾರು ರೀತಿಯಲ್ಲಿ ಆಶ್ವಾಸನೆ ಕೊಟ್ಟು ಮೋಸ ಮಾಡಿರುವುದರಲ್ಲಿ ಇದು ಒಂದು. ಸಾರ್ವಜನಿಕ ಜೀವನದಲ್ಲಿ ತಾನೊಬ್ಬ ಪರಿಶುದ್ಧನೆಂದು ಸ್ವಯಂ ಪ್ರಚಾರ ಮಾಡಿಕೊಳ್ಳುವ ಎಲ್.ಕೆ. ಅಡ್ವಾಣಿಯವರು ಇಂತಹ ಅಪ್ಪಟ ಸುಳ್ಳುಗಳ ಮುಖಾಂತರ ಏನನ್ನು ಸಾಧಿಸಲು ಹೊರಟಿದ್ದಾರೆ ಎಂಬ ವಿಷಯ ಎಲ್ಲರಿಗೂ ತಿಳಿದಿರುವುದಾದರೂ ಅಧಿಕಾರ ಲಾಲಸೆಗೆ ಸಾರ್ವಜನಿಕ ಜೀವನವನ್ನು ಈ ರೀತಿ ಅಪ್ರಾಮಾಣಿಕಗೊಳಿಸುವುದು ಸಾರ್ವಜನಿಕ ಜೀವನಕ್ಕೆ ಮಾಡಿದ ಅಪಚಾರವಾಗುತ್ತದೆ. ಇನ್ನೂ ಇವರು ಈ ದೇಶದ ಜನತೆಗೆ ನೀಡಿದ ಈ ರೀತಿಯ ನಯವಂಚಕತನದ ಆಶ್ವಾಸನೆಗಳನ್ನು ಸಾರ್ವಜನಿಕ ಜೀವನದ ಬಗ್ಗೆ ಜವಾಬ್ದಾರಿ ಇರುವ ಪ್ರತಿಯೊಬ್ಬರು ಗಂಭೀರವಾಗಿ ಪರಿಗಣಿಸಬೇಕಾಗಿದೆ.

1979 ರಲ್ಲಿ ಬಗೆದ ದ್ರೋಹ

1975 ತುರ್ತು ಪರಿಸ್ಥಿತಿಯ ನಂತರ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ಸಿನ ದೀರ್ಘ ಆಡಳಿತವನ್ನು ಕೊನೆಗಾಣಿಸಿ ಈ ದೇಶದ ಜನತೆ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದರು. ಜಯಪ್ರಕಾಶ್ ನಾರಾಯಣ್‌ರವರ ಪ್ರಯತ್ನದಿಂದ ಅವರ ನೇತೃತ್ವದಲ್ಲಿ ಎಲ್ಲಾ ಪಕ್ಷಗಳು ಅಂದರೆ ಅಂದಿನ ಕಾಂಗ್ರೆಸ್(ಓ) ಜನಸಂಘ, ಬಿ.ಎಲ್.ಡಿ., ಸಮಾಜವಾದಿ ಪಕ್ಷ, ಮತ್ತು ಇತರ ಸಣ್ಣ ಸಣ್ಣ ಗುಂಪುಗಳು ಸೇರಿ ಏಕೀಕೃತ ಜನತಾಪಕ್ಷವಾಗಿ ರೂಪಗೊಂಡು ತಕ್ಷಣ ಇವರೆಲ್ಲರೂ ಸೇರಿ ಜಯಪ್ರಕಾಶ್‌ರವರ ನಾಯಕತ್ವದಲ್ಲಿ ಗಾಂಧಿ ಸಮಾಧಿ ಬಳಿ ಎಲ್ಲರೂ ಅಂದರೆ ಎಲ್.ಕೆ. ಅಡ್ವಾಣಿ ಮತ್ತು ವಾಜಪೇಯಿಯವರೂ ಸೇರಿ ರಾಷ್ಟ್ರಪೀತನ ಹೆಸರಿನಲ್ಲಿ ಪ್ರಮಾಣ ಮಾಡಿ ಈ ದೇಶದ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುತ್ತೇವೆಂದು, ಸರ್ವಾಧಿಕಾರಿ ಬೇರುಗಳನ್ನು ಕಿತ್ತುಹಾಕುತ್ತೇವೆಂದು ಸಂವಿಧಾನದ ಎಲ್ಲಾ ಮೌಲ್ಯಗಳನ್ನು ಎತ್ತಿ ಹಿಡಿಯುತ್ತೇವೆಂದು, ಕಾನೂನು ಬದ್ಧ ಆಳ್ವಿಕೆಯನ್ನು, ಎಲ್ಲಾ ನಾಗರೀಕರು ಸಮಾನವಾಗಿ ಬದುಕಲು ಅವಕಾಶ ಮಾಡಿಕೊಡುತ್ತೇವೆಂದು ಈ ದೇಶದ ಜನತೆಗೆ ನೀಡಿದ ಆಶ್ವಾಸನೆಯನ್ನು ಮುರಿದು ಕೇವಲ ಎರಡೇ ವರ್ಷಗಳಲ್ಲಿ ಜನತಾ ಸರ್ಕಾರವನ್ನು ಉರುಳಿಸಿದ್ದು, ಈ ಎಲ್.ಕೆ. ಅಡ್ವಾಣಿ ಮತ್ತು ವಾಜಪೇಯಿ ಅನ್ನುವುದು ಚರಿತ್ರೆಯಲ್ಲಿ ದಾಖಲೆಯಾಗಿದೆ.

1979 ರಲ್ಲಿ ಜನತಾಪಕ್ಷದಲ್ಲಿ ವಿಲೀನವಾಗಿದ್ದರೂ ತನ್ನ ಮಾತೃ ಸಂಘಟನೆಯಾದ ಆರ್.ಎಸ್.ಎಸ್.ನ ಜೊತೆ ಸಂಬಂಧ ಇಟ್ಟುಕೊಂಡು ಅದರಲ್ಲಿ ತಮ್ಮ ಸದಸ್ಯತ್ವವನ್ನು ಉಳಿಸಿಕೊಂಡಿದ್ದಾರೆಂದು ಇದು ಏಕೀಕೃತ ಸಂಘಟಿತ ಜನತಾಪಕ್ಷದ ಐಕ್ಯತೆಗೆ ಧಕ್ಕೆ ಆಗುತ್ತದೆ ಎಂಬ ಪ್ರಶ್ನೆ ಬಂದಾಗ ತಾನು ಆರ್. ಎಸ್.ಎಸ್.ನ ಸದಸ್ಯತ್ವವನ್ನು ಬಿಟ್ಟುಕೊಡುವುದಿಲ್ಲವೆಂದು ಜನತಾ ಪಕ್ಷದಲ್ಲಿ ವಿಲೀನಗೊಂಡಿದ್ದ ಅಂದಿನ ಜನಸಂಘದವರು ಅದರೆ ಎಲ್.ಕೆ. ಅಡ್ವಾಣಿ ಮತ್ತು ವಾಜ್‌ಪೇಯಿಯವರು ತಮ್ಮ ಮಾತೃ ಸಂಸ್ಥೆಯ ಆದೇಶದ ಮೇರೆಗೆ ಜನತಾಪ ಪಕ್ಷವನ್ನು ಒಡೆದು ದೇಶದ ಜನತೆಗೆ ನೀಡಿದ ಆಶ್ವಾಸನೆಗೆ ಇವರು ದ್ರೋಹ ಬಗೆದರು.

1990 ರ ದ್ರೋಹ

1989 ರಲ್ಲಿ ಅಂದಿನ ಭ್ರಷ್ಟ ಮತ್ತು ಸರ್ವಾಧಿಕಾರಿ ಕಾಂಗ್ರೆಸ್‌ನ್ನು ಸೋಲಿಸಲು ರಾಷ್ಟ್ರೀಯ ರಂಗದ ಜೊತೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಂಡು 89 ಸ್ಥಾನಗಳನ್ನು ಪಡೆದು ವಿ.ಪಿ. ಸಿಂಗ್ ಸರ್ಕಾರಕ್ಕೆ ಬೇಷರತ್ ಆಗಿ ಬೆಂಬಲವನ್ನು ಕೊಡುತ್ತೇನೆಂದು ಈ ದೇಶದ ಜನತೆಗೆ ಆಶ್ವಾಸನೆಯನ್ನು ಕೊಟ್ಟು 1990 ರ ನವಂಬರ್‌ನಲ್ಲಿ ತನ್ನ ರಾಜಕೀಯ ದುರ್ಲಾಭಕ್ಕಾಗಿ ರಥಯಾತ್ರೆಯನ್ನು ಪ್ರಾರಂಭಿಸಿ ಇಡೀ ದೇಶವನ್ನು ಕೋಮು ದಳ್ಳುರಿಗೆ ತಂದರು. ದೇಶದ ಹಿತ ದೃಷ್ಟಿಯಿಂದ ಎಲ್.ಕೆ. ಅಡ್ವಾಣಿಯವರನ್ನು ಬಂಧಿಸಿದಾಗ ತಾನು ಬೇಷರತ್ ಆಗಿ ವಿ. ವಿ.ಪಿ. ಸಿಂಗ್ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂದೆ ತೆಗೆದುಕೊಂಡು ದೇಶದ ಜನತೆಗೆ ದ್ರೋಹ ಬಗೆದಿದ್ದು ತನ್ನ ಕೋಮು ರಾಜಕೀಯಕ್ಕಾಗಿ ಎಂಬುದನ್ನು ಮರೆಯಲು ಸಾಧ್ಯವೆ?

ಡಿಸೆಂಬರ್ 6,1992ರ ದ್ರೋಹ

1991 ಲೋಕಸಭೆ ಚುನಾವಣೆಯಲ್ಲಿ ಅಧಿಕೃತ ವಿರೋಧ ಪಕ್ಷವಾಗಿ ಆಯ್ಕೆಯಾಗಿ ಈ ದೇಶದ ಸಂವಿಧಾನ ನ್ಯಾಯಾಂಗ ಮತ್ತು ಕಾನೂನು ಬದ್ಧ ಆಳ್ವಿಕೆಯನ್ನು ಎತ್ತಿ ಹಿಡಿಯುತ್ತೇನೆಂದು ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ ಅಯೋಧ್ಯೆಯಲ್ಲಿನ ಬಾಬ್ರಿಮಸೀದಿಯನ್ನು ನೆಲ ಸಮಗೊಳಿಸಲು ಎಲ್ಲಾ ರೀತಿಯಲ್ಲೂ ಪೂರ್ವ ಯೋಜಿತ ಪಿತೂರಿಯನ್ನು ನಡೆಸಿ ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ಆರ್.ಎಸ್.ಎಸ್. ವಿಶ್ವ ಹಿಂದು ಪರಿಷತ್ ಮತ್ತು ಭಜರಂಗ ದಳದ ಗೂಂಡಾಗಳನ್ನು (ಕರಸೇವಕರ ಹೆಸರಿನಲ್ಲಿ) ಅಯೋಧ್ಯೆಯಲ್ಲಿ ಜಮಾಯಿಸಿ ಈ ದೇಶದ ಜನತೆಗೆ ಪಾರ್ಲಿಮೆಂಟಿಗೂ ಮತ್ತು ನ್ಯಾಯಾಂಗಕ್ಕೂ ಬಾಬ್ರಿ ಮಸೀದಿಯನ್ನು ರಕ್ಷಣೆ ಮಾಡುತ್ತೇವೆಂದು ಲಿಖಿತ ಮತ್ತು ಅಲಿಖಿತ ಆಶ್ವಾಸನೆಗಳನ್ನು ಕೊಟ್ಟು ಡಿಸೆಂಬರ್ 6 ರಿಂದ ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿ ಈ ದೇಶದ ಜನತೆಗೆ ಸಂವಿಧಾನಕ್ಕೆ ಪಾರ್ಲಿಮೆಂಟಿಗೆ ಮತ್ತು ನ್ಯಾಯಾಂಗಕ್ಕೆ ದ್ರೋಹ ಬಗೆಯಲಿಲ್ಲವೆ? ಈ ರೀತಿಯಲ್ಲಿ ದೇಶದ ಜನತೆಗೆ ಪಾರ್ಲಿಮೆಂಟಿಗೆ, ಸಂವಿಧಾನಕ್ಕೆ ಮತ್ತು ನ್ಯಾಯಾಂಗಕ್ಕೆ ನಿರಂತರವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ದ್ರೋಹ ಮಾಡುತ್ತಲೇ ಬಂದಿರುವ ಈ ಪಕ್ಷ ಮತ್ತು ಇದರ ಮುಖಂಡ ...



“ಬಿಜೆಪಿಯ 'ದೊಂಬಿಮುಕ್ತ' ಆಡಳಿತದ ಆರಂಭಿಕ ರೂಪವನ್ನು ಕಣ್ಣಾರೆ ಕಂಡಿದ್ದೇವೆಯಲ್ಲ?”

ಆಶ್ವಾಸನೆಯನ್ನು ಇನ್ನೂ ಈ ದೇಶದ ಜನತೆ ನಂಬಿದರೆ ಈ ದೇಶ ಉಳಿಯುತ್ತದೆಯೇ ಎಂಬುದನ್ನು ದೇಶದ ಬಗ್ಗೆ ಕಾಳಜಿಯಿರುವ ಪ್ರತಿಯೊಬ್ಬ ವ್ಯಕ್ತಿಯು ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ.

‘ದೊಂಬಿ ಮುಕ್ತ’ಆಡಳಿತ ಪ್ರಾರಂಭದ ರೂಪ ಕಂಡಿದ್ದೇವೆ

ಇನ್ನು ಎಲ್.ಕೆ. ಅಡ್ವಾಣಿಯವರು ಆಶ್ವಾಸನೆ ನೀಡಿರುವ ದೊಂಬಿರಹಿತ ಮತ್ತು ಋಣಮುಕ್ತ ಆಡಳಿತವನ್ನು ನೀಡುವ ಬಗ್ಗೆ ಇವರು ಎಬ್ಬಿಸಿದ ದೊಂಬಿಗಳ ಬಗ್ಗೆ ಚರಿತ್ರೆಯನ್ನು ನೋಡಬೇಕಾಗಿದೆ. ದೇಶ ವಿಭಜನೆಯ ಕಾಲದಲ್ಲಿ ನಡೆದ ಪೈಶಾಚಿಕ ಕೋಮುದಂಗೆಗಳಿಂದ ಹಿಡಿದು ಇವತ್ತಿನವರೆವಿಗೂ ದೇಶದಲ್ಲಿ ನಡೆದ ನಡೆಯುತ್ತಿರುವ ಕೋಮು ಗಲಭೆಗಳು ಅದರಲ್ಲಿ ನಡೆದ ದೊಂಬಿ, ಲೂಟಿ, ಪ್ರಾಣ ಹಾನಿ ಮತ್ತು ಮಾನಹಾನಿಗಳನ್ನು ಮಾನವೀಯ ದೃಷ್ಟಿಯಿಂದ ಅವಲೋಕಿಸಿದರೆ ಎಲ್.ಕೆ. ಅಡ್ವಾಣಿಯವರ ದೊಂಬಿ ರಹಿತ ಆಡಳಿತೆಯ ಭಯಾನಕ ಮತ್ತು ನಿಜ ಸ್ವರೂಪ ಬಯಲಾಗುತ್ತದೆ. ಹಿಂದುತ್ವದ ಹೆಸರಿನಲ್ಲಿ ಕೋಮು ಪ್ರಚೋದನೆ ನೀಡಿ ಇಡೀ ದೇಶದಲ್ಲಿ ನಡೆದ ಮಾರಣ ಹೋಮಗಳಲ್ಲಿ ನಷ್ಟಗೊಂಡ ಆಸ್ತಿಗಳ ವಿವರವಾಗಲೀ ಸತ್ತವರ ಸಂಖ್ಯೆಯಾಗಲಿ ಕೊಡುವುದರ ಅವಶ್ಯವಿಲ್ಲ. ಯಾಕೆಂದರೆ 1990 ರಿಂದ ಈಚೆಗೆ ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿಯವರ ನಾಯಕತ್ವವೇ ಎಷ್ಟೊ ಸಾವಿರ ಜನರ ಮುಗ್ಧ ಜನರ ಪ್ರಾಣಗಳನ್ನು ಬಲಿ ತೆಗೆದುಕೊಂಡಿದೆ ಎಂಬುದನ್ನು ಗಮನಿಸಿದರೆ ಎಷ್ಟು ಸಾವಿರ ಕೋಟಿ ರೂಪಾಯಿಗಳ ಆಸ್ತಿಯನ್ನು ಲೂಟಿ ಮಾಡಲಾಗಿದೆ, ಈ ದೊಂಬಿ ಲೂಟಿಗಳಿಂದಾಗಿ ಎಷ್ಟು ಲಕ್ಷ ಜನ ನಿರ್ಗತಿಕರು ಮತ್ತು ನಿರಾಶ್ರಿತರಾಗಿದ್ದಾರೆ ಎಂಬುದನ್ನು ತಿಳಿದರೆ ಅಡ್ವಾಣಿಯವರ ದೊಂಬಿರಹಿತ ಆಡಳಿತದ ನಿಜ ಸ್ವರೂಪ ತಿಳಿಯುತ್ತದೆ.

1980-81 ರಲ್ಲಿ ...

ಇದು ಅಡ್ವಾಣಿ ಮತ್ತಿತರಿಗೆ ಕಾಂಗ್ರೆಸ್(ಐ) ...ಷ್ಟಾಚಾರವನ್ನು ಹೀಗಳೆಯಲು ಉತ್ತಮ ಅವ ...ಿತು. ಈ ಸಂದರ್ಭದಲ್ಲಿ ಅಡ್ವಾಣಿಯ ...ನ್ನು ಮುಂದೆ ಬಿಜೆಪಿ ದೊಡ್ಡ ಕೊಡುಗೆಗಳನ್ನು ...ಲಕ ಮಾತ್ರ ಸ್ವೀಕರಿಸುತ್ತದೆ" ಎಂದು ಸಾರಿದ್ದು ಹಾಸ್ಯಾಸ್ಪದ ಏಕೆಂದರೆ ಬಿಜೆಪಿಯ ಸಂಪ...ಡಾ ಇದೇ ದೊಡ್ಡ ಬಂಡವಾಳಿಗರ, ದೊಡ್ಡ ...ರ ಕಪ್ಪು ಹಣವೇ. ಕಳೆದ ಸಾರ್ವತ್ರಿಕ ಚುನಾ... ಹಣವನ್ನು ನೀರಿನಂತೆ ಖರ್ಚು ಮಾಡುವಲ್ಲಿ ...(ಐ) ಗೆ ಪ್ರಬಲ ಸ್ಪರ್ಧೆ ನೀಡಿತಷ್ಟೇ ಅಲ್ಲ, ...ಜ್ಯಗಳಲ್ಲಿ ಕಾಂಗ್ರೆಯನ್ನು ಮೀರಿಸಿತ್ತು. ಅಡ್ವಾ... ಕಲ್ಕತ್ತಾ, ಮುಂಬೈಗಳಲ್ಲಿ ದೊಡ್ಡ ಉದ್ಯಮಿ...ಗೆ ನಡೆಸಿದ ಭೇಟಿಗಳನ್ನು ಇಲ್ಲಿ ನೆನಪಿಸಿಕೊಂ...

> ಸಾಮಾಜಿಕ ಹೇಳಿಕೆಯಲ್ಲಿರುವ ಬಿಜೆಪಿ ...ಕ್ಕೂ ಅನುಷ್ಠಾನಕ್ಕೆ ತರಬಹುದಾದ ...ದೇ ಸಂಗತಿಯೆಂದರೆ ಅಲ್ಪ ಸಂಖ್ಯಾತ ...ನ್ನು ಕುರಿತಾದದ್ದು.

..., ಅವರ ಘೋಷಣೆ ಎಷ್ಟು ಹಾಸ್ಯಸ್ಪದ ಎಂದು ...ದೆ. ಗಂಗಾಜಲ ಮಾರುವ ವಿ.ಹೆಚ್.ಪಿ. ...ಮದಲ್ಲಿ ಕೋಟಿಗಟ್ಟಲೆ ರೂಪಾಯಿ ಸಂಗ್ರಹ ... ಅದರ ಬಗ್ಗೆ ಇನ್ನೂ ವಿ.ಹೆಚ್.ಪಿ. ಲೆಕ್ಕ ... ಆದ್ದರಿಂದ ಭ್ರಷ್ಟಾಚಾರದ ವಿರುದ್ಧ ಮೂರು ...ಕ್ಷೋಭೆ ನಡೆಸಬೇಕೆಂಬ ಬಿಜೆಪಿ ಕರೆ ಮುಂಬ...ಲ್ಕು ರಾಜ್ಯಗಳಲ್ಲಿ ಚುನಾವಣೆಗಳನ್ನು ಗಮನ ...ರೂಪಿಸಿದ ತಂತ್ರವಷ್ಟೆ ಎಂದು ಜನಕ್ಕೆ ...ದಿರದು.

"ಕಾಂಗ್ರೆಸ್ ಸಂಸ್ಕೃತಿ"

...ಘಟನೆಗೆ ಸಂಬಂಧಪಟ್ಟಂತೆ ಬಿಜೆಪಿಯ ...ರು ಅಧಿವೇಶನಕ್ಕೆ ಕಾಂಗ್ರೆಸ್ (ಐ) ಸಂಸ್ಕೃ...ಮ ಪಕ್ಷವನ್ನೂ ತ್ವರಿತವಾಗಿ ಆವರಿಸಿಕೊಳ್ಳುತ್ತಿದೆ ...ನ್ನು ಮರೆಮಾಚಲು ಸಾಧ್ಯವಾಗಿಲ್ಲ. ಉತ್ತರ ... ಮಧ್ಯಪ್ರದೇಶಗಳಲ್ಲಿ ಸಂಘಟನಾ ಚುನಾವ...ಮಯದಲ್ಲಿ ಬಹಿರಂಗ ಜಗಳ, ಗುದ್ದಾಟಗ...ಧಾನ ಕಾರ್ಯದರ್ಶಿಯ ವರದಿ ಕೂಡಾ ಗಮ...ಗಿ ಬಂದಿತ್ತು. ಕೇಂದ್ರದಲ್ಲಿ ಆಳುವ ಪಕ್ಷವಾ...ಸು ನನಸಾಗುವ ಮೊದಲೇ ಅಧಿಕಾರಕ್ಕಾಗಿ ...ಕಿತ್ತಾಟ ಬಿಜೆಪಿ ಕೂಡಾ ಒಂದು ಸಮಯಸಾ...ರ್ಜ್ಯ ಪಕ್ಷವಲ್ಲದೆ ಬೇರೇನೂ ಅಲ್ಲ ಎಂಬು...ದುಲಿಗೆಳೆದಿದೆ.

...ೋಮು ಗಲಭೆಗಳಲ್ಲಿ ಸಾವಿರಾರು ಜನ ಪ್ರಾಣಗ...ಮಕ್ಕ...ು ಕೋಟ್ಯಾಂತರ ರೂಪಾಯಿಗಳ ಆಸ್ತಿಪಾ...ಟಿಯಾದಾಗ ಸ್ವಾತಂತ್ರ್ಯಾನಂತರದಲ್ಲಿನ ಕೋಮು ...ೈಶಾಚಿಕತೆ ಮತ್ತು ಬರ್ಬರತೆ ಕಂಡು ದೇಶದ ಜನ ...ೊಡಗಿದರು. ಈ ಗಲಭೆಗಳ ಹಿಂದೆ ಬಿಜೆಪಿ ...ರ್.ಎಸ್.ಎಸ್.ನವರ ಕುಮ್ಮಕ್ಕು ಮತ್ತು ಕೈವಾಡ ...ದು ಗೊತ್ತಾಗಿ ಸರ್ಕಾರ ಅದನ್ನು ತನಿಖೆ ಮಾಡಲು ...ವನ್ನು ನೇಮಿಸಿತ್ತು. ಈ ಆಯೋಗ ರಚನೆಯಾಗು...ದಲೇ ಭೀವಂಡಿ ಮತ್ತು ಮೀರತ್ ಗಲಭೆಗಳಲ್ಲಿ ...ಸಿದ ಕಾರಣಕ್ಕೆ ಬಿಜೆಪಿ ಮತ್ತು ಆರ್.ಎಸ್.ಎಸ್. ...ಬಂಧಿಸಲಾಗಿತ್ತು.

> ದೇಶದ ಜನತೆಗೆ ಪಾರ್ಲಿಮೆಂಟಿಗೆ, ಸಂವಿ...ಕ್ಕೆ ಮತ್ತು ನ್ಯಾಯಾಂಗಕ್ಕೆ ನಿರಂತರವಾಗಿ ... ಪ್ರಜ್ಞಾಪೂರ್ವಕವಾಗಿ ದ್ರೋಹ ಮಾಡು ಬಂದಿರುವ ಈ ಪಕ್ಷ ಮತ್ತು ಇದರ ...ಂಡ ಎಲ್.ಕೆ. ಅಡ್ವಾಣಿಯವರು ಕೊಟ್ಟ ಆಶ್ವಾಸನೆಯನ್ನು ಇನ್ನೂ ಈ ದೇಶದ ... ನಂಬಿದರೆ ಈ ದೇಶ ಉಳಿಯುತ್ತದೆಯೇ ...ುದನ್ನು ದೇಶದ ಬಗ್ಗೆ ಕಾಳಜಿಯಿರುವ ...ೊಬ್ಬ ವ್ಯಕ್ತಿಯು ಗಂಭೀರವಾಗಿ ಆಲೋ...ಮಾಡಬೇಕಾಗಿದೆ.

...ಳ ಸರ್ಕಾರವು ರಚಿಸಿದ ಆಯೋಗವು ತನ್ನ ವರ...ಆರ್.ಎಸ್.ಎಸ್. ಮತ್ತು ಬಿಜೆಪಿಗಳ ಕೈವಾಡವಿ...ಸ್ಪಷ್ಟಪಡಿಸಿತು. ಅಲ್ಲಿಂದೀಚೆಗೆ ಇಡೀ ದೇಶದಲ್ಲಿ ...ರವಿಗೂ ಹಿಂದುತ್ವದ ಹೆಸರಿನಲ್ಲಿ ನಡೆದ ಕೋಮು ... ಮತ್ತು ದೊಂಬಿಗಳಲ್ಲಿ ಸಾವಿರಾರು ಮುಗ್ಧ ಜನರು ...ದ್ದು, ಎಲ್.ಕೆ. ಅಡ್ವಾಣಿಯವರ ನೇರ ನಾಯಕತ್ವ... ಡಿಸೆಂಬರ್‌ನಲ್ಲಿ ಹೈದರಾಬಾದಿನಲ್ಲಿ ಆಗ ತಾನೆ ...ಟ್ಟ ಮಕ್ಕಳನ್ನು ಕಿವಿ ಮೂಗುಗಳನ್ನು ಕತ್ತರಿಸಿದ್ದು ...ದ ಮುದುಕಿಯನ್ನು ಸಾಯಿಸಿದ್ದು, ಕಳೆದ ಫೆಬ್ರುವರಿ ...ಂಬೈ ಗಲಭೆಗಳಲ್ಲಿ ಸುಟ್ಟು ಕರಕಲಾಗಿದ್ದ ದೇಹ...ಗಳನ್ನು ಟಿ.ವಿ. ಮತ್ತು ಪತ್ರಿಕೆಗಳಲ್ಲಿ ಬಂದಿದ್ದನ್ನು ...ಂಡರೆ ಈಗಲೂ ಸಿಡ್ಡೆ ಬರದಷ್ಟು ಭಯಾನಕವಾ... ಅಡ್ವಾಣಿಯವರು ಈ ದೇಶದ ಜನರಿಗೆ ಆಶ್ವಾಸನೆ ...

ವಿದೇಶಾಂಗ ನೀತಿಯಲ್ಲಂತೂ ತನಗೆ ಸಾಮ್ರಾಜ್ಯಶಾಹಿ- ವಿರೋಧಿ, ಅಲಿಪ್ತ ನೀತಿಗಳ ಪರಂಪರೆಯೇ ಇಲ್ಲ ಎಂಬುದನ್ನು ಬಿಜೆಪಿ ಸ್ಪಷ್ಟಪಡಿಸಿದೆ. ಜಾಗತಿಕ ಪರಿಸ್ಥಿತಿ ಬದಲಿಸಿದೆ ಎಂಬ ಹೆಸರಲ್ಲಿ ಅದು ಅಮೆರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳ ಬಾಲ ಹಿಡಿಯುವ, ಇಸ್ಲಾಮಿ ದೇಶಗಳಿಗೆ ವಿರೋಧವೇ ಕೇಂದ್ರ ಬಿಂದುವಾಗಿರುವ ಒಂದು ವಿದೇಶಾಂಗ ನೀತಿಯನ್ನು ಅನುಸರಿಸಲಿದೆ ಎಂಬುದು ಸ್ಪಷ್ಟ.

ಸಾಮಾಜಿಕ ಹೇಳಿಕೆ ನೀತಿ ಗೋಸುಂಬೆತನ ದಸ್ತಾವೇಜು

ಬಿಜೆಪಿ ಅಧಿವೇಶನ ಒಂದು ಸಾಮಾಜಿಕ ನೀತಿ ಹೇಳಿಕೆಯನ್ನು ಅಂಗೀಕರಿಸಿತು. ಆರ್. ಎಸ್.ಎಸ್, ವಿ.ಹೆಚ್.ಪಿ. ಮತ್ತು ಬಿಜೆಪಿಯ ಮಿತ್ರ ಸಂಘಟನೆಗಳು ಪ್ರತಿಪಾದಿಸಿದ ಮನುಸ್ಮೃತಿ ಪ್ರತಿಪಾದನೆ ಮೀಸಲಾತಿ- ವಿರೋಧ ಇತ್ಯಾದಿ ಸಾಮಾಜಿಕವಾಗಿ ಪ್ರತಿಗಾಮಿಯಾದ ತತ್ವಗಳಿಂದ ಈ ಶಕ್ತಿಗಳ ನಿಜರೂಪ ಬಯಲಿಗೆ ಬಂದುದರಿಂದಾಗಿ ಈ ಹೇಳಿಕೆಯನ್ನು ಬಿಜೆಪಿ ಅಂಗೀಕರಿಸಬೇಕಾಗಿ ಬಂತು ಎಂಬುದು ಸ್ವಯಂವೇದ್ಯ. ಈ ಸಾಮಾಜಿಕ ನೀತಿ ಹೇಳಿಕೆ ಗೋಸುಂಬೆತನದಿಂದ ತುಂಬಿಹೋಗಿರುವ ಒಂದು ಹೇಳಿಕೆ. ಡಾ. ಅಂಬೇಡ್ಕರ್ ವಿಚಾರಗಳಿಂದ ತಾನು ಸ್ಫೂರ್ತಿ ಪಡಿದಿರುವುದಾಗಿ ಬಿಜೆಪಿ ಇದರಲ್ಲಿ ಹೇಳಿಕೊಂಡಿದೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಬಗ್ಗೆ ಬಿಜೆಪಿ ವಿರೋಧ, ವೈಷಮ್ಯ ಎಲ್ಲರಿಗೂ ತಿಳಿದಿರುವ ಸಂಗತಿ. ಅಯೋಧ್ಯೆಯ ಶಿಲಾನ್ಯಾಸದಲ್ಲಿ ಮೊದಲು ಇಟ್ಟಿಗೆ ಇಟ್ಟವರು ಪರಿಶಿಷ್ಟ ಜಾತಿಯವರು ಎಂಬುದೇ ತಾನು ಅಸ್ಪೃಶ್ಯತೆಯನ್ನು ನಿವಾರಿಸಲು ಎಷ್ಟು ಬದ್ಧ ಎಂಬುದನ್ನು ತೋರಿಸಿಕೊಡುತ್ತದೆ ಎಂದು ಸಾರಲು ಬಿಜೆಪಿ ಪ್ರಯತ್ನಿಸುತ್ತಿದೆ. ವಾಸ್ತವವಾಗಿ ಶಿಲಾನ್ಯಾಸಕಾಲದ ಪ್ರಯತ್ನ ಸಾಂಪ್ರದಾಯಿಕ ಜಾತಿ ಆಧಾರಿತ 'ಹಿಂದೂರಾಷ್ಟ್ರ'ದ ಪ್ರಾಬಲ್ಯದೊಳಗೆ ದಲಿತರನ್ನು ಪರಿಶಿಷ್ಟ ಜಾತಿಗಳ ಜನರನ್ನೂ ತರುವ ಸಂಘ ಪರಿವಾರದ ಪ್ರಯತ್ನ ಒಂದು ಸಂಕೇತ.

ಈ ಹೇಳಿಕೆಯಲ್ಲಿರುವ ಅತ್ಯಂತ ಸುಳ್ಳಿನ ಅಂಶಗಳೆಂದರೆ ಮಹಿಳಾ ಸಮಾನತೆ ಕುರಿತದ್ದು. ವಿಜಯರಾಜೇ ಸಿಂಧ್ಯಾರಂತಹ ಸತಿ ಪದ್ಧತಿಯನ್ನು ಸಮರ್ಥಿಸುವ ಮಹಿಳಾ ಮುಖಂಡರನ್ನು ಹೊಂದಿದ ವಿಶಿಷ್ಟ 'ಕೀರ್ತಿ' ಬಿಜೆಪಿಯದ್ದು. ಆ ಪಕ್ಷದ ಮಹಿಳಾ ಸಂಘಟನೆಯ ನೇತೃತ್ವ ವಹಿಸಿರುವ ಮೃದುಲಾ ಸಿನ್ಹಾರಂತಹ ವರದಕ್ಷಿಣೆಯನ್ನು ಪರಿಕಲ್ಪನೆಯನ್ನು ಸಮರ್ಥಿಸುವ, ಮಹಿಳೆ ಮನೆಯಲ್ಲಿದ್ದುಕೊಂಡು ಕುಟುಂಬದ ಯೋಗಕ್ಷೇಮವನ್ನು ನೋಡಿಕೊಳ್ಳಬೇಕೆಂದು ಪ್ರತಿಪಾದಿಸುವವರು ಅವರ ಪಕ್ಷದಲ್ಲಿದ್ದಾರೆ.

ಪುಟ ೮ನೋಡಿ

...ಪಗಳು. ಈ ದೊಂಬಿಗಳಲ್ಲಿ ಗಲಭೆಗಳಲ್ಲಿ ನಿರಾಶ್ರಿತರಾದ ಲಕ್ಷಾಂತರ ಜನಗಳು ಅಡ್ವಾಣಿಯವರ ಆಡಳಿತಕ್ಕೆ ಜೀವಂತ ಸಾಕ್ಷಿಗಳು.

'ಋಣಮುಕ್ತ': ಕ್ರೂರ ಹಾಸ್ಯ

ಇನ್ನು ಋಣಮುಕ್ತ ದೇಶವನ್ನು ನೀಡುತ್ತೇವೆಂದು ಹೇಳಿರುವ ಅಡ್ವಾಣಿಯವರು ಆಶ್ವಾಸನೆ ನಿಜವಾಗಿ ಕ್ರೂರ ಹಾಸ್ಯಸ್ಪದ. ಯಾಕೆಂದರೆ ಎಲ್.ಕೆ. ಅಡ್ವಾನಿ ಮತ್ತು ಅವರ ಪಕ್ಷ ಬಿಜೆಪಿ ಆರ್ಥಿಕ ಧೋರಣೆಯನ್ನು ಇದುವರೆವಿಗೂ ಸ್ಪಷ್ಟಪಡಿಸಿಲ್ಲ ಮತ್ತು ಇದುವರೆವಿಗೂ ದೇಶದ ಆರ್ಥಿಕ ಸ್ಥಿತಿಗತಿಗಳ ವಿಷಯಗಳ ಬಗ್ಗೆ ಪಾರ್ಲಿಮೆಂಟಿನಲ್ಲಿ ಮತ್ತು ಹೊರಗೆ ಚರ್ಚೆ ಮಾಡಿದಾಗ ಅವರು ಅನುಸರಿಸಿದ ಧೋರಣೆ ಯಾವುದೇ ರೀತಿಯಲ್ಲೂ ನರಸಿಂಹರಾಯರ ಆರ್ಥಿಕ ಧೋರಣೆಗಳಿಗಿಂತ ಭಿನ್ನವಾಗಿಲ್ಲ. ತಾನು ಅಧಿಕೃತ ವಿರೋಧ ಪಕ್ಷದ ನಾಯಕರಾಗಿ ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಅಮೇರಿಕಕ್ಕೆ ಭೇಟಿ ನೀಡಿ ನರಸಿಂಹರಾಯರ ಆರ್ಥಿಕ ಧೋರಣೆಗಳಿಗೆ ಆರ್ಥಿಕ ನೆರವನ್ನು ಮುಂದುವರೆಸಬೇಕೆಂದು ನರಸಿಂಹರಾಯರ ಸರ್ಕಾರಕ್ಕೆ ಯಾವುದೇ ರೀತಿಯ ಅಭದ್ರತೆಯಿಲ್ಲವೆಂದು ಆಶ್ವಾಸನೆಯನ್ನು ನೀಡಿದ್ದು ಎಲ್.ಕೆ. ಅಡ್ವಾನಿಯವರು. ಅದರ ಜೊತೆಗೆ ಈಗ ಅಮದು ಮತ್ತು ರಫ್ತು ನೀತಿ, ಸುಂಕದ ನೀತಿಗಳ ಬಗ್ಗೆ ಬಿಜೆಪಿ ಅನುಸರಿಸುತ್ತಿರುವ ಧೋರಣೆಗಳನ್ನು ಕಂಡವರಿಗೆ ಅವರು ಆಡಳಿತಕ್ಕೆ ಬಂದರೆ ಈ ದೇಶ ಋಣಮುಕ್ತವಾಗುತ್ತದೆ ಎಂದು ಹೇಳಿದರೆ ಆರ್ಥಿಕ ನೀತಿ ನಿರೂಪಣೆಗಳ ಬಗ್ಗೆ ಪ್ರಾಥಮಿಕ ಪರಿಜ್ಞಾನವಿರುವರಾರೂ ನಂಬಲಿಕ್ಕೆ ಸಾಧ್ಯವಿಲ್ಲ.

ಬಿಜೆಪಿ ಮತ್ತು ಅದರ ನಾಯಕ ಅಡ್ವಾನಿಯವರ ಚರಿತ್ರೆಯಲ್ಲಿ ಅವರು ದೇಶಕ್ಕಾಗಲಿ ಅಥವಾ ಜನತೆಗಾಗಲಿ ಇದುವರೆವಿಗೂ ನೀಡಿರುವ ಯಾವುದೇ ಆಶ್ವಾಸನೆಯನ್ನು ಈಡೇರಿಸಿಲ್ಲ. ಮತ್ತು ಕೊಟ್ಟ ಮಾತಿನಂತೆ ನಡೆದುಕೊಂಡಿರುವುದು ಚರಿತ್ರೆಯಲ್ಲಿ ಇಲ್ಲ. ಬದಲಾಗಿ ಪ್ರತಿಯೊಂದು ಹಂತದಲ್ಲಿ ದೇಶಕ್ಕೆ ಪಾರ್ಲಿಮೆಂಟಿಗೆ, ನ್ಯಾಯಾಂಗಕ್ಕೆ, ಕಾನೂನು ಬದ್ಧ ಆಡಳಿತಕ್ಕೆ ಮುಖ್ಯವಾಗಿ ಜನತೆಗೆ ದ್ರೋಹ ಬಗೆಯುತ್ತ ಬಂದಿದ್ದಾರೆ. ಇಂತಹವರು ದೊಂಬಿ ರಹಿತ ಋಣಮುಕ್ತ ಆಡಳಿತವನ್ನು ನೀಡುತ್ತೇವೆಂದು ಆಶ್ವಾಸನೆ ನೀಡಿದರೆ ಹುಚ್ಚರು ಕೂಡಾ ನಂಬಲಿಕ್ಕೆ ಸಾಧ್ಯವಿಲ್ಲ. ಇವರ ನಯವಂಚನೆ ಆಶ್ವಾಸನೆಗಳಿಗೆ ಮೋಸ ಹೋಗುವುದೆಂದರೆ ದೇಶಕ್ಕೆ ದ್ರೋಹ ಮಾಡಿದ ಹಾಗೆ. ತಮ್ಮ ಈ ಕ್ರೂರ ಇತಿಹಾಸದ ಬಗ್ಗೆ ಶ್ರೀ ಎಲ್.ಕೆ. ಅಡ್ವಾಣಿಯವರು ಪ್ರಾಮಾಣಿಕ ಉತ್ತರ ನೀಡಬೇಕಾಗಿದೆ.

'ಇನ್ನೂ ನೆನೆಯಬೇಕು ಮತ್ತೂ ನೆನೆಯಬೇಕು ಐ.ಎಂ.ಎಫ್. ಭಗವಂತನ....

ಇದು ಐಎಂಎಫ್ ಭಾರತ ಸರ್ಕಾರಕ್ಕೆ ಹೇಳುತ್ತಿರುವ ಮಾತು. ನಮ್ಮ ಹರಿಕಥೆ ದಾಸರುಗಳು ಹರಿಕಥೆಯ ನಡುವೆ ಹೇಳುವ ಈ ಮಾತನ್ನು ಐಎಂಎಫ್ ಆರ್ಥಿಕ ಸುಧಾರಣೆಗಳ ಬಗ್ಗೆ ಹೇಳುತ್ತಿದೆ. ಇನ್ನೂ ಸುಧಾರನೆ ಮಾಡಬೇಕು ಮತ್ತೂ ಸುಧಾರಣೆ ಮಾಡಬೇಕು. ಕೊಳ್ಳೆ ಹೊಡೆಯಲು ಸಾಮ್ರಾಜ್ಯಶಾಹಿಗಳಿಗೆ ಸಕಲ ಅನುಕೂಲ ಮಾಡಿಕೊಡಬೇಕು ಎಂಬುದೇ ಈ ಮಾತು.

'ವಿಸ್ತøತ ನಿಧಿ ಸೌಲಭ್ಯ ಎಂಬ ಐಎಂಎಫ್‌ನ ಒಂದು ರೀತಿಯ ಸಾಲ ಸೌಲಭ್ಯ ಪಡೆಯಲು ಕನಿಷ್ಠ ಐದು ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಮಾಡಬೇಕೆಂದು ಐಎಂಎಫ್ ಒತ್ತಡ ಹೇರುತ್ತದೆ. ಅವುಗಳೆಂದರೆ'.

1. ಚೆಲ್ಲಯ್ಯ ಸಮಿತಿಯ ಶಿಫಾರಸ್ಸುಗಳನ್ನು ತೆರಿಗೆ ಕ್ಷೇತ್ರದಲ್ಲಿ ಪೂರ್ಣ ಅನುಷ್ಠಾನಕ್ಕೆ ತರಬೇಕು. ಶ್ರೀಮಂತರಿಗೆ ಪೂರ್ಣ ತೆರಿಗೆ ವಿನಾಯಿತಿ ನೀಡಿ ಬಡವರಿಗೆ ಬೆನ್ನು ಬಾಗಿ ಮುರಿಯುವಷ್ಟು ತೆರಿಗೆ ಹೇರಬೇಕು.

2. ಬ್ಯಾಂಕಿಂಗ್ ವ್ಯವಸ್ಥೆಯ ಬಗೆಗೆ ನರಸಿಂಹಮ್ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಬೇಕು. ಅಂದರೆ ಬ್ಯಾಂಕುಗಳು ಬರೇ ಲಾಭಕ್ಕಾಗಿ ನಡೆಯಬೇಕು. ಹಳ್ಳಿಗಳಲ್ಲಿರುವ ಬ್ಯಾಂಕ್ ಶಾಖೆಗಳು ಮುಚ್ಚಬೇಕು. ಬಡವರಿಗೆ ಬ್ಯಾಂಕಿಂಗ್ ಸೌಲಭ್ಯಗಳು ಕೈಗೆಟುಕದಂತಾಗಬೇಕು. ಶ್ರೀಮಂತರಿಗೆ ಈಗಿನದಕ್ಕಿಂತ ಉತ್ತಮ ಬ್ಯಾಂಕಿಂಗ್ ಸೇವಾ ಸೌಲಭ್ಯ ದೊರಿಯಬೇಕು.

3. ವ್ಯಾಪಾರ ಕ್ಷೇತ್ರದಲ್ಲಿ ಆಗಿರುವ ಸುಧಾರಣೆಗಳ ಬಗೆಗೆ ಐಎಂಎಫ್ ಗೆ ತೃಪ್ತಿಯಿದೆಯಂತೆ ಆದರೂ ಆಮದಿನ ಮೇಲಿನ ನಿಬಂಧನೆಗಳು ಪೂರಾ ತೊಲಗಬೇಕಂತೆ.

4. ಕಂಪೆನಿಗಳ ವಿಧೇಯಕದ ಬಗೆಗೆ ಐಎಂಎಫ್‌ಗೆ ತೀವ್ರ ಅಸಂತೃಪ್ತಿ ಇದೆಯಂತೆ. ಕಂಪನಿಗಳ ಮೇಲಿನ ಸರ್ಕಾರದ ಹಿಡಿತ ಪೂರ್ತಿ ತೊಲಗಬೇಕಂತೆ. ಅಲ್ಲವೆ ಮತ್ತೇ? ಬಹುರಾಷ್ಟ್ರೀಯ ಕಂಪನಿಗಳ ಮೇಲೆ ನಿರ್ಭಂಧಗಳಿದ್ದರೆ ಅವರಿಗೆ ತೊಂದರೆಯಲ್ಲವೆ?

5. ಕಾರ್ಮಿಕ ರಂಗ ಇನ್ನೊಂದು ಬಹುಮುಖ್ಯ ರಂಗ. ಔದ್ಯಮಿಕ ವಿವಾದಗಳ ಬಗೆಗಿನ ವಿಧೇಯಕ ಪೂರ್ಣ ಬದಲಾಗಬೇಕು. ಅಂದರೆ ಬಹುರಾಷ್ಟ್ರೀಯ ಕಂಪನಿಗಳು ಅತಿ ಕಡಿಮೆ ಕಾರ್ಮಿಕರಿಂದ ಅತೀ ಹೆಚ್ಚು ಕೆಲಸ ಪಡೆಯಬೇಕು. ಅತಿ ಕಡಿಮೆ ಸಂಬಳ ನೀಡಬೇಕು. ಬೇಡವೆನಿಸಿದಾಗ ಕಾರ್ಮಿಕರನ್ನು ಮನೆಗೆ ಕಳುಹಿಸುವಂತಿರಬೇಕು.

ಈ ಸಾಲ ಸೌಲಭ್ಯ ಪಡೆದೇ ತೀರಬೇಕೆನ್ನುವ ಕೇಂದ್ರ ಸರ್ಕಾರ ಈ ಎಲ್ಲ ಸುಧಾರಣೆಗಳನ್ನು ಮಾಡಿ ಐಎಂಎಫ್ ಧಣಿಗಳನ್ನು ಸಂತೋಷಪಡಿಸಲೆತ್ನಿಸುತ್ತಿದೆ.



ನರಸಿಂಹರಾವ್ ಸರಕಾರದ 25ನೇ ತಿಂಗಳಲ್ಲಿ

ಐಎಂಎಫ್ ಇನ್ನೂ ಸುಧಾರಣೆ ಮಾಡಬೇಕು ಎಂಬ ಮಂತ್ರ ಭಾರತ ಪೂರ್ತಿ ದಿವಾಳಿಯಾಗುವವರೆಗೂ ಮುಂದುವರೆಯುತ್ತದೆ.

ಸಾರ್ವಜನಿಕ ವಲಯದ ಘಟಕಗಳಿಗೆ ಸಾಲ ಪಡೆಯುವ ಸ್ವಾತಂತ್ರ್ಯ

ಭಾರತ ಸರ್ಕಾರ ಸಾರ್ವಜನಿಕ ವಲಯದ ಘಟಕಗಳು ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಂಸ್ಥೆಗಳಿಂದ ನೇರವಾಗಿ ಸರ್ಕಾರದ ಪಾತ್ರವಿಲ್ಲದೇ ಸಾಲ ಪಡೆಯಬಹುದೆಂದಿದೆ. ಹಣಸಿಕ್ಕ ಕೂಡಲೇ ಹಗರಣ ಮಾಡುವಂತವರನ್ನೇ ಸಾರ್ವಜನಿಕ ವಲಯದ ಘಟಕಗಳ ನಿರ್ವಹಣೆಗೆ ನೇಮಿಸುತ್ತಿರುವ ಕಾಂಗ್ರೆಸ್(ಐ) ಸರ್ಕಾರ ಮುಂದೆ ಹಲವು ಹಗರಣಗಳನ್ನೇ ಹುಟ್ಟಿಹಾಕುವಂತಿದೆ. ವಿಶ್ವಬ್ಯಾಂಕಿನ ಮನವೊಲಿಸಲು ಕೈಗೊಂಡಿರುವ ಈ ಕ್ರಮವಂತೂ ದೇಶದ ಸಾರ್ವಜನಿಕ ಉದ್ದಿಮೆಗಳನ್ನು ಕೊಲ್ಲುವ ರೀತಿಯದು.

ಬಹುರಾಷ್ಟ್ರೀಯ ಕಂಪನಿಗಳ ಲಾಭ ಪಿಪಾಸೆ

ಭಾರತ ವಿದ್ಯುತ್ ಉತ್ಪಾದನಾ ಕ್ಷೇತ್ರಕ್ಕೆ ಬಂದಿರುವ ಬಹುರಾಷ್ಟ್ರೀಯ ಕಂಪನಿಗಳು ಸರ್ಕಾರದಿಂದ ತಮಗೆ ತಮ್ಮ ಬಂಡವಾಳಕ್ಕೆ ಒಳ್ಳೆಯ ಲಾಭ ನೀಡುವ ಭರವಸೆ ಪಡೆದುಕೊಂಡರು. ಆದರೂ ಅವರಿಗೆ ತೃಪ್ತಿಯಿಲ್ಲ.

ಈಗಿನ ಅವರ ಒತ್ತಾಯ ನಮಗೆ ಕಲ್ಲಿದ್ದಲು ಪೂರೈಸಿ ಎಂಬುದು. ಅವರ ಘಟಕಗಳಿಗೆ ಕಲ್ಲಿದ್ದಲು ಸರಬರಾಜು ಮಾಡುವುದೆಂದರೆ ಸಾರ್ವಜನಿಕ ವಲಯದ ಘಟಕಗಳಿಗೆ ಮತ್ತು ದೇಶೀ ಘಟಕಗಳಿಗೆ ಆದ್ಯತೆಯ ಕಡಿತ. ಪರಿಣಾಮವಾಗಿ ಇವುಗಳಿಗೆ ಕಲ್ಲಿದ್ದಲಿನ ಕೊರತೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಎರಡು ತರಹದ ಲಾಭ ಒಂದನೆಯದು ಸುಲಭವಾಗಿ ಕಲ್ಲಿದ್ದಲು ಲಭ್ಯ ಎರಡನೇಯದಾಗಿ ಸಾರ್ವಜನಿಕ ವಲಯದ ಮತ್ತು ದೇಶೀ ಘಟಕಗಳಿಂದ ಸ್ಪರ್ಧೆ ಇಲ್ಲದಿರುವುದು. ಹೇಗಿದೆ ತಂತ್ರ?

ಶೇರು ಹಗರಣಕ್ಕಿಂತ ದೊಡ್ಡ ಹಗರಣ

ಶೇರು ಹಗರಣ ಬಯಲಿಗೆ ಬಂದ ನಂತರ ಉಳಿದ ಹಗರಣಗಳನ್ನು ಅದಕ್ಕೆ ಹೋಲಿಸುವ ಪರಿಪಾಠ. ಈಗ ಇನ್ನೊಂದು ಹಗರಣವನ್ನು ಕಂಟ್ರೋಲರ್ ಅಂಡ್ ಅಡಿಟರ್ ಜನರಲ್ ಅಂದರೆ ದೇಶದ ಅತ್ಯುನ್ನತ ಲೆಕ್ಕ ತಪಾಸಕ ವ್ಯವಸ್ಥೆ ಬಯಲುಗೊಳಿಸಿದೆ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದಲ್ಲಿ ಇದು ನಡೆದಿದೆ.

ಖಾಸಗೀಕರಣದ ಅಂಗವಾಗಿ ಸರ್ಕಾರ ಹಲವು ಸಾರ್ವಜನಿಕ ಉದ್ದಿಮೆಗಳ ಶೇರುಗಳನ್ನು ಮಾರಾಟ ಮಾಡಿತು. ಹೀಗೆ ಮಾರಾಟ ಮಾಡುವಾಗ ಬಹುತೇಕವಾಗಿ ಅವುಗಳ ಬೆಲೆಯನ್ನು ಮಾರುಕಟ್ಟೆ ಅಥವಾ ನಿಜವಾಗಿ ಅದರ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದೆ. ಹೀಗೆ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದರಿಂದ ಆಗಿರುವ ನಷ್ಟದ ಪ್ರಮಾಣವೆಷ್ಟು ಗೊತ್ತೆ? 3,442 ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಹಣ. ಯಾವನಿಗುಂಟು ಯಾವನಿಗಿಲ್ಲ? ಯಾವ ಯಾವ ರಾಜಕಾರಣಿ ಯಾವ ಯಾವ ದಲ್ಲಾಳಿಯ ಮೂಲಕ ಎಷ್ಟೆಷ್ಟು ಭಾಗ ಪಡೆದರೋ? ಯಾರಿಗೆ ಗೊತ್ತು?

"ದೇಶದ ಅಭಿವೃದ್ಧಿಯಲ್ಲಿ ಸರ್ಕಾರದ ಪಾತ್ರ ಹೆಚ್ಚಿರಬೇಕು"

ಅಂತರ್ರಾಷ್ಟ್ರೀಯ ಖ್ಯಾತಿಯ ಅರ್ಥಶಾಸ್ತ್ರಜ್ಞ ಡಾ. ಅಮಾರ್ತ್ಯ ಸೇನ್ ಅವರು ಹೇಳಿದ ಮಾತಿದು. ಮಾರುಕಟ್ಟೆಯ ನೀತಿಗಳ ಮೇಲೆ ಹೆಚ್ಚು ಅವಲಂಬಿಸುತ್ತಿರುವ ಈ ದಿನಗಳಲ್ಲಿ ಅವರು ಮೇಲಿನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅವರ ಪ್ರಕಾರ ಅನಾವಶ್ಯಕ ಹತೋಟಿ ನಿರ್ಭಂಧಗಳನ್ನು ತೆಗೆದು ಹಾಕುವುದು ಖಂಡಿತವಾಗಿಯೂ ಸರಿಯಾದದ್ದು. ಆದರೆ ಆರೋಗ್ಯ ಶಿಕ್ಷಣ, ಸಾಮಾಜಿಕ ವಿಮೆ ಇತ್ಯಾದಿಗಳಲ್ಲಿ ಸರ್ಕಾರದ ಪಾತ್ರವಿರಲೇಬೇಕು ಅದು ಇನ್ನೂ ಹೆಚ್ಚಾಗಲೂ ಬೇಕು. ಭಾರತ ಸರ್ಕಾರಕ್ಕೆ ಕಿವಿ ಮಾತಲ್ಲವೆ ಇದು?

ಕರೆದರೆ ಬರುವೆನೆಂಬೊ ಮಾತು ಕೇಳಿ ನಗುತಾರಲ್ಲಿ......

-- ಜಿ.ಎಸ್.ಮಣಿ

ಹರ್ಷದ್ ಮೆಹ್ತ ಒಂದು ಕೋಟಿ ರೂಪಾಯಿಗಳನ್ನು ಪ್ರಧಾನ ಮಂತ್ರಿಗಳಿಗೆ ನೀಡಿದ್ದೇನೆ ಎಂದಾಗ ಕಕ್ಕಾಬಿಕ್ಕಿಯಾಗಿ ಮಾತಿಗೆ ತಡವರಿಸಿದ ಪಿ.ವಿ. ನರಸಿಂಹರಾವ್ ಈಗ ಧೈರ್ಯವಾಗಿ ತಾನು ಹರ್ಷದ್ ಮೆಹ್ತನನ್ನು ಭೇಟಿಯಾಗಿಲ್ಲವೆಂದೂ, ಆತನಿಂದ ಹಣ ಪಡೆದಿಲ್ಲವೆಂದೂ ಹೇಳುವ ಧೈರ್ಯ ತಂದುಕೊಂಡಿದ್ದಾರೆ.

ಅವರು ಮತ್ತೂ ಮುಂದುವರಿದು 'ಸಂಸದೀಯ ಸಮಿತಿ ಕರೆದರೆ' ಅದರ ಮುಂದೆ ಹಾಜರಾಗಿ ಹೇಳಿಕೆ ನೀಡಲು ಸಿದ್ಧ ಎಂದಿದ್ದಾರೆ. ಆದರೆ ಸ್ವಯಂಇಚ್ಛೆಯಿಂದ ಹೇಳಿಕೆ ನೀಡುವ ಅವಶ್ಯಕತೆ ಇಲ್ಲವೆಂದೂ ಹೇಳಿದ್ದಾರೆ. ನರಸಿಂಹರಾವ್ ನಿಜವಾಗೂ ಹಣಪಡೆಯದೇ ಇದ್ದಲ್ಲಿ ಸ್ವಯಂ ಇಚ್ಛೆಯಿಂದ ಸಮಿತಿಯ ಮುಂದೆ ಹಾಜರಾಗಿ ತಮ್ಮ ನಿರಪರಾಧಿತ್ವವನ್ನು ಸಿದ್ಧ ಮಾಡಲು ತೊಂದರೆ ಏನೋ?

ಸಂಸದೀಯ ಸಮಿತಿಯಲ್ಲಿ ಕಾಂಗ್ರೈನ ಪ್ರಧಾನಿ ರಕ್ಷಕರು

ಯಾವತ್ತೂ ಕಚ್ಚಾಡುತ್ತಿದ್ದ ಕಾಂಗ್ರೈನಲ್ಲಿ ಈ ಹಣ ಪ್ರಧಾನಿಗೆ ನೀಡಿದ ಆರೋಪ ಬಂದೊಡನೆ ಹೆಚ್ಚು ಒಗ್ಗಟ್ಟು ಕಾಣುತ್ತಿದೆ.


ಜಂಟಿ ಸಂಸದೀಯ ಸಮಿತಿಯಲ್ಲಿ ಕಾಂಗ್ರೈ ಸದಸ್ಯರು ಪ್ರಧಾನಿಯವರು ಸಮಿತಿಯ ಮುಂದೆ ಹೇಳಿಕೆ ...ಡುವ ಅವಶ್ಯಕತೆಯೇ ಇಲ್ಲವೆಂದು ಗಲಭೆ ಎಬ್ಬಿಸಿದ್ದಾರೆ ಇದು ನರಸಿಂಹರಾವ್ ಮೇಲಿನ ಸಂದೇಹವನ್ನು ಇನ್ನೂ ಹೆಚ್ಚಿಸುತ್ತದೆ.

ಶೇರು ಹಗರಣ

ಸಂಸದೀಯ ಸಮಿತಿ ಮಿತ್ತಲರನ್ನು ಕರೆಯಲಿದೆ

ಜಂಟಿ ಸಂಸದೀಯ ಸಮಿತಿ ಹರ್ಷದ್ ಮೆಹ್ತ ಮತ್ತು ನರಸಿಂಹರಾಯರ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡಿದರೆನ್ನಲಾದ ಸುನಿಲ್ ಮಿತ್ತಲರನ್ನು ಸಮಿತಿಯ ಮುಂದೆ ಹೇಳಿಕೆ ನೀಡುವಂತೆ ಕರೆಯುವ ವಿಚಾರ ಮಾಡುತ್ತಿದೆ. ಹರ್ಷದ್ ಮೆಹ್ತ ಒಂದು ಕೋಟಿ ರೂಪಾಯಿಗಳ ನರಸಿಂಹರಾಯರಿಗೆ ನೀಡಿದ್ದೇನೆಂದು ಬಯಲುಗೊಳಿಸಿದ ನಂತರ ಮತ್ತು ಮಿತ್ತಲರ ಜೊತೆ ಫೋನಿನಲ್ಲಿ ನಡೆಸಿದ ಸಂಭಾಷಣೆಯ ಧ್ವನಿ ಮುದ್ರಿಕೆ ಪ್ರದರ್ಶಿಸಿದ ನಂತರ ಸಂಸದೀಯ ಸಮಿತಿ ಈ ವಿಷಯವನ್ನು ಕೂಲಂಕುಷವಾಗಿ ವಿಚಾರಣೆ ಮಾಡಲೇ ಬೇಕಾಗಿದೆ. ನರಸಿಂಹರಾಯರನ್ನು ಕರೆಯುವುದಕ್ಕೆ ಸಮಿತಿಯೊಳಗೆ ಒಟ್ಟಾಭಿಪ್ರಾಯವಿಲ್ಲದಿರುವುದರಿಂದ ಉಳಿದವರನ್ನು ಕರೆಯಬೇಕು.

ಜುಲೈ 6ರ ಸಭೆಯಲ್ಲಿ ಹರ್ಷದ್ ಮೆಹ್ತಾರ ಸಾಕ್ಷ್ಯದ ಜಾಡನ್ನು ಹಿಡಿಯಲು ಮುಂದುವರಿಯುವ ಅಗತ್ಯವಿಲ್ಲವೆಂದು ಕಾಂಗ್ರೈ ಸದಸ್ಯರು ಪಟ್ಟು ಹಿಡಿದ ನಂತರ ಒಂದು ರಾಜೀಸೂತ್ರವಾಗಿ ಹರ್ಷದ್ ಮೆಹ್ತಾ ಹೇಳಿಕೆಯಲ್ಲಿ ಬರುವ ವ್ಯಕ್ತಿಗಳಲ್ಲಿ ಪ್ರಧಾನಿಗಳನ್ನು ಬಿಟ್ಟು ಉಳಿದವರಿಗೆಲ್ಲಾ ಒಂದು ಪ್ರಶ್ನಾವಳಿಯನ್ನು ಕಳಿಸಬೇಕೆಂದೂ, ಅವುಗಳ ದೊರೆತ ಉತ್ತರಗಳ ಆಧಾರದ ಮೇಲೆ ಪ್ರಧಾನಿಗಳನ್ನು ಕರೆಸುವ ಬಗ್ಗೆ ನಿರ್ಧರಿಸಬೇಕೆಂದು ಒಪ್ಪಲಾಯಿತು. ಈ ಪ್ರಧಾನಿಗಳ ಕಚೇರಿಯಲ್ಲಿನ ಮುಖ್ಯ ಅಧಿಕಾರಿ ಎಸ್.ಕೆ. ಖಾಂಡೇಕರ್, ಮೆಹ್ತರವರ ಸಹಾಯಕ ಮೋಹನ್ ಖಂಡೇವಾಲ್, ಸುನಿಲ್ ಮಿತ್ತಲ್ ಹಾಗೂ ಮನಮೋಹನ್ ಶರ್ಮಾ ಅವರಿಗೆ ಪ್ರಶ್ನಾವಳಿ ಕಳಿಸಲಾಗುವುದು. ಹಾಗೂ ಆಗಿನ ಹಣಕಾಸು ರಾಜ್ಯಮಂತ್ರಿ ದಲ್‌ಬೀರ್‌ಸಿಂಗ್ ಕ್ಯಾಪಿಟಲ್ ಇಶ್ಯೂಸ್ ಕಂಟ್ರೋಲರ್ ಕಮಲ್ ಪಾಂಡೇ, ಆಗಿನ ಹಣಕಾಸು ಇಲಾಖೆಯಲ್ಲಿದ್ದ ಪೌಲ್ ಜೋಸೆಫ್ ಹಾಗೂ ಬಾಂಬೆ ಶೇರು ವಿನಿಮಯ ಕೇಂದ್ರದ ಎಂ.ಆರ್. ಮಾಯ್ಯರಿಗೆ ವಿವರಣೆ ಕೇಳಿ ಪತ್ರ ಕಳಿಸಲು ನಿರ್ಧರಿಸಲಾಯಿತು.



ಭೂಪಾಲ ದುರಂತ ಸಂತ್ರಸ್ತರಿಗೆ ಪರಿಹಾರ ಪಂಚನೆ

-- ವಿಶ್ವ

ಮಹಾದುರಂತವೊಂದು ಸಂಭವಿಸಿ ಒಂದು ದಶಕವಾಗುತ್ತ ಬಂದಿದೆ ಆದರೆ ಆ ಮಹಾಸಂಕಟದಲ್ಲಿ ಸಿಕ್ಕಿ ನಲಗಿದವರ ನೋವು ಇನ್ನೂ ಹೋಗಿಲ್ಲ. ಬದುಕಿ ಉಳಿದವರಿಗೆ ಇನ್ನೂ ಸರಿಯಾಗಿ ಪರಿಹಾರ ಸಿಕ್ಕಿಲ್ಲ. ಪೂರ್ಣ ಪರಿಹಾರ ಮಾತು ದೂರವಿರಲಿ ಮಧ್ಯಂತರ ಪರಿಹಾರವೇ ಈ ಜನರಿಗೆ ಕನಸಿನ ಗಂಟಾಗಿದೆ.

ಈ ವರ್ಷ ಜೂನ್‌ನಿಂದ ವಿತರಿಸಬೇಕಾಗಿದ್ದ ಮಧ್ಯಂತರ ಪರಿಹಾರ ಲಭಿಸದೆ 1984 ರ ಭೂಪಾಲ್ ವಿಷಾನಿಲ ದುರಂತದಲ್ಲಿ ಸಂತ್ರಸ್ತರಾದ ಸುಮಾರು ಐದು ಲಕ್ಷ ಜನರ ಭವಿಷ್ಯ ಅನಿಶ್ಚಯತೆಯಲ್ಲಿದೆ.

ಅನಿಲ ದುರಂತ ಸಂತ್ರಸ್ತರಿಗೆ ಮಧ್ಯಂತರ ಪರಿಹಾರ ನೀಡಲು ಕೇಂದ್ರ ಸರಕಾರ ಹಣ ಒದಗಿಸಿಲ್ಲ ಹಾಗೂ ಹಣವನ್ನು ಹೇಗೆ ಕೊಡಬೇಕೆಂಬ ಬಗ್ಗೆ ಸೂಚನೆಯನ್ನು ಕೊಟ್ಟಿಲ್ಲ ಎಂದು ಮಧ್ಯಪ್ರದೇಶ ಸರಕಾರ ಹೇಳಿದೆ.

1993ರ ಜೂನ್ ಒಂದರಿಂದ ಮುಂದಿನ ಮೂರು ವರ್ಷಗಳವರೆಗೆ ಪ್ರತಿ ಸಂತ್ರಸ್ತರಿಗೆ ಪ್ರತಿ ತಿಂಗಳು 200 ರೂ. ಮಧ್ಯಂತರ ಪರಿಹಾರ ನೀಡುವಂತೆ ಸುಪ್ರಿಂ ಕೋರ್ಟ್ ಮೇ 28ರಂದು ಆದೇಶ ನೀಡಿತ್ತು. ಆದರೆ ಅದು ಅನುಷ್ಠಾನಕ್ಕೆ ಬಂದಿಲ್ಲ.

ಜನಸಾಮಾನ್ಯರ ಪಾಲಿಗೆ ನ್ಯಾಯವೆಂಬುದು ಕನಸಿನ ಗಂಟಿನಂತಾಗಿರುವುದಕ್ಕೆ

ಇದು ಒಂದು ಒಳ್ಳೆಯ ಉದಾಹರಣೆ.

ಚುನಾವಣಾಧಿಕಾರಿ ನೇಮಕ ವಿವಾದ: ಪ. ಬಂಗಾಳ ಸರ್ಕಾರಕ್ಕೆ ಜಯ

ಪಶ್ಚಿಮ ಬಂಗಾಳ ಮುಖ್ಯ ಚುನಾವಣಾಧಿಕಾರಿ (ಸಿಇಓ) ನೇಮಕ ವಿಚಾರ ಒಂದು ದೊಡ್ಡ ವಿವಾದಕ್ಕೆ ಕಾರಣವಾಗಿತ್ತು. ದೇಶದ ಮುಖ್ಯ ಚುನಾವಣಾ ಕಮಿಷನರ್ ಟಿ. ಎನ್. ಶೇಷನ್‌ರ ಎಡಬಿಡಂಗಿ ಧೋರಣೆ ಇದಕ್ಕೆ ಮೂಲವಾಗಿತ್ತು.

ಶೇಷನ್ ಅಧಿಕಾರಕ್ಕೆ ಬಂದಾಗಿನಿಂದಲೂ ಹೆಚ್ಚು ಕಡಿಮೆ ಹುಚ್ಚು ದರ್ಬಾರನ್ನೇ ನಡೆಸಿಕೊಂಡು ಬರುತ್ತಿದ್ದಾರೆ. ಪಶ್ಚಿಮಬಂಗಾಳದ ಸಿಇಓ ನೇಮಕ ವಿವಾದ ಅವರ ಹುಚ್ಚು ದರ್ಬಾರಿನ ಇತ್ತೀಚಿನ ಪ್ರಕರಣವಾಗಿತ್ತು. ಮುಖ್ಯ ಚುನಾವಣಾ ಕಮಿಷನರ್ ಮತ್ತು ಪಶ್ಚಿಮಬಂಗಾಳ ಸರಕಾರದ ಮಧ್ಯೆ ಅನವಶ್ಯಕವಾಗಿ ಸಂಘರ್ಷವನ್ನು ಶೇಷನ್ ಹುಟ್ಟಿಸಿದರು.

ಹಂಗಾಮಿ ಸಿಇಓ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಲೀನಾ ಚಕ್ರವರ್ತಿ 1992 ರ ಜುಲೈನಲ್ಲಿ ಸ್ವಯಂ ಇಚ್ಛೆಯಿಂದ ಆ ಹುದ್ದೆಯಿಂದ ಬಿಡುಗಡೆ ಪಡೆದಿದ್ದರು. ಅಂದಿನಿಂದ ಆ ಹುದ್ದೆ ಖಾಲಿಯಾಗಿತ್ತು. ಇತ್ತೀಚೆಗೆ ರಾಜ್ಯ ಸರಕಾರ ತನ್ನ ಹಕ್ಕನ್ನು ಚಲಾಯಿಸಿ ಸಿಇಓ ಹುದ್ದೆಗೆ ಕೆಲವು ಅಧಿಕಾರಿಗಳ ಹೆಸರನ್ನು ಶಿಫಾರಸು ಮಾಡಿ ಆಯೋಗಕ್ಕೆ ಕಳಿಸಿತ್ತು. ಆದರೆ ಶೇಷನ್ ಹಲವು ಷರತ್ತುಗಳನ್ನು ಹಾಕಿ ಅನವಶ್ಯಕವಾಗಿ ವಿವಾದವನ್ನು ಎಬ್ಬಿಸಿದರು.

ರಾಜ್ಯ ಸರಕಾರದ ಮನವಿ ಹಾಗೂ ಶಿಫಾರಸನ್ನು ತಳ್ಳಿ ಹಾಕಿದ್ದರಿಂದ ಸರಕಾರ ಅಂತಿಮವಾಗಿ ನ್ಯಾಯಾಲಯದ ಮೊರೆ ಹೋಗಬೇಕಾಯಿತು. ಇದೀಗ ಕಲ್ಕತ್ತ ಹೈಕೋರ್ಟ್ ಚುನಾವಣಾ ಆಯೋಗಕ್ಕೆ ಮಂಗಳಾರತಿಯಾಗುವಂತಹ ತೀರ್ಪನ್ನು ನೀಡಿದೆ. ಸರಕಾರ ಶಿಫಾರಸು ಮಾಡಿರುವ ಅಧಿಕಾರಿಗಳಲ್ಲಿ ಒಬ್ಬರನ್ನು ನೇಮಕ ಮಾಡಲು ಆಯೋಗ ಒಪ್ಪಿಕೊಂಡಿದ್ದು ವಿವಾದಕ್ಕೆ ತೆರೆ ಬಿದ್ದಿದೆ.

ತ್ರಿಪುರಾ ವಿವಾದ

ಈ ನಡುವೆ ತ್ರಿಪುರಾಕ್ಕೆ ಸಂಬಂಧಿಸಿದಂತೆ ಒಂದು ವಿವಾದವೆದ್ದಿದೆ. ಉದ್ದೇಶಪೂರ್ವಕವಾಗಿ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ತ್ರಿಪುರಾದ ಮುಖ್ಯ ಚುನಾವಣಾ ಅಧಿಕಾರಿಗೆ ಆಯೋಗ ಛೀಮಾರಿ ಹಾಕಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಲು ಬಯಸಿದೆ. ಆದರೆ ಇದನ್ನು ತ್ರಿಪುರಾ ಸರಕಾರ ವಿರೋಧಿಸಿದೆ

ತಪ್ಪಿತಸ್ಥ ಅಧಿಕಾರಿ ಚುನಾವಣಾ ಕಾರ್ಯದಲ್ಲಿ ಪಾಲ್ಗೊಳ್ಳದಂತೆ ತಡೆಯಬಹುದೇ ಹೊರತು ಅವರ ವಿರುದ್ಧ ಆಯೋಗವೇ ಕ್ರಮ ಕೈಗೊಳ್ಳಲು ಆಗುವುದಿಲ್ಲ. ಶಿಸ್ತು ಕ್ರಮ ಕೈಗೊಳ್ಳುವುದು ಚುನಾವಣಾ ಕಮಿಷನರ್ ವ್ಯಾಪ್ತಿಗೆ ಬರುವುದಿಲ್ಲ.

ಉತ್ತರ ಪ್ರದೇಶ ಕೃಷಿ ಕಾರ್ಮಿಕರ ಧರಣಿ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಉತ್ತರ ಪ್ರದೇಶ ರಾಜ್ಯ ಸಮಿತಿ ಇತ್ತೀಚೆಗೆ ರಾಜ್ಯ ವಿಧಾನಸಭೆ ಮುಂದೆ ಬೃಹತ್ ಧರಣಿ ಸತ್ಯಾಗ್ರಹವೊಂದನ್ನು ಏರ್ಪಡಿಸಿತ್ತು. ದೇಶದ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ಈ ರಾಜ್ಯದ ಕೃಷಿ ಕಾರ್ಮಿಕರನ್ನು ಜೀವನಸ್ಥಿತಿ ಹೀನವಾಗಿದ್ದು ಅದನ್ನು ಸುಧಾರಿಸಲು ಹಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಪಡಿಸುವ ಮನವಿ ಪತ್ರವೊಂದನ್ನು ರಾಜ್ಯಪಾಲರಿಗೆ ಸಲ್ಲಿಸಲಾಯಿತು.

ರಾಜ್ಯದೆಲ್ಲೆಡೆಯಿಂದ ಬಂದ ಸುಮಾರು 500 ಕ್ಕೂ ಹೆಚ್ಚು ಪ್ರತಿನಿಧಿಗಳು ಧರಣಿಯಲ್ಲಿ ಭಾಗವಹಿಸಿದ್ದರು. ಕೃಷಿ ಕೂಲಿಕಾರರ ಸಂಘದ ಕೇಂದ್ರ ಹಾಗೂ ರಾಜ್ಯ ನಾಯಕರಾದ ಸುನೀಲ್ ಚೋಪ್ರಾ, ಅಂಬಿಕಾ ಪ್ರಸಾದ್ ಶರ್ಮಾ, ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ರಾಮ್ ಸುಮೇರ್ ಯಾದವ್ ಮೊದಲಾದವರು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.

'ತೀಕದಿರ್'ಗೆ 30ರ ಸಂಭ್ರಮ

'ತೀಕದೀರ್'- ಇದು ತಮಿಳುನಾಡಿನ ಪ್ರಗತಿಪರ ಚಳುವಳಿಯಲ್ಲಿ ವಿಶೇಷವಾಗಿ ದುಡಿಮೆಗಾರರ ಆಂದೋಳನದಲ್ಲಿ ನಿರತರಾಗುವವರಿಗೆ ಚಿರಪರಿಚಿತ ಹೆಸರು. ಹೌದು, ಇದು ಆ ರಾಜ್ಯದ ದುಡಿಯುವ ಜನರ ಗಟ್ಟಿದನಿ.

ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿಯ ಮುಖವಾಣಿಯಾದ 'ತೀಕದಿರ್' ಮಧುರೆಯಿಂದ ಪ್ರಕಟವಾಗುತ್ತಿದೆ. ಭಾರತದ ದುಡಿಯುವ ಜನರ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗೆ, ಅದರಲ್ಲೂ ಮುಖ್ಯವಾಗಿ ತಮಿಳುನಾಡಿನ ಚಳುವಳಿಗೆ ಸೇವೆ ಸಲ್ಲಿಸುತ್ತಿರುವ ಇದಕ್ಕೆ 1993 ಜೂನ್ 29 ರಂದು 30 ವರ್ಷ ತುಂಬಿತ್ತು.

50 ಹಾಗೂ 60ರ ದಶಕದಲ್ಲಿ ಕಂಡುಬಂದ ಪರಿಷ್ಕರಣವಾದ ; 1962ರ ಭಾರತ-ಚೀನಾ ಗಡಿಯುದ್ಧದ ಸಂದರ್ಭದಲ್ಲಿ ಕಮ್ಯುನಿಸ್ಟ್ ನಾಯಕರ ಬಂಧನ - ಈ ಎಲ್ಲವುಗಳ ಹಿನ್ನೆಲೆಯಲ್ಲಿ ಅವಿಭಜಿತ ಸಿಪಿಐನಲ್ಲಿದ್ದ ಉತ್ಸಾಹಿ ಸಂಗಾತಿಗಳು ವಾರಪತ್ರಿಕೆಯೊಂದನ್ನು ಹೊರಡಿಸಲು ನಿರ್ಧರಿಸಿದರು. ಆ ಸಂಗಾತಿಗಳ ತ್ಯಾಗ ಹಾಗೂ ದೃಢ ನಿರ್ಧಾರದ ಫಲವೇ ತೀಕದಿರ್. 1963 ಜೂನ್ 29 ರಂದು ಅದು ಜನ್ಮ ತಾಳಿತು. ಮಾರ್ಕ್ಸ್‌ವಾದ- ಲೆನಿನ್‌ವಾದವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಹುಟ್ಟಿದ ಪತ್ರಿಕೆ ಇಂದಿಗೂ ಆ ಗುರಿಯನ್ನು ಮುಂದುವರಿಸಿಕೊಂಡು ಬಂದಿದೆ.

ಸಮಾರಂಭ : ತೀಕದಿರ್ 30 ವಸಂತಗಳನ್ನು ಕಳೆದ ಸಂದರ್ಭವನ್ನು ಸಂಭ್ರಮದಿಂದ ಆಚರಿಸಿದೆ. ಜೂನ್ 25 ರಂದು ವಾರ್ಷಿಕೋತ್ಸವದ ಆರಂಭೋತ್ಸವ ದೊಡ್ಡ ರೀತಿಯಲ್ಲಿ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಡಿ. ಲಕ್ಷ್ಮಣನ್ ತೀಕದಿರ್‌ನ ಇತಿಹಾಸದ ಕೆಲವು ಪ್ರಮುಖ ಘಟನೆಗಳನ್ನು ಬಿಂಬಿಸುವ ಪ್ರದರ್ಶನವೊಂದನ್ನು ಅಂದು ಉದ್ಘಾಟಿಸಿದರು.

ಮುಖ್ಯ ಕಾರ್ಯಕ್ರಮ 26 ರಂದು ನಡೆಯಿತು. ಹಲವಾರು ರಾಜಕೀಯ ಪಕ್ಷಗಳ ನಾಯಕರು ಈ ಸಮಾರಂಭದಲ್ಲಿ ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ತೀಕದಿರ್‌ನ ಹಳೆಯ ಹುಲಿಗಳಾದ ಆರ್. ರಾಮರಾಜ, ಎಸ್.ಗಿರಿ ಮತ್ತು ಮಯಾಂದಿ ಭಾರತಿಯವರನ್ನು ಸನ್ಮಾನಿಸಲಾಯಿತು. ಸಂಪಾದಕ ಕೆ. ಮುತ್ತಯ್ಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಸಿಕ್ಕಿಮ್ ಜನರ ಹಕ್ಕುಗಳ ರಕ್ಷಣೆಗೆ ಪ್ರತಿಪಕ್ಷಗಳ ಒಗ್ಗಟ್ಟು

ಸಿಕ್ಕಿಮ್‌ನಲ್ಲಿ ಪ್ರಜಾಪ್ರಭುತ್ವವನ್ನು ಮರಳಿ ಸ್ಥಾಪಿಸಲು ಹಾಗೂ ರಾಜ್ಯದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ಸ್ವಾತಂತ್ರ್ಯವನ್ನು ರಕ್ಷಿಸಲಿಕ್ಕಾಗಿ ಸಿಪಿಐ(ಎಂ) ಸಹಿತವಾಗಿ ಸಿಕ್ಕಿಮ್‌ನ ಎಲ್ಲಾ ರಾಜಕೀಯ ಪಕ್ಷಗಳು ಒಂದೇ ವೇದಿಕೆಯಲ್ಲಿ ಸೇರಿದ ಮಹತ್ವದ ವಿದ್ಯಮಾನವೊಂದು ನಡೆದಿದೆ.

ಈ ಎಲ್ಲಾ ಪಕ್ಷಗಳು ಒಟ್ಟಾಗಿ ಜಂಟಿ ಕ್ರಿಯಾ ಸಮಿತಿ (ಜೆ.ಎ.ಸಿ.)ಯೊಂದನ್ನು ರಚಿಸಿಕೊಂಡಿದೆ. ಇನ್ನು ಮುಂದೆ ಜೆ.ಎ.ಸಿ. ಆಶ್ರಯದಲ್ಲಿ ರಾಜಕೀಯ ಕಾರ್ಯಕ್ರಮವನ್ನು ನಡೆಸಲು ಅವು ನಿರ್ಧರಿಸಿದೆ.

ಸಿಕ್ಕಿಂ ಸಂಗ್ರಾಮ ಪರಿಷತ್ (ಎಸ್.ಎಸ್.ಪಿ.) ರಾಜ್ಯದಲ್ಲಿ ಆಡಳಿತ ನಡೆಸುತ್ತಿದೆ. ಅದು 1979 ರಲ್ಲಿ ಅಧಿಕಾರಕ್ಕೆ ಬಂದಿಂದಿನಿಂದ ಅಪ್ರಜಾಸತ್ತಾತ್ಮಕ ರೀತಿಯಲ್ಲಿ ವರ್ತಿಸುತ್ತಿದೆ. ಇದರಿಂದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ಸ್ವಾತಂತ್ರ್ಯ ಹರಣಗೊಂಡಿದೆ. ಈ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳು ಈ ತೀರ್ಮಾನಕ್ಕೆ ಬಂದಿವೆ.

ಬಾಳಾಠಾಕ್ರೆಯನ್ನು ಕಂಗೆಡಿಸಿದ ಸಿಬಿಐ

ಅಯೋಧ್ಯೆಯಲ್ಲಿನ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ಪ್ರಕರಣದಲ್ಲಿ ಹಾಗೂ ತದನಂತರ ಮುಂಬಯಿಯಲ್ಲಿ ನಡೆದ ಕೋಮುದಂಗೆಗಳಲ್ಲಿ ಶಿವಸೇನೆಯ ಕೈವಾಡವಿದೆ ಎಂಬ ಹಿನ್ನೆಲೆಯಲ್ಲಿ ಕೇಂದ್ರೀಯ ತನಿಖಾ ದಳದ (ಸಿಬಿಐ) ಉನ್ನತ ಅಧಿಕಾರಿಗಳು ಮುಂಬಯಿಯಲ್ಲಿ ಜುಲೈ ಐದರಂದು ಶಿವಸೇನೆ ನಾಯಕ ಬಾಳಠಾಕ್ರೆಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದರು.

ಸಿಬಿಐ ವಿಚಾರಣೆಯಿಂದ ಠಾಕ್ರೆ ಹತಾಶಗೊಂಡಿರುವುದಾಗಿ ವರದಿಯಾಗಿದೆ.

ತನಿಖೆಯಿಂದ ಪಕ್ಷದ ನಾಯಕತ್ವ ಕೂಡಾ ಮುಜುಗರದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಪರಿಸ್ಥಿತಿ ಎಲ್ಲಿಯವರೆಗೆ ಹೋಗಿದೆಯೆಂದರೆ ಠಾಕ್ರೆ ವಿಚಾರಣೆಗೆ ಒಳಪಟ್ಟ ವಿಚಾರವನ್ನು ಬಹಳ ಗುಪ್ತವಾಗಿ ಇರಿಸಲು ಪ್ರಯತ್ನಗಳು ನಡೆದಿವೆ!

ಸಿಬಿಐ ಅಧಿಕಾರಿಗಳು ತನಿಖೆ ನಡೆಸಿದಾಗಿನಿಂದ 'ಮಹಾರಾಷ್ಟ್ರ ಹುಲಿ'ಗೆರ ನಿದ್ದೆಯೇ ಬೀಳುತ್ತಿಲ್ಲವಂತೆ ಛೇ, ಪಾಪ.......

●

ಕೃಷಿಕೂಲಿಗಾರರ ಸಂಘದ ನೇತೃತ್ವ ಹೋರಾಟ ನಿರತ ಗಂಗಾವತಿ ಜನರು

ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನ ಬಡ ಕೃಷಿಕೂಲಿಗಾರರು ಹಾಗೂ ಇತರ ಸಾರ್ವಜನಿಕ ವಿಭಾಗಗಳ ಕುಂದುಕೊರತೆಗಳನ್ನು ನಿವಾರಿಸುವಂತೆ ಆಗ್ರಹಪಡಿಸಿ ತಾಲೂಕು ಕೃಷಿ ಕೂಲಿಗಾರರ ಸಂಘ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿಗಳನ್ನು ಅರ್ಪಿಸಿತ್ತು. ಅಧಿಕಾರಿಗಳು ಹಾಗೂ ಸ್ಥಳೀಯ ಶಾಸಕರು ಇದಕ್ಕೆ ಸ್ಪಂದಿಸದೇ ಹೋದಾಗ ಅನೇಕ ಸುತ್ತಿನ ಹೋರಾಟಗಳನ್ನು ಸಂಘ ನಡೆಸಿತ್ತು. ಇಷ್ಟೆಲ್ಲಾ ಆದರೂ ಈ ಭಾಗದ ಜನರ ಶೋಷಿತ ಅಳು ಆಳುವವರ ಕಿವಿ ಮೇಲೆ ಬಿದ್ದಂತಿಲ್ಲ. ಅದಕ್ಕಾಗಿ ಸಂಘದ ನೇತೃತ್ವದಲ್ಲಿ ಸಾರು ಜನರು ಈಗ ಸಂಘರ್ಷದ ರಣಕ ಊದಿದ್ದಾರೆ.

ವಿವಿಧ ಸ್ವರೂಪದ ಹೋರಾಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದರ ಅಂಗವಾಗಿ ಜೂನ್ 16 ರಂದು ತಹಸಿಲ್ದಾರರ ಕಚೇರಿ ಮುಂದೆ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಲಾಯಿತು. ಜೂನ್ 25 ನೇ [illegible] ಉಪವಾಸ ಸತ್ಯಾಗ್ರಹವನ್ನು ಆರಂಭಿಸಲಾಗಿದೆ. ತಹಶೀಲ್ದಾರ ಕಚೇರಿ ಮುಂದೆ ಮೊದಲ ದಿನ ನಡೆದ ಸತ್ಯಾಗ್ರಹದಲ್ಲಿ ಎಂಟು ಗ್ರಾಮಗಳಿಂದ ಬಂದ ಸುಮಾರು 300 ಜನರು ಭಾಗವಹಿಸಿದ್ದರು. ಕೃಷಿ ಕೂಲಿಗಾರರ ಸಂಘ [illegible]ಪಿಸಿರುವ ಹೋರಾಟ ಕಾರ್ಯಕ್ರಮ ಜನರಲ್ಲಿ ಸ್ಫೂರ್ತಿ ತುಂಬಿ ಉತ್ಸಾಹದಿಂದ ಮುನ್ನುಗ್ಗುತ್ತಿದ್ದಾರೆ.

ಸ್ಥಳೀಯ ಶಾಸಕರೇ ಕೃಷಿ ಕೂಲಿಗಾರರ ವಿರೋಧಿಯಾಗಿ ವರ್ತಿಸುತ್ತಿರುವುದು, ಭೂ ಸ್ವಾಧೀನ ಕೊಡುವಲ್ಲಿ ಕೆಲವು ಭೂಮಾಲಿಕರಿಗೆ ಸಹಾಯಕರಾಗಿ ನಿಂತಿರುವುದು ಮೊದಲಾದ ಹಿನ್ನೆಲೆಗಳಲ್ಲಿ ನಡೆಯುತ್ತಿರುವ ಈ ಸಂಘರ್ಷ ಮಹತ್ವದ್ದಾಗಿದೆ. ಆಮರಣ ಉಪವಾಸ ಸತ್ಯಾಗ್ರಹವನ್ನು ನಡೆಸಲು ಯೋಜಿಸಲಾಗಿದ್ದು ಸೆಪ್ಟೆಂಬರ್ ಏಳರಂದು ಪಿಕೆಟಿಂಗ್ ನಡೆಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಸಂಘ ಮುಂದಿಟ್ಟಿರುವ ಪ್ರಮುಖ ಬೇಡಿಕೆಗಳು ಈಡೇರುವವರೆಗೂ ಹೋರಾಟವನ್ನು ನಡೆಸಲಾಗುವುದೆಂದು ಕಾರ್ಯದರ್ಶಿ ಸಂಗಾಪುರ ಹುಲುಗಪ್ಪ ತಿಳಿಸಿದ್ದಾರೆ.

ಹಿಂದಿ ಏರಿಕೆ ಮತ್ತು ಪಿ.ಯು.ಸಿ. ಶುಲ್ಕ ಹೆಚ್ಚಳದ ವಿರುದ್ಧ

ಎಸ್.ಎಫ್.ಐ. ಪ್ರತಿಭಟನೆ

ಕೋಲಾರ: ಎಸ್.ಎಫ್.ಐ. ರಾಜ್ಯ ಸಮಿತಿಯ ಕರೆಯ ಮೇರೆಗೆ ಪ್ರೌಢಶಾಲದಲ್ಲಿ ಮೂರನೆ ಭಾಷೆಯನ್ನು ಮೊದಲಿದ್ದ ಐವತ್ತು ಅಂಕಗಳಿಂದ ನೂರು ಅಂಕಗಳಿಗೇರಿಸಿರುವುದನ್ನು ಮತ್ತು ಐಚ್ಛಿಕಗಳನ್ನು 100 ಅಂಕಗಳಿಂದ 125 ಅಂಕಗಳಿಗೇರಿಸಿರುವುದನ್ನು ವಿರೋಧಿಸಿ ಪಿ.ಯು.ಸಿ. ಶುಲ್ಕ ಶೇ. 100 ರಷ್ಟು ಏರಿಕೆಯನ್ನು ವಿರೋಧಿಸಿ ಪ್ರತಿಭಟನಾ ಮೆರವಣಿಗೆಯನ್ನು ಸ್ಥಳೀಯ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯ ಮೈದಾನದಿಂದ ಜಿಲ್ಲಾಧಿಕಾರಿ ಕಛೇರಿಗೆ ವಿದ್ಯಾರ್ಥಿ ಮೆರವಣಿಗೆಯನ್ನು ಏರ್ಪಡಿಸಿ, ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಅರ್ಪಿಸಲಾಯಿತು. ಸುಮಾರು 400 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ರಾಜ್ಯ ಉಪಾಧ್ಯಕ್ಷರು ಮತ್ತು ಕೋಲಾರ ಜಿಲ್ಲಾ ಅಧ್ಯಕ್ಷರಾದ ಎಂ.ವಿ. ನಾರಾಯಣಸ್ವಾಮಿ ಮಾತನಾಡುತ್ತಾ ವಿದ್ಯಾರ್ಥಿ ವಿರೋಧಿ ನಿಲುವು ಇದಾಗಿದೆ. ತ್ರಿಭಾಷೆಯನ್ನು ಕಲಿಯುವವರಲ್ಲಿಯೇ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತುಂಬಾ ಸಮಯ ವ್ಯಯವಾಗುತ್ತದೆ. ಉಳಿದ ಐಚ್ಛಿಕ ವಿಷಯಗಳನ್ನು ಕಲಿಯುವಲ್ಲಿ ಸಮಯವಿರುವುದಿಲ್ಲ. ಐಚ್ಛಿಕ ವಿಷಯಗಳು ಪ್ರೌಢಶಾಲೆಯಲ್ಲಿ ಕಲಿತದ್ದೇ ಅಂತಿಮವಾಗುತ್ತದೆ. ಕಾಲೇಜಿಗೆ ಬಂದಾಗ ಕೇವಲ ವಿಷಯ ಮಾತ್ರ ಓದುತ್ತಾರೆ. ಹೀಗಾಗಿ ಈ ಮಾತೃಭಾಷೆಯ ಹೊರೆ ತೆಗೆಯುವವರೆಗೆ ನಿರಂತರ ಹೋರಾಟ ಸಂಘಟನಾತ್ಮಕವಾಗಿ ಮುಂದುವರಿಸಬೇಕೆಂದರು. ಪಿ.ಯು.ಸಿ. ಶುಲ್ಕ ಏರಿಕೆಯನ್ನು ಖಂಡಿಸಿದರು.

ಈ ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾ ಉಪಾಧ್ಯಕ್ಷರಾದ ಶ್ರೀರಾಮ್. ಎನ್. ಎನ್., ಜಿಲ್ಲಾ ಸಮಿತಿ ಸದಸ್ಯರಾದ ಕೆ.ಎಸ್. ನಾರಾಯಣಸ್ವಾಮಿ, ಮುನಿಕೃಷ್ಣಪ್ಪವಹಿಸಿದ್ದರು.

ಶ್ರೀನಿವಾಸಪುರ : ಈ ಕಾರ್ಯಕ್ರಮ ಜರುಗಿ ಜೂನಿಯರ್ ಕಾಲೇಜ್ ಮೈದಾನದಿಂದ ತಹಶೀಲ್ದಾರ್‌ಕಛೇರಿಗೆ ಮೆರವಣಿಗೆ ಮಾಡಿ ತಹಶೀಲ್ದಾರಿಗೆ ಮನವಿ ನೀಡಲಾಯಿತು. ಸುಮಾರು 200 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದ ನೇತೃತ್ವವನ್ನು ಜಿಲ್ಲಾ ಸಹ ಕಾರ್ಯದರ್ಶಿ ಪಿ. ಆರ್. ನಾರಾಯಣಸ್ವಾಮಿ ವಹಿಸಿದ್ದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪಿ. ಆರ್. ನಾರಾಯಣಸ್ವಾಮಿ ಮಾತನಾಡಿದರು.

ಚಿಂತಾಮಣಿ: 100 ಜನರು ಸರ್ಕಾರಿ ಪ್ರೌಢಶಾಲಾ ಆವರಣದಿಂದ ಮೆರವಣಿಗೆ ಹೊರಟು ತಹಶೀಲ್ದಾರರಿಗೆ ಮನವಿ ನೀಡಲಾಯಿತು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಎಸ್.ಎಫ್.ಐ. ಮಾಜಿ ಅಧ್ಯಕ್ಷರು ಮತ್ತು ಡಿ.ವೈ.ಎಫ್‌ಐ ಜಿಲ್ಲಾ ಕಾರ್ಯದರ್ಶಿಗಳಾದ ಎಮ್.ಎಸ್. ಆನಂದ್ ಮತ್ತು ಆರ್. ನರಸಿಂಹಯ್ಯ ಮಾತನಾಡಿದರು. ಕಾರ್ಯಕ್ರಮದ ನೇತೃತ್ವವನ್ನು ಎಸ್.ಎಫ್.ಐ. ಜಿಲ್ಲಾ ಸಹ ಕಾರ್ಯದರ್ಶಿ ಆರ್. ನರಸಿಂಹಯ್ಯ ವಹಿಸಿದ್ದರು.

ಸಂತಾಪ

ದಕ್ಷಿಣ ಜಿಲ್ಲೆಯ ಕಲ್ಲಾಪುನಲ್ಲಿ ಪಕ್ಷದ ಹಿತೈಷಿಗಳಾಗಿದ್ದ ಕಾಂ ಎನ್.ಸಿ. ಕುಟ್ಟಿ ದಿನಾಂಕ ಮೇ 25,93 ರಂದು ನಿಧನರಾದರು.

ಪಕ್ಷದೊಂದಿಗೆ ಹಲವಾರು ವರ್ಷಗಳಿಂದ ನಿರಂತರ ನಿಕಟ ಸಂಪರ್ಕವನ್ನಿಟ್ಟು ಪಕ್ಷದ ಕರೆಯನ್ನು ನಿಷ್ಠೆಯಿಂದ ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದ ಕಾಂ ಎನ್.ಸಿ. ಕುಟ್ಟಿಯವರಿಗೆ ಕಲ್ಲಾಪು ಶಾಖೆ ತನ್ನ ಗೌರವ ಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ.

● ಇರಾಕ್ ಮೇಲೆ ಅಮೇರಿಕ ಕ್ಷಿಪಣಿ ದಾಳಿ ನಡೆಸಿದೆ. ಇರಾಕಿ ಗುಪ್ತಚರ ಪಡೆ ಮುಖ್ಯ ಕಛೇರಿ ಮೇಲೆ ಮಾಡಲಾಗಿದೆ ಎನ್ನಲಾಗದ ದಾಳಿ, ಕುವೈತ್ ಭೇಟಿಯಲ್ಲಿ ಬುಶ್ ಕೊಲೆ ಸಂಚಿಗೆ ಪ್ರತೀಕಾರ ಎಂದು ಅಧ್ಯಕ್ಷ ಕ್ಲಿಂಟನ್ ಹೇಳಿದ್ದಾರೆ. ಆದರೆ ಸಿಐಎಯ ಗುಪ್ತವರದಿ ಇದನ್ನು ಅಲ್ಲಗಳೆದಿದೆ. ನಿಜವಾದ ಉದ್ದೇಶ ತಾನು 'ದುರ್ಬಲ ಅಧ್ಯಕ್ಷ'ಅಲ್ಲ ಎಂದು ಸಾಧಿಸಲು ಎಂದು ಹೇಳಲಾಗುತ್ತಿದೆ. ಹಲವಾರು ನಾಗರಿಕರ ಸಾವು ನೋವು ಈ ಧಾಳಿಯಲ್ಲಿ ಸಂಭವಿಸಿದೆ.

● ದಕ್ಷಿಣ ಆಫ್ರಿಕಾದಲ್ಲಿ ಚುನಾವಣೆ ಎಪ್ರಿಲ್ 27 ರಂದು ಎಂದು 26 ಪಕ್ಷಗಳ ಬಹು ಪಕ್ಷೀಯ ಸಭೆ ನಿರ್ಧರಿಸಿದೆ. ತಾತ್ಕಾಲಿಕ ಸಂವಿಧಾನವೊಂದನ್ನು ರಚಿಸಲು ಆದ ಒಪ್ಪಂದ ವರ್ಣಭೇದ ತೊಡೆಯುವಲ್ಲಿ ಚಾರಿತ್ರಿಕ ಒಪ್ಪಂದ.

● ನೇಪಾಳದಲ್ಲಿ ಎಡರಂಗ ಹಾಗೂ ಸರ್ಕಾರದ ನಡುವೆ ಘರ್ಷಣೆ. ಕಮ್ಯುನಿಸ್ಟ್ ಪಕ್ಷದ ಇಬ್ಬರು ಹಿರಿಯ ನಾಯಕರ ಕೊಲೆ ಬಗ್ಗೆ ಸುಪ್ರಿಂ ಕೋರ್ಟ್ ನ್ಯಾಯಾಧೀಶರಿಂದ ತನಿಖೆ ಹಾಗೂ ಪ್ರಧಾನಿ ರಾಜೀನಾಮೆ ಒತ್ತಾಯಿಸಿ ಎಡಪಕ್ಷಗಳು ಸಾಮೂಹಿಕ ಪ್ರತಿಭಟನೆ, ಮುಷ್ಕರಗಳಿಗೆ ಕರೆ ನೀಡಿದೆ. ನೇಪಾಳಿ ಸರ್ಕಾರ ನಡುಗಲಾರಂಭಿಸಿದೆ.



ಅಮೇರಿಕದಿಂದ ಮತ್ತೊಮ್ಮೆ ರಾಕ್ಷಸೀ ಕೃತ್ಯ

ತನ್ನ ದೌರ್ಬಲ್ಯವನ್ನು ಮುಚ್ಚಲು ಇರಾಕ್‌ನ ಮೇಲ್ ಕ್ಲಿಂಟನ್ ಧಾಳಿ

-- ಶರತ್ ಚಂದ್ರ

ಇರಾಕ್ ರಾಜಧಾನಿ ಬಾಗ್ದಾದ್ ಮೇಲೆ ಅಮೇರಿಕ ಪುನಃ ಇದ್ದಕ್ಕಿದ್ದ ಹಾಗೆ ಕ್ಷಿಪಣಿ ದಾಳಿ ನಡೆಸಿದೆ. ಹಿಂದೆ ಕುವೈತ್ ಭೇಟಿ ಸಮಯದಲ್ಲಿ ಮಾಜಿ ಅಧ್ಯಕ್ಷ ಬುಶ್‌ರ ಭೇಟಿ ಕಾಲದಲ್ಲಿ ಅವರ ಕೊಲೆಗೆ ಪಿತೂರಿ ನಡೆಸಿದ ಕಾರಣಕ್ಕಾಗಿ ಬಾಗ್ದಾದ್‌ನಲ್ಲಿರುವ ಇರಾಕ್‌ನ ಗುಪ್ತಚರ ಕಚೇರಿಯ ಮೇಲೆ ದಾಳಿ ನಡೆಸಿರುವುದಾಗಿ ಅಧ್ಯಕ್ಷ ಕ್ಲಿಂಟನ್‌ನವರ ಅಂಬೋಣ. ಆದರೆ ಇದು ನಿಜವಲ್ಲ. ನಿಜವಾದ ಕಾರಣ ಬೇರೆ ಎಂಬುದಕ್ಕೆ ಹಲವಾರು ಪುರಾವೆಗಳು ದೊರಕಿವೆ. ಅಧ್ಯಕ್ಷ ಕ್ಲಿಂಟನ್ ಆರ್ಥಿಕಕ್ಷೇತ್ರದಲ್ಲಿ ಏನೂ ಸಾಧಿಸಿಲ್ಲ. ಆರ್ಥಿಕ ಚೇತರಿಕೆ, ಜನರ ಸಮಸ್ಯೆಗಳಿಗೆ ಗಮನಕೊಡುತ್ತಾರೆ ಎಂಬ ಜನರ ಭ್ರಮೆ ನಿರಸನವಾಗುತ್ತಿದೆ. ಇದನ್ನು ತಡೆದು, ಇತರ ದೇಶಗಳ ಮೇಲೆ ದಾಳಿ ಮಾಡಿ ಜನಮರಳು ಮಾಡುವ ಅಮೇರಿಕದ ಅಧ್ಯಕ್ಷರು ಹಳೆಯ ಆಟಕ್ಕೆ ಮೊರೆ ಹೋಗಿದ್ದಾರೆ ಎಂದು ಅಮೇರಿಕ ಹಾಗೂ ಇತರ ಪಾಶ್ಚಿಮಾತ್ಯ ದೇಶಗಳ ಪತ್ರಿಕೆಗಳಂತೂ ಹೇಳಿವೆ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ ಈ ದಾಳಿ. ವಿಶ್ವಸಂಸ್ಥೆಯ ಭದ್ರತಾ ಸಮಿತಿ ಈ ಅನಾಗರಿಕ ದಾಳಿಯನ್ನು ಅನುಮೋದಿಸುವ ಮೂಲಕ ತಾನು ಅಮೇರಿಕದ 'ರಬ್ಬರ್ ಸ್ಟಾಂಪ್' ಎಂದು ಪುನಃ ಪ್ರದರ್ಶಿಸಿದೆ. ಮೂರನೇ ಜಗತ್ತಿನ ದೇಶಗಳೂ (ಭಾರತ ಸೇರಿದಂತೆ) ಭಯೋತ್ಪಾದನೆಯ ವಿರುದ್ಧ ಕ್ರಮ ಅಗತ್ಯ ಇತರ ದೇಶಗಳ ಸಾರ್ವಭೌಮತೆ ಅನಗತ್ಯವಾಗಿ ಉಲ್ಲಂಘಿಸಬಾರದು. ಹಿಂಸಾತ್ಮಕ ಕಾರ್ಯಾಚರಣೆಗೆ ಇಳಿಯಬಾರದು ಇತ್ಯಾದಿಯಾಗಿ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಹೇಳಿಕೆ ನೀಡಿವೆ. ಸ್ಪಷ್ಟವಾಗಿ ಅಮೇರಿಕ ಕಾರ್ಯಾಚರಣೆಯನ್ನು ಖಂಡಿಸಿಲ್ಲ. ಅರಬ್ ದೇಶಗಳಲ್ಲಿ ಮಾತ್ರ ಕುವೈತ್ ಬಿಟ್ಟರೆ ಯಾವುದೇ ದೇಶ ಈ ದಾಳಿಯನ್ನು ಸಮರ್ಥಿಸಿಲ್ಲ.

ಇರಾಕ್ ಗುಪ್ತಚರ ಪಡೆ ಬುಶ್‌ರ ಕೊಲೆಗೆ ಸಂಚು ಮಾಡಿದ್ದು ನಿಜವಾದರೂ ಈ ದಾಳಿಯನ್ನು ಸಮರ್ಥಿಸಿಕೊಳ್ಳುವುದು ಹಾಸ್ಯಾಸ್ಪದ. ಆದರೆ ಆ ವರದಿಯೂ ಸುಳ್ಳು ಎಂದು ಅಮೇರಿಕದ ಪತ್ರಿಕೆ 'ಬೋಸ್ಟನ್ ಗ್ಲೋಬ್' ವರದಿ ಮಾಡಿದೆ. ಅದರ ಸುದ್ದಿಯ ಮೂಲ ಇನ್ಯಾವುದೂ ಅಲ್ಲ. ಅಮೇರಿಕದ ಗುಪ್ತಚರ ಸಂಸ್ಥೆ ಸಿಐಎಯ ಗುಪ್ತ ವರದಿಯಡಿ ಅಧ್ಯಕ್ಷ ಬುಶ್‌ರ ಕುವೈಟ್ ಭೇಟಿ ಕಾಲದಲ್ಲಿ ಈ 'ಸಂಚಿನ' ಆಪಾದನೆಯಲ್ಲಿ ಬಂಧಿತರಾದವರು ಇರಾಕಿ ಗುಪ್ತಚರ ಪಡೆಗೆ ಸೇರಿದವರಾದರೂ, ಬುಶ್ ಕೊಲೆಗೆ ಪಿತೂರಿ ಹೂಡಿದ್ದರು ಎಂಬುದಕ್ಕೆಯಾವುದೇ ಆಧಾರವಿಲ್ಲ ಎಂದು ಸಿಐಎ ವರದಿಯೂ ಹೇಳಿದೆಯಂತೆ. ಒಂದು ತಿಂಗಳ ಹಿಂದೆ ಪ್ರಕಟವಾದ 'ಬೋಸ್ಟನ್ ಗ್ಲೋಬ್'ನ ವರದಿ ಕ್ಲಿಂಟನ್ ಈ 'ಆಪಾದನೆ'ಮೇಲೆ ಇರಾಕ್ ಮೇಲೆ ಕ್ಷಿಪಣಿ ದಾಳಿ ನಡೆಸುತ್ತಾರೆ ಎಂದು ಹೇಳಿತ್ತು. ಇಷ್ಟೇ ಸಾಕು ಅಮೇರಿಕದ ಸುಳ್ಳು ಬಯಲಿಗೆ ಎಳೆಯಲು.

ಇದೇ ರೀತಿ ಇನ್ನೊಂದು ಸುಳ್ಳು ಬಯಲಿಗೆ ಬಂದಿದೆ. ಕ್ಷಿಪಣಿ ದಾಳಿ ಬರಿಯ ಗುಪ್ತಚರ ಪಡೆಯ ಕಚೇರಿಗೆ ಮಾತ್ರ ಹಾನಿ ಉಂಟುಮಾಡಿತು. ಅಷ್ಟು ನಿಖರವಾಗಿತ್ತು. ಶುದ್ಧವಾಗಿತ್ತು ಕ್ಷಿಪಣಿ ದಾಳಿ ಎಂಬುದು ಈ ಸುಳ್ಳು. ಹಲವಾರು ಕ್ಷಿಪಣಿಗಳು ಗುರಿ ತಪ್ಪಿ ಅಕ್ಕಪಕ್ಕದ ಜನನಿವಾಸವಿರುವ ಪ್ರದೇಶಗಳಲ್ಲಿ ಹಲವಾರು ಜನ ಸತ್ತರು. ಕಟ್ಟಡಗಳಿಗೆ ಹಾನಿಯಾಯಿತು ಎಂದು ವರದಿಯಾಗಿದೆ.

ಇಂತಹ ಅನಾಗರಿಕ, ಬರ್ಬರ, ಅರ್ಥಹೀನ ದಾಳಿಯ ವಿರುದ್ಧ ಜಗತ್ತಿನಲ್ಲಿ ತೀವ್ರ ಜನಾಭಿಪ್ರಾಯ ರೂಪಿತವಾಗುತ್ತಿಲ್ಲ ಎಂಬುದು ಇಂದಿನ ಪರಿಸ್ಥಿತಿಯಲ್ಲಿರುವ ಅಪಾಯವನ್ನು ಸೂಚಿಸುತ್ತದೆ.

ದಕ್ಷಿಣ ಆಫ್ರಿಕಾದಲ್ಲಿ 27 ಎಪ್ರಿಲ್ 1994ರಂದು ಚುನಾವಣೆ

ದಕ್ಷಿಣ ಆಫ್ರಿಕಾದಲ್ಲಿ ಚುನಾವಣೆ ತಾರೀಖು ಘೋಷಿಸಲಾಗಿದೆ. ವರ್ಣಭೇದ ಕೊನೆಗಾಣಿಸುವ ಬಗ್ಗೆ ಮಾತುಕತೆ ನಡೆಸುತ್ತಿರುವ 26 ಪಕ್ಷಗಳು, ಗುಂಪುಗಳು 27 ಎಪ್ರಿಲ್ 1994 ರಂದು ಚುನಾವಣೆ ನಡೆಸುವ ಪ್ರಸ್ತಾಪಕ್ಕೆ ಅನುಮೋದನೆ ನೀಡಿದೆ. ಜುಲು ಆದಿವಾಸಿಗಳ ಇಂಕಾತಾ ಪಕ್ಷ ಸಮ್ಮೇಳನದಿಂದ ಹೊರನಡೆಯಿತು. ಇಂಕಾತಾ ಸೇರಿದಂತೆ ಆರು ವರ್ಣಭೇದಕ್ಕೆ ಪರವಾದ ಪಕ್ಷಗಳು ಚುನಾವಣಾ ತಾರೀಕು ನಿಗದಿಪಡಿಸುವುದನ್ನು ವಿರೋಧಿಸಿದವು. ಆದರೆ ಬಹುಮತದಿಂದ ಈ ತಾರೀಕು ಘೋಷಿಸುವ ನಿರ್ಣಯ ತೆಗೆದುಕೊಳ್ಳಲಾಯಿತು. 26 ಪಕ್ಷಗಳ ಈ ವೇದಿಕೆಯೇ ಚುನಾವಣೆ ನಡೆಯುವವರೆಗಿನ ತಾತ್ಕಾಲಿಕ ಸಂವಿಧಾನವನ್ನು ರಚಿಸಿ ಅಂಗೀಕರಿಸುವುದಾಗಿಯೂ ನಿರ್ಣಯಿಸಲಾಯಿತು. ಇದಕ್ಕಾಗಿ ತಾಂತ್ರಿಕ ಸಮಿತಿಯೊಂದನ್ನು ನೇಮಿಸಿದ್ದು, ಅದು ಎರಡು ವಾರಗಳೊಳಗಾಗಿ ಕರಡು ಸಂವಿಧಾನವನ್ನು ತಯಾರಿಸಿರುವುದು. ಈ ಒಪ್ಪಂದಕ್ಕೆ ಬರಲು ಏಎನ್‌ಸಿ ದಕ್ಷಿಣಾ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ, ಕೊಸಾಟು ಟ್ರೇಡ್ ಯೂನಿಯನ್‌ಗಳು ಸಾಮೂಹಿಕ ಕಾರ್ಯಾಚರಣೆ ಮೂಲಕ ಹಾಕುತ್ತಿದ್ದ ಒತ್ತಡವೂ ಕಾರಣವಾಗಿದೆ. ಜೋಹಾನ್ಸ್‌ಬರ್ಗ್‌ನ ಸಭೆಯ ಸ್ಥಳದ ಮೇಲೆ ಬಲಪಂಥೀಯ ಬಿಳಿಯ ವರ್ಣಭೇದ ಸಮರ್ಥಕ ಗುಂಪುಗಳು ದಾಳಿ ಮಾಡಿದ್ದನ್ನು ಪ್ರತಿಭಟಿಸಿ ಸಾಮೂಹಿಕ ಕಾರ್ಯಚರಣೆಗೆ ಕರೆಕೊಟ್ಟಿದ್ದ ಹಿಂದಿನ ದಿನ ಒಪ್ಪಂದ ಅಂಗೀಕೃತವಾಯಿತು ಎಂಬುದು ಕಾಕಾತಾಳೀಯವಲ್ಲ.

ಬಿಳಿಯ ಉಗ್ರಗಾಮಿ ನವ-ನಾಜಿಗಳ ಹಿಂಸಾಚಾರ, ತಡೆ ಇದ್ಯಾಗ್ಯೂ ಈ ಒಪ್ಪಂದಕ್ಕೆ ಬರಲು ಸಾಧ್ಯವಾಗಿದೆ ಎಂಬುದು ಗಮನಾರ್ಹ ಸಕಾರಾತ್ಮಕ ಬೆಳವಣಿಗೆ. ಎಎನ್‌ಸಿ ಹಾಗೂ ಇತರ ವರ್ಣಭೇದ ವಿರೋಧಿ ಗುಂಪುಗಳು, ಬಿಳಿಯ ಹಾಗೂ ಕರಿಯ ವರ್ಣಬೇಧ ಪರ ಗುಂಪುಗಳು 'ಹೋಂಲ್ಯಾಂಡ್' ಪ್ರಸ್ತಾಪವನ್ನು ವಿರೋಧಿಸಿದವು. ಇಂಕಾತಾದಂತಹ ಕರಿಯ ಗುಂಪುಗಳು, ಎಡಬ್ಲುಬಿ ನಂತಹ ನವ-ನಾಜಿ ಗುಂಪುಗಳು ಜನಾಂಗ ಆಧಾರದ ಮೇಲೆ ಸ್ವಯಮಾಡಳಿತವಿರುವ 'ಹೋಂ ಲ್ಯಾಂಡ್'ಗೆ ಸಂವಿಧಾನದಲ್ಲಿ ಅವಕಾಶವಿರಬೇಕು ಎಂದು ವಾದಿಸುತ್ತಿವೆ. ಇಂದು ಜನಾಂಗಭೇದ ಮತ್ತು ವರ್ಣಭೇದದ ಮುಂದುವರಿಕೆ ಎಂದು ಎಎನ್‌ಸಿ ವಿರೋಧಿಸುತ್ತಿದೆ. ●

ರಶ್ಯಾದ ಮೇಲೆ ಅಮೇರಿಕ ಒತ್ತಡ

ಭಾರತದ ಜಿಎಸ್‌ಎಲ್‌ವಿ ಉಪಗ್ರಹ ಕಾರ್ಯಕ್ರಮಕ್ಕೆ ರಶ್ಯಾ ಕ್ರಯೋಜೆನಿಕ್ ಇಂಜಿನ್ ಎಂಬ ಉಚ್ಛ ತಂತ್ರಜ್ಞಾನದ ಇಂಜಿನ್ ಮಾರಬೇಕಾಗಿತ್ತು. ಇದರ ಬಗ್ಗೆ ಒಂದು ಒಪ್ಪಂದವಾಗಿದೆ. ಆದರೆ ಈ ಒಪ್ಪಂದವನ್ನು ಮುರಿಯಲು ಅಮೇರಿಕ ಶಕ್ತಿ ಮೀರಿ ಪ್ರಯತ್ನಿಸುತ್ತಿದೆ. ರಶ್ಯಾದ ಮೇಲೆ ಒತ್ತಡ ಹೇರುತ್ತಿದೆ. ಭಾರತ ಹಾಗೂ ರಶ್ಯಾಗಳ ಒಪ್ಪಂದ ಮಾಡಿಕೊಂಡಿರುವ ಬಾಹ್ಯಾಕಾಶ ಸಂಸ್ಥೆಗಳ ಮೇಲೆ ನಿರ್ಬಂಧ ಹೇರಿದೆ. ಈಗ ಈ ಒಪ್ಪಂದ ಮುರಿದರೆ ಅದಕ್ಕೆ ಪರಿಹಾರವಾಗಿ ಅಂತರ್‌ರಾಷ್ಟ್ರೀಯ ಬಾಹ್ಯಾಕಾಶ ತಂತ್ರಜ್ಞಾನದ ಮಾರುಕಟ್ಟೆಯಲ್ಲಿ ಹೆಚ್ಚಿನ ಅವಕಾಶ ಕೊಡಿಸುವುದಾಗಿ ಅಮೇರಿಕಾ ರಶ್ಯಾಕ್ಕೆ ಆಮಿಷ ತೋರಿಸುತ್ತಿದೆ. ರಶ್ಯಾದ ಸರಕಾರದಲ್ಲಿ ಈ ಒಪ್ಪಂದದ ಬಗ್ಗೆ ಎರಡು ಬಣಗಳಾಗಿವೆ. ಒಂದು ಬಣ ಭಾರತದೊಡನೆ ಒಪ್ಪಂದ ಪಾಲಿಸಬೇಕು ಎಂದರೆ ಇನ್ನೊಂದು ಬಣ ಅಮೇರಿಕದ ಒತ್ತಡಕ್ಕೆ ಮನ್ನಣೆ ಕೊಡಬೇಕು ಎನ್ನುತ್ತಿದೆ. ಇದೇ ವಿಷಯದ ಬಗ್ಗೆ ಭಿನ್ನಾಭಿಪ್ರಾಯದಿಂದಾಗಿ ರಶ್ಯಾ ಪ್ರಧಾನ ಮಂತ್ರಿಯ ಅಮೇರಿಕ ಭೇಟಿ ರದ್ದಾಗಿದೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಪಂಜಾಬ್‌ನಲ್ಲಿ ಕೇಂದ್ರ ಆಡಳಿತ

ಪಾಕಿಸ್ತಾನದ ರಾಜಕೀಯ ಬಿಕ್ಕಟ್ಟು ದಿನೇ ದಿನೇ ತೀವ್ರವಾಗುತ್ತಿದೆ. ಅಧ್ಯಕ್ಷ ಹಾಗೂ ಪ್ರಧಾನ ಮಂತ್ರಿಗಳು ಇನ್ನೊಂದು ಸುತ್ತಿನ ಪರೋಕ್ಷ ಯುದ್ಧ ಮುಂದುವರೆಸಿದ್ದಾರೆ.

ಎರಡನೇ ಬಾರಿ ಪಂಜಾಬ್ ವಿಧಾನಸಭೆ ವಿಸರ್ಜಿಸಿದ ಅಧ್ಯಕ್ಷ-ಪರ ಪಂಜಾಬಿನ ಮುಖ್ಯಮಂತ್ರಿ ಸರ್ಕಾರವನ್ನು ವಜಾಮಾಡಿ ಕೇಂದ್ರಾಡಳಿತ ಕ್ಕೊಳಪಡಿಸುವ ಆಜ್ಞೆಯನ್ನು ಕೇಂದ್ರ ಸರ್ಕಾರ ಹೊರಡಿಸಿದೆ - ಇದು ಹೊಸ ರಾಜಕೀಯ ಹಣಾಹಣಿಗೆ ಕಾರಣವಾಗಿದೆ. ಇದಕ್ಕಾಗಿ ರಾಷ್ಟ್ರೀಯ ಅಸೆಂಬ್ಲಿಯ ವಿಶೇಷ ಅಧಿವೇಶನ ಸೇರಿಸಲಾಗಿತ್ತು. ಈ ನಡುವೆ ಅಧ್ಯಕ್ಷರು ಹಾಗೂ ಪ್ರಧಾನಮಂತ್ರಿಗಳು ಒಂದು ಬಾರಿ ಭೇಟಿಯಾಗಿದ್ದರು. ಆದರೆ ಯಾವ ಸಂಧಾನಕ್ಕೂ ಬಂದಂತಿಲ್ಲ. ಬೆಳೆಯುತ್ತಿರುವ ರಾಜಕೀಯ ಬಿಕ್ಕಟ್ಟನ್ನು ಪಾಕಿಸ್ತಾನ ಸೇನೆ ಆಸಕ್ತಿಯಿಂದ ಗಮನಿಸುತ್ತಿದೆ. ರಾಜಕೀಯ ಬಿಕ್ಕಟ್ಟು ಬಗೆಹರಿಸಲು ಪಾಕಿಸ್ತಾನದ ಪ್ರಧಾನಿಯನ್ನು ಭೇಟಿ ಮಾಡಿದ ಸೇನಾಧ್ಯಕ್ಷ ಗಡುವು ನೀಡಿದ್ದಾರೆ ಎಂದು ವರದಿಯಾಗಿದೆ. ಇದರಿಂದ ಮಿಲಿಟರಿ ಅಧಿಕಾರವನ್ನು ಪುನಃ ವಹಿಸಿಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಹಿಂದಿ ಹೇರಿಕೆಯ, ಪಿ.ಯು ಶುಲ್ಕ ಏರಿಕೆ ವಿರುದ್ಧ ಮೆರವಣಿಗೆ

ರಾಯಚೂರು : ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿ ಕರೆಯ ಮೇರೆಗೆ ದಿನಾಂಕ ಜೂನ್ 18,1993 ರಂದು ರಾಯಚೂರು ನಗರದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.

ಶಿಕ್ಷಣದ ವ್ಯಾಪಾರಿಕರಣಕ್ಕೆ ಕಡಿವಾಣ ಹಾಕಿರುವ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಸರಕಾರ ತಪ್ಪದೇ ಜಾರಿಗೆ ತರಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲಿಕ ಲಾಬಿಗೆ ಮಣಿಯದೇ ಅಗತ್ಯಬಿದ್ದಲ್ಲಿ ಕಾಲೇಜುಗಳನ್ನು ಸರಕಾರವೇ ವಹಿಸಿಕೊಂಡು ನಡೆಸಬೇಕು. ಇದರಲ್ಲಿ ಯಾವುದೇ ಚೌಕಾಸಿಯನ್ನು ವಿದ್ಯಾರ್ಥಿ ಸಮುದಾಯ ಒಪ್ಪುವುದಿಲ್ಲ, ಜೊತೆಗೆ ಬರೀ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳ ವ್ಯಾಪಾರದಲ್ಲಿ ತೊಡಗಿರುವುದರಿಂದ ಮಧ್ಯಮ ವರ್ಗದವರು ಸಹ ಈ ಶಾಲೆ ಕಾಲಜುಗಳ ಹತ್ತಿರ ಸುಳಿಯಲಾರದ ಸ್ಥಿತಿ ಉದ್ಭವಿಸಿದೆ ಈ ಲೂಟಿಯನ್ನು ನಿಲ್ಲಿಸಲು ಸುಪ್ರಿಂ ಕೋರ್ಟ್ ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕು ನೀಡಿರುವ ತೀರ್ಪನ್ನು ಒಪ್ಪೆಲಿಯಲ್ಲಿ ಸರಕಾರ ದೃಢ ಕ್ರಮಗಳನ್ನು ಕೈಗೊಳ್ಳಬೇಕೆಂದು (ಎಸ್. ಎಫ್.ಐ) ತಾಲೂಕು ಸಮಿತಿ ಒತ್ತಾಯಿಸಿದೆ.

ಈ ಬೇಡಿಕೆಗಳನ್ನು ಈಡೇರಿಸಬೇಕೆಂದು ತಾಲೂಕು ಸಮಿತಿಯ ಸಹ ಕಾರ್ಯದರ್ಶಿಗಳಾದ ಎಸ್. ವೀರೇಶ್‌ರವರು ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ತಲುಪಿಸಿದರು. ಈ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳು ಸ್ವೀಕರಿಸಿ ಸರಕಾರಕ್ಕೆ ಒಪ್ಪಿಸುತ್ತೇನೆಂದು ವಿದ್ಯಾರ್ಥಿಗಳಿಗೆ ಭರವಸೆ ಕೊಟ್ಟರು. ತಾಲೂಕು ಸಮಿತಿಯ ಉಪಾಧ್ಯಕ್ಷರಾದ ವಿ.ಎಸ್. ಯುಲ್ಲಪ್ಪ ಧನ್ಯವಾದ ಅರ್ಪಿಸಿದರು.

ಗಂಗಾವತಿಯಲ್ಲಿ ವಿದ್ಯಾರ್ಥಿಗಳ ಮೆರವಣಿಗೆ

ಗಂಗಾವತಿ : ಜೂನ್ 18,93 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ಗಂಗಾವತಿ ತಾಲೂಕಿನಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಲಾಯಿತು. ಮುಂಜಾನೆ ಪಿಯುಸಿ ಕಾಲೇಜುಗಳನ್ನು ಬಹಿಷ್ಕರಿಸಲಾಯಿತು. ನಂತರ 11 ಗಂಟೆಗೆ ಕೊಟ್ಟೇಶ್ವರ ಶಾಲೆಯಿಂದ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆಯಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಪಿಯುಸಿ ಶುಲ್ಕವನ್ನು ಇಳಿಸಬೇಕು, ವಿದ್ಯಾರ್ಥಿ ವಿರೋಧಿ ಕಾಂಗ್ರೆಸ್ ಸರಕಾರಕ್ಕೆ ಧಿಕ್ಕಾರ ಮತ್ತು ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸಿದ್ದನ್ನು ಕೂಡಲೇ ವಾಪಸ್ಸು ಪಡೆಯಬೇಕು, ಪಠ್ಯ ಪುಸ್ತಕದ ಬೆಲೆ ಇಳಿಸಬೇಕು, ಡೊನೇಷನ್ ಕ್ಯಾಪಿಟೇಷನ್ ಪದ್ಧತಿಗೆ ಧಿಕ್ಕಾರ ಎಂಬಿತ್ಯಾದಿ ಘೋಷಣೆಗಳು ಮುಗಿಲು ಮುಟ್ಟಿದವು. ಮೆರವಣಿಗೆಯು ನಂತರ ತಹಶೀಲ್ದಾರ್ ಕಛೇರಿಗೆ ತೆರಳಿತು. ಜನವಾದಿ ಮಹಿಳಾ ಸಂಘಟನೆ ಕಾರ್ಯದರ್ಶಿ ಕೆ. ಪದ್ಮಾ ಮತ್ತು ಸಂಗಡಿಗರು ಕ್ರಾಂತಿ ಗೀತೆಗಳನ್ನು ಹಾಡಿದರು.

ಎಸ್.ಎಫ್.ಐ.ಜಿಲ್ಲಾ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಪ್ರತಿಭಟನಾಕಾರರನ್ನುದ್ದೇಶಿ ಮಾತಾನಾಡಿದರು.

ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ: ಸಮಾವೇಶ ಆಗ್ರಹ

ಮಂಗಳೂರು : ಬೆಲೆಗಳು ಏರಿರುವುದರಿಂದ ಜೀವನ ನಿರ್ವಹಣೆಯನ್ನು ಸರಿದೂಗಿಸಲು ಸಾವಿರ ಬೀಡಿಗೆ 40 ರೂಪಾಯಿ ಕನಿಷ್ಠ ಕೂಲಿ ನಿಗದಿಗೊಳಿಬೇಕೆಂದು ಕೋಟೆಕಾರ ಸರ್ಕಲ್ ಬೀಡಿ ಕಾರ್ಮಿಕರ ಸಮಾವೇಶ ಒತ್ತಾಯಿಸಿದೆ.

ಅಸಂಘಟಿತ ವಲಯದ ಕೈಗಾರಿಕೆಯಲ್ಲಿದುಡಿಯುವ ಎಲ್ಲಾ ಕಾರ್ಮಿಕರಿಗೂ ಭಾರತದ ಹದಿನೈದನೇ ಕಾರ್ಮಿಕ ಸಮ್ಮೇಳನದಲ್ಲಿ ತೀರ್ಮಾನಿಸಲಾದಂತೆ ಅವಶ್ಯಕತೆಗೆ ತಕ್ಕ ಕನಿಷ್ಠ ವೇತನವನ್ನು ಘೋಷಿಸಬೇಕು ಮತ್ತು ಕನಿಷ್ಠ ವೇತನ ಕಾಯ್ದೆಯನ್ನು ಸಂವಿಧಾನದ 9 ನೇ ಪರಿಚ್ಛೇದದಲ್ಲಿ ಸೇರಿಸಬೇಕೆಂದು ಆಗ್ರಹಿಸುವ ನಿರ್ಣಯವನ್ನು ಈ ಸಮಾವೇಶವು ಅಂಗೀಕರಿಸಿದೆ.

ಜೂನ್ 20 ರಂದು ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ (ಸಿಐಟಿಯು) ನ ನೇತೃತ್ವದಲ್ಲಿ ನಡೆದ ಈ ಸಮಾವೇಶವು ಪ್ರಸಕ್ತ ಬೀಡಿ ಕಾರ್ಮಿಕರ ದುಡಿಮೆಯ ಹಣದಿಂದ ಎಲೆ ಆವರೇಜಿನ ದಂಡ ವಸೂಲಿ ಹೆಸರಿನಲ್ಲಿ ಕಾರ್ಮಿಕರನ್ನು ಕಿತ್ತು ತಿನ್ನುವ ಮಧ್ಯವರ್ತಿಗಳನ್ನು ಖಂಡಿಸಿ, ಇವರ ಅನ್ಯಾಯದ ವಿರುದ್ಧ ಬೀಡಿ ಕಾರ್ಮಿಕರು ಮಜೂರರು ಚಳುವಳಿಗಿಳಿಯಬೇಕೆಂದು ಕರೆ ನೀಡಿತು.

ಸಂಘದ ಅಧ್ಯಕ್ಷ ಕೆ. ನಾರಾಯಣ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಪದ್ಮಾವತಿ, ಕೆ. ಈಶ್ವರ್, ಕಾರ್ಯದರ್ಶಿ ಸುಕುಮಾರ ಸಿಪಿಐ(ಎಂ) ಮುಂದಾಳು ಬಿ. ಜನಾರ್ಧನ ನಾಯಕ್ ಮಾತಾನಾಡಿದರು.

ಜಯಂತ್ ನಾಯಕ್ ಸ್ವಾಗತಿಸಿ ಬಾಬು ಪಿಲಾರ್ ವಂದಿಸಿದರು. ●

ಕುರುಗೋಡಿನಲ್ಲಿ ರೈತ ಸಂಘದಿಂದ ಭೂಮಿ ಹಂಚಿಕೆ

ಬಳ್ಳಾರಿ ತಾಲೂಕಿನ ಕುರುಗೋಡು ಹೋಬಳಿ ಮುಸ್ಟಗಟ್ಟೆ ಗ್ರಾಮಕ್ಕೆ ಸೇರಿದ ಭೂಮಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಡಿ.ಎಸ್.ಎಸ್ ಹಾಗೂ ಡಾ. ಅಂಬೇಡ್ಕರ್‌ಸಂಘ ಇವರ ನೇತೃತ್ವದಲ್ಲಿ ಭೂ ಹೀನ ಕೃಷಿ ಕಾರ್ಮಿಕರಿಗೆ ಸುಮಾರು 6 ಎಕರೆ ಹಂಚಲಾಯಿತು.

ಹೊಲದಲ್ಲಿ ನೆರಧಿದ್ದ ರೈತರನ್ನುದ್ದೇಶಿಸಿ ಪ್ರಾಂತ ರೈತ ಸಂಘ ದ.ಜಿಲ್ಲಾ ಉಪಾಧ್ಯಕ್ಷರಾದ ವಿ.ಎಸ್. ಶಿವಶಂಕರ್ ರವರು ಭೂ ಸುಧಾರಣೆಗೆ ಸಂಪೂರ್ಣವಾಗಿ ಜಾರಿಯಾಗಬೇಕಾದರೆ ಹೋರಾಟ ಮಾಡದೆ ಭೂ ಸುಧಾರಣೆ ಜಾರಿಗೆ ಬರುವುದಿಲ್ಲ ನಿಮ್ಮ ಹೋರಾಟದ ಮೇಲೆ ಭೂಮಿ ಹಂಚಿಕೆ ನಿಂತಿರುತ್ತದೆ. ನಮ್ಮ ದೇಶದಲ್ಲಿ ಸಾವಿರಾರು ಎಕರೆ ಖಾಲಿ ಇದ್ದರೂ ಕಾಂಗ್ರೆಸ್ ಸರ್ಕಾರ ಹಂಚುವುದಿಲ್ಲಾ ಏಕೆಂದರೆ ಭೂಮಾಲಕರು ಹಾಗೂ ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ. ಪಶ್ಚಿಮ ಬಂಗಾಳದಲ್ಲಿ ಮಾತ್ರವೇ ಶೇ. 90 ರಷ್ಟು ಭೂಮಿ ಹಂಚಿಕೆಯಾಗಿದೆ. ಅಲ್ಲಿ ತೀವ್ರ ಹೋರಾಟದ ಫಲವಾಗಿ ಮತ್ತು ಕೃಷಿ ಕಾರ್ಮಿಕರ ಪರವಾದ ಸರ್ಕಾರ ಬಂದಿರುವುದರಿಂದ ರೈತರು ಹಾಗೂ ಕೂಲಿಕಾರ್ಮಿಕರು ಒಂದಾಗ ಬೇಕೆಂದು ವಿ.ಎಸ್. ಶಿವಶಂಕರ್ ರವರು ರೈತರಿಗೆ ಕರೆ ನೀಡಿದರು. ನಂತರ ಭೂ ಹೋರಾಟ ಸಮಿತಿಯನ್ನು ಪ್ರಾಂತ ರೈತ ಸಂಘ ಜಿಲ್ಲಾ ಮುಖಂಡ ಕೆ. ಗಾದಿಲಿಂಗಪ್ಪ ಇವರ ನೇತೃತ್ವದಲ್ಲಿ ರಚನೆ ಮಾಡಲಾಯಿತು.

KRNM/BGS-405 MAG(2) PRB DECR 319-78/79

ತುರ್ಕಿಯಲ್ಲಿ ಮತಾಂಧರ ಬರ್ಬರ ಕೃತ್ಯ

ಪೊಲಿಟ್‌ಬ್ಯೂರೋ ಖಂಡನೆ

ತುರ್ಕಿಯ ಶಿವಾಸ್‌ನಲ್ಲಿ ಜುಲೈ 3 ರಂದು 35 ಜನರ ಹತ್ಯೆಗೆ ಕಾರಣವಾದ ಇಸ್ಲಾಮಿ ಮೂಲಭೂತವಾದಿಗಳ ಆಕ್ರಮಣ ಒಂದು ಬರ್ಬರ ಕೃತ್ಯ. ಇದನ್ನು ಬಲವಾಗಿ ಖಂಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ತುರ್ಕಿಯ ಒಬ್ಬ ಪ್ರಮುಖ ಎಡಪಂಥೀಯ ಸಂಪಾದಕ ಅಝಿಝ್ ನೆಸಿನ್ ಸಂಘಟಿಸಿದ್ದ, ಹಲವಾರು ಕಲಾವಿದರು, ಬುದ್ಧಿಜೀವಿಗಳು, ಕವಿಗಳು, ಪತ್ರಕರ್ತರು ಭಾಗವಹಿಸಿದ್ದ ಒಂದು ಸಭೆ ಶಿವಾಸ್‌ನಲ್ಲಿ ಹೋಟೆಲೊಂದರಲ್ಲಿ ನಡೆಯುತ್ತಿದ್ದಾಗ ಇಸ್ಲಾಮಿ ಮೂಲಭೂತವಾದಿಗಳು ಆಕ್ರಮಣ ಮಾಡಿ ಅದನ್ನು ಸುಟ್ಟರು. ತುರ್ಕಿಯ ಒಟ್ಟೊಮಾನ್ ಸಾಮ್ರಾಜ್ಯದ ಅಡಿ ...ಸ್ತೇದ ದಮನವನ್ನು ಟೀಕಿಸಿ ಕವನ ಬರೆದಕ್ಕಾಗಿ ಗಲ್ಲಿಗೇರಿಸಲ್ಪಟ್ಟ ಕವಿ ಪಿರ್ ಸುಲ್ತಾನ್ ಅಬ್ದೆಲ್‌ರವರ ಸ್ಮರಣಾರ್ಥ ಈ ಸಭೆಯನ್ನು ಸಂಘಟಿಸಲಾಗಿತ್ತು.

ತುರ್ಕಿಯ ಪ್ರಭುತ್ವದ ಜಾತ್ಯಾತೀತ ಆಧಾರವನ್ನು ನಾಶಮಾಡಹೊರಟಿರುವ ಮೂಲಭೂತವಾದಿ ಶಕ್ತಿಗಳ ಬೆದರಿಕೆಗೆ ಅಝಿಝ್ ನೇಸಿನ್ ಮತ್ತು ಅವರ ಪತ್ರಿಕೆ 'ಅದಿನ್‌ಲಿಕ್' ಸೊಪ್ಪು ಹಾಕದ್ದರಿಂದ ಪ್ರತಿಗಾಮಿ ಶಕ್ತಿಗಳು ಇವರ ಮೇಲೆ ಗುರಿಯಿಟ್ಟಿದ್ದವು.

ಬಹಳ ಹಿಂದೆ ಕೆಮಾಲ್ ಮುಸ್ತಾಫ್ ಅತಾತುರ್ಕರ ಸಮಯದಿಂದ ತುರ್ಕಿಯಲ್ಲಿ ಸ್ಥಾಪಿಸಲ್ಪಟ್ಟ ಜಾತ್ಯಾತೀತ ನೀತಿಗಳ ದೀರ್ಘ ಪರಂಪರೆಗೆ ಈ ಆಕ್ರಮಣ ಒಂದು ದೊಡ್ಡ ಸವಾಲು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಸಲ್ಮಾನ್ ರುಶ್ದಿಯ ಪುಸ್ತಕ 'ಸಟಾನಿಕ್ ವರ್ಸಸ್' ನಿಂದಾಗಿ ಈ ಘಟನೆ ನಡೆಯಿತು ಎಂದು ಹೇಳಲಾಗುತ್ತಿದೆ. ಆದರೆ ಇದು ಕೇವಲ ನೆಪ ಬಲಪಂಥೀಯ ಇಸ್ಲಾಮಿ ಮೂಲಭೂತವಾದಿಗಳ ಹೆಚ್ಚುತ್ತಿರುವ ಚಟುವಟಿಕೆಗಳ ಗುರಿ ತುರ್ಕಿಯ ಪ್ರಗತಿಪರ ಹಾಗೂ ಜಾತ್ಯಾತೀತ ಶಕ್ತಿಗಳು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಈ ಘಟನೆಯನ್ನು ಖಂಡಿಸುತ್ತಾ ಪೊಲಿಟ್‌ಬ್ಯೂರೋ ಜಾತ್ಯಾತೀತತೆಗೆ ವಿರೋಧವಾಗಿರುವ ಹಾಗೂ ಮೂಲಭೂತವಾದಿ ಶಕ್ತಿಗಳ ವಿರುದ್ಧ ನೀತಿಬದ್ಧ ಹೋರಾಟ ನಡೆಸುತ್ತಿರುವ ತುರ್ಕಿಯ ಪ್ರಗತಿಪರ ಶಕ್ತಿಗಳಿಗೆ ತನ್ನ ಸೌಹಾರ್ದ ಬೆಂಬಲವಿದೆಯೆಂದು ತಿಳಿಸಿದೆ.

ಆಂಧ್ರದ 'ಆದರ್ಶ ವಿಪ್ಲವ ನಾರಿ' ಸೂರ್ಯವತಿ ನಿಧನ

ಆಂಧ್ರಪ್ರದೇಶ ಮಹಿಳಾ ಆಂದೋಲನದ ಹಿರಿಯ ಮುಖಂಡರೂ, ಐತಿಹಾಸಿಕ ತೆಲಂಗಾಣಾ ಹೋರಾಟದಲ್ಲಿ ಭಾಗವಹಿಸಿದ್ದ ಆದರ್ಶ ವಿಪ್ಲವನಾರಿಯೆನಿಸಿಕೊಂಡಿದ್ದ ಮಾನಿಕೊಂಡ ಸೂರ್ಯವತಿಯವರು ಜುಲೈ 4,1993 ರಂದು ನಿಧನರಾದರು. ಅವರಿಗೆ 72 ವರ್ಷವಾಗಿತ್ತು. ಅವರು ಸಿಪಿಐ(ಎಂ) ಆಂಧ್ರ ಪ್ರದೇಶ ರಾಜ್ಯ ಸಮಿತಿಯ ಸದಸ್ಯರೂ, ಕೃಷ್ಣಾ ಜಿಲ್ಲೆಯ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಆಗಿದ್ದರು. ಹೈದರಾಬಾದಿನಲ್ಲಿ ನಡೆದ ಆಂಧ್ರಪ್ರದೇಶದ 41 ಸಾಮೂಹಿಕ ಸಂಘಟನೆಗಳ ಸಭೆಯಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದಾಗ ಅವರು ನಿಧನ ಹೊಂದಿದರು. ಅವರ ನಿಧನಕ್ಕೆ ಆಂಧ್ರಪ್ರದೇಶ ಸಿಪಿಐ(ಎಂ) ರಾಜ್ಯ ಸಮಿತಿ ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

1942 ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಕಾಂ. ಸೂರ್ಯವತಿ 1948-51 ರಲ್ಲಿ ತೆಲಂಗಾಣ ಹೋರಾಟದ ಕಾಲದಲ್ಲಿ 2 ವರ್ಷ ಹಾಗೂ 1964 ರಲ್ಲಿ 16 ತಿಂಗಳು ಜೈಲುವಾಸ ಅನುಭವಿಸಿದವರು. 1958 ರಲ್ಲಿ ರಾಜ್ಯದ ಮೊದಲ ವಿಧಾನಸಭೆಗೆ ಆಯ್ಕೆಯಾಗಿದ್ದವರು. 1956-65 ರವರೆಗೆ ನಂದಮೂರು ಪಂಚಾಯಿತಿ ಅಧ್ಯಕ್ಷರಾಗಿದ್ದು ಈ ಪಂಚಾಯತು 'ಆದರ್ಶ ಪಂಚಾಯತು' ಎಂಬ ಹೆಸರು ಗಳಿಸುವಂತೆ ಮಾಡಿದವರು.

ಕಮ್ಯುನಿಸ್ಟ್ ಆಂದೋಲನಕ್ಕೆ ಹಾಗೂ ಜನತೆಗೆ ವಿವಿಧ ರೀತಿಗಳಲ್ಲಿ ಸೇವೆ ಸಲ್ಲಿಸಿದವರು. ಸರಪಂಚರಾಗಿ, ಬ್ಲಾಕ್ ಅಧ್ಯಕ್ಷೆಯಾಗಿ, ರಾಜ್ಯ ವಿಧಾನಪರಿಷತ್ ಸದಸ್ಯರಾಗಿ, ದುಡಿದವರು. 1947 ರಲ್ಲಿ ಆಂಧ್ರ ಪ್ರದೇಶ ಮಹಿಳಾ ಸಂಘದ ಮೊದಲ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದರು.

ಕಾಂ. ಸೂರ್ಯವತಿಯವರ ಜೀವನ ದೃಢಬದ್ಧತೆ, ತ್ಯಾಗ, ಶಿಸ್ತುಗಳಿಗೊಂದು ಉತ್ತಮ ಉದಾಹರಣೆ ಎಂದು ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ. ಅವರು ಮತ್ತು ಅವರ ಪತಿ ಹಾಗೂ ರಾಜ್ಯದಲ್ಲಿ ಪಕ್ಷದ ಒಬ್ಬ ಹಿರಿಯ ಗೌರವಾನ್ವಿತ ಮುಖಂಡ ಮಾನಿಕೊಂಡ ಸುಬ್ಬರಾವ್ ಶ್ರೀಮಂತ ಕುಟುಂಬಗಳಿಂದ ಬಂದಿದ್ದರೂ 1943ರಲ್ಲಿ ತಮ್ಮ ಇಡೀ ಆಸ್ತಿಯನ್ನು ಪಕ್ಷಕ್ಕೆ ದಾನಮಾಡಿ ಪೂರ್ಣಕಾಲದ ಕಾರ್ಯಕರ್ತರಾದರು. ಕಾಂ. ಸೂರ್ಯವತಿಯವರ ನಿಧನದಿಂದ ಅನ್ಯಾಯದ ವಿರುದ್ಧ ಒಬ್ಬ ನಿರಂತರ ಹೋರಾಟಗಾರ್ತಿಯನ್ನು ಕಳೆದುಕೊಂಡಂತಾಗಿದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಅಮೇರಿಕಾದ ಭಂಡ, ಕಾನೂನು ಬಾಹಿರ ಹಲ್ಲೆ

ಪಿ.ಬಿ. ಖಂಡನೆ

ಬಾಗ್ದಾದ್ ಮೇಲೆ ಅಮೇರಿಕನ್ ಸಶಸ್ತ್ರ ಪಡೆಗಳ ಬರ್ಬರ ಕ್ಷಿಪಣಿ ದಾಳಿ ತನ್ನ ಕುಗ್ಗುತ್ತಿರುವ ಜನಪ್ರಿಯತೆಯಿಂದ ಗಮನವನ್ನು ಬೇರೆಡೆ ಸೆಳೆಯಲು ಅಧ್ಯಕ್ಷ ಕ್ಲಿಂಟನ್‌ರವರು ಆರಿಸಿಕೊಂಡಿರುವ ದಾರಿ. ಇದು ಅತ್ಯಂತ ಖಂಡನಾರ್ಹ ಕೃತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಯಾವುದೇ ಅಂತರ‍್ರಾಷ್ಟ್ರೀಯ ನೀತಿ ನಿಯಮಾವಳಿಯ ದೃಷ್ಟಿಯಿಂದ ನೋಡಿದರೂ ಇದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಒಬ್ಬ ಪ್ರಸಿದ್ಧ ಇರಾಕೀ ಮಹಿಳಾ ವರ್ಣಚಿತ್ರಕಲಾವಿದೆ ಹಾಗೂ ಆಕೆಯ ಪತಿಯೂ ಸೇರಿದಂತೆ ಹಲವಾರು ಮುಗ್ಧ ಜೀವಗಳನ್ನು ಬಲಿತೆಗೆದುಕೊಂಡ ಈ ಬರ್ಬರ ದಾಳಿಯಿದು. ತನನ್ನು ಅಮೇರಿಕಾದ ಏಕಪಕ್ಷೀಯ ನಿರ್ಧಾರಗಳಿಗೆ ಅಸ್ತು ಎನ್ನುವ ರಬ್ಬರ್-ಸ್ಟಾಂಪ್‌ನ ಮಟ್ಟಕ್ಕಿಳಿಸಿಕೊಂಡ ವಿಶ್ವಸಂಸ್ಥೆ ತನ್ನ ಅಂತರ‍್ರಾಷ್ಟ್ರೀಯ ವಿಶ್ವಾಸಾರ್ಹತೆಯನ್ನು ಈಗಲಾದರೂ ಉಳಿಸಿಕೊಳ್ಳಲು ಈ ಅನಾಚಾರವನ್ನು ಬಲವಾಗಿ ಖಂಡಿಸಬೇಕು ಎಂದು ಪಿ.ಬಿ. ಆಗ್ರಹಪಡಿಸಿದೆ. ಅಮೇರಿಕಾ ಮೂರನೇ ಜಗತ್ತಿನ ದೇಶಗಳನ್ನು ಬೆದರಿಸುವಾಗ ಎದ್ದು ನಿಂತು ಪ್ರತಿರೋಧಿಸುವ ಧೈರ್ಯ ತನಗಿಲ್ಲ ಎಂದು ಮತ್ತೆ-ಮತ್ತೆ ತೋರಿಸಿಕೊಂಡು ನರಸಿಂಹ ರಾವ್ ಸರಕಾರ ಈ ಕಾನೂನು ಬಾಹಿರ ಕ್ರಮವನ್ನು ಖಂಡಿಸಬೇಕು ಎಂದು ಪಿ.ಬಿ. ಆಗ್ರಹಪಡಿಸಿದೆ. ತನ್ನ ಪ್ರಾಬಲ್ಯ ಹೇರುವ ಅಮೇರಿಕಾದ ಕಾನೂನು ಬಾಹಿರ ಚಟುವಟಿಕೆಗಳನ್ನು ಪ್ರತಿಭಟಿಸಬೇಕು ಎಂದು ಎಲ್ಲಾ ಜನವಿಭಾಗಗಳಿಗೆ ಪಿ.ಬಿ. ಕರೆ ನೀಡಿದೆ.

ಅಯ್ಯೋಪಾಪ, ಎಂಥಾಗತಿ ಈ ಕೇಂದ್ರ ಸಚಿವರಿಗೆ!

ಸ್ವಾತಂತ್ರ್ಯ ಚಳುವಳಿಯ ಏಕೈಕ ವಾರಸುದಾರ, ಶತಮಾನಕ್ಕೂ ಹೆಚ್ಚಿನ ಇತಿಹಾಸವಿರುವ ದೇಶದ ಏಕೈಕ ರಾಜಕೀಯ ಪಕ್ಷ ಎಂಬಿತ್ಯಾದಿ ವಿಶೇಷಗಳನ್ನು ಹೊಂದಿರುವ ಭಾರತದ ಆಳುವ ಪಕ್ಷಕ್ಕೆ ಎಂಥ ದುರ್ಗತಿ ಬಂದಿದೆ ನೋಡಿ. ಅದರ ಸರಕಾರದಲ್ಲಿ ಪ್ರಮುಖ ಖಾತೆಯೊಂದನ್ನು ಹೊಂದಿರುವ ಒಬ್ಬ ಮಂತ್ರಿ ಸಂಸತ್ತಿಗೆ ಆಯ್ಕೆಯಾಗಲು ನಡೆಸುತ್ತಿರುವ ಪಡಿಪಾಟಲನ್ನು ನೋಡಿದರೆ ಅಯ್ಯೋ ಎನಿಸದಿರದು.

ಯಾವುದೇ ಒಬ್ಬ ವ್ಯಕ್ತಿ ಕೇಂದ್ರ ಸಂಪುಟಕ್ಕೆ ಸೇರ್ಪಡೆಯಾದ ಆರು ತಿಂಗಳೊಳಗೆ ಸಂಸತ್ತಿನ ಯಾವುದಾದರೊಂದು ಸದನಕ್ಕೆ ಹಾಜರಾಗಬೇಕೆನ್ನುವುದು ಸಂವಿಧಾನದಲ್ಲಿರುವ ನಿಯಮವಾಗಿದೆ. ಈ ಷರತ್ತನ್ನು ಪೂರೈಸಲು ಸಾಧ್ಯವಾಗದಿದ್ದರೆ ಅಂಥ ಸಚಿವ/ಸಚಿವೆ ರಾಜೀನಾಮೆ ನೀಡಬೇಕಾಗುತ್ತದೆ.

ಜುಲೈ 9 ರಂದು ಪಶ್ಚಿಮ ಬಂಗಾಳ ವಿಧಾನಸಭೆಯಿಂದ ರಾಜ್ಯಸಭೆಯ ಆರು ಸ್ಥಾನಗಳಿಗಾಗಿ ಚುನಾವಣೆ ನಡೆಯಬೇಕಿತ್ತು. ಶೇಷನ್‌ರು ಲಂಡನ್‌ನಲ್ಲಿರುವುದರಿಂದ ಅದೀಗ ಅಸಾಧ್ಯವಾಗಿದೆ.

ಪಶ್ಚಿಮಬಂಗಾಳಕ್ಕೆ ಸೇರಿದ ರಾಜ್ಯಸಭೆಯ ಆರು ಮಂದಿ ಸದಸ್ಯರು ನಿವೃತ್ತರಾಗಲಿದ್ದು ಅದರಲ್ಲಿ ಐವರು ಸಿಪಿಐ(ಎಂ) ನವರು ಹಾಗೂ ಒಬ್ಬರು ಆರ್. ಎಸ್.ಪಿ.ಯವರು. ತೆರವಾಗುವ ಆರು ಸ್ಥಾನಗಳಿಗೆ ಸ್ಪರ್ಧಿಸಲು ಎಡರಂಗ ನಿರ್ಧರಿಸಿದ್ದು ಕಾಂಗ್ರೆ ಅಭ್ಯರ್ಥಿಯಾಗಲಿರುವ ಪ್ರಣಬ್ ಮುಖರ್ಜಿಯವರನ್ನು ಬೆಂಬಲಿಸದಿರುವ ನಿಲುವನ್ನು ತಳೆದಿದೆ: ಇದರಿಂದಾಗಿ ಕಾಂಗ್ರೆಸ್(ಐ) ಪಕ್ಷಕ್ಕೆ; ಮುಖರ್ಜಿಯವರಿಗೆ ಆಕಾಶವೇ ಕಳಚಿ ಬಿದ್ದಂತಾಗಿದೆ.

ಮುಖರ್ಜಿ ಆಯ್ಕೆಯಾಗಬೇಕಾದರೆ 42 ಮತಗಳು ಬೇಕು. ರಾಜ್ಯ ಅಸೆಂಬ್ಲಿಯಲ್ಲಿ ಕಾಂಗ್ರೆಸ್‌ನ 41 ಸದಸ್ಯರಿದ್ದಾರೆ. ಜಾರ್ಖಂಡ್ ಪಕ್ಷದ ಏಕೈಕ ಸದಸ್ಯ ಕಾಂಗ್ರೆ ಬೆಂಬಲಿಗರು. ಆದರೂ ಮುಖರ್ಜಿ ಗೆಲ್ಲುವ ಸಾಧ್ಯತೆ ಕಡಿಮೆಯೇ.

ಆಂತರಿಕ ಕಚ್ಚಾಟವೇ ಇದಕ್ಕೆ ಕಾರಣ. ಮಮತಾ ಬ್ಯಾನರ್ಜಿ ಬಣದ ಸದಸ್ಯರು ಪ್ರಣಬ್ ಮುಖರ್ಜಿಯವರನ್ನು ಬೆಂಬಲಿಸುವ ಸಂಭವ ಇಲ್ಲವೇ ಇಲ್ಲ. ಈ ವಾಸ್ತವತೆಯನ್ನು ಅರಿತ ಕಾಂಗ್ರೆ ಮುಖರ್ಜಿ ಆಯ್ಕೆಗೆ ನೆರವಾಗಲಿಕ್ಕಾಗಿ ಎಡರಂಗದ ಮೊರೆ ಹೋಗಿದೆ. ವಿಶೇಷವಾಗಿ ಷೇರು ದಲ್ಲಾಳಿ ಹರ್ಷದ್ ಮೆಹ್ತಾ ಆರೋಪ ಮಾಡಿರುವ ಹಿನ್ನೆಲೆಯಲ್ಲಿ ಪ್ರಧಾನಿಯವರ ರಾಜೀನಾಮೆಗೆ ಸಿಪಿಐ(ಎಂ) ಮತ್ತು ಇಡಿಯಾಗಿ ಎಡರಂಗ ಒತ್ತಾಯಿಸುತ್ತಿರುವುದರಿಂದ ಈ ಹಂತದಲ್ಲಿ ಕಾಂಗ್ರೆಗೆ ಬೆಂಬಲ ನೀಡುವುದು ಯಾವ ದೃಷ್ಟಿಯಲ್ಲಿ ಸಂಗತವಾಗಲಾರದು. ಭ್ರಷ್ಟಾಚಾರವನ್ನು ಪೋಷಿಸುವ ಒಂದು ಪಕ್ಷಕ್ಕೆ ಜಯದೊರಕಿಸಿಕೊಡುವ ಕೃತ್ಯಕ್ಕೆ ಸಿಪಿಐ(ಎಂ) ಮುಂದಾಗುವುದೆಂದು ಯಾರಾದರು ನಿರೀಕ್ಷಿಸಿದರೆ ಅದರಷ್ಟು ಮೂರ್ಖತನ ಬೇರೊಂದಿರಲಾರದು.

ಸ್ವತಃ ಕಾಂಗ್ರೆ ಪಕ್ಷವೇ ಅಧಿಕಾರದಲ್ಲಿರುವ ಅಸ್ಸಾಂ ವಿಧಾನಸಭೆಯಿಂದ ಆಯ್ಕೆಯಾಗುವ ಅವಕಾಶ ದೊರೆಯದ ಪ್ರಣಬ್ ನಂತರ ಪ. ಬಂಗಾಳದತ್ತ ಕಣ್ಣು ಹಾಯಿಸಿದರೆನ್ನುವುದನ್ನು ಇಲ್ಲಿ ಗಮನಿಸಬೇಕು. ಇನ್ನೂ ಒಂದು ಮುಖ್ಯ ಸಂಗತಿಯಿದೆ. ಅದೇನೆಂದರೆ, ತನ್ನ ಸ್ವಂತ ರಾಜ್ಯವಾದ ಪಶ್ಚಿಮಬಂಗಾಳದಿಂದ ಪ್ರಣಬ್ ಒಂದು ಸಲ ಕೂಡಾ ಸಂಸತ್ತಿಗೆ ಆಯ್ಕೆಯಾಗಿದ್ದಿಲ್ಲ. ಅದೊಂದು ದಾಖಲೆಯೇ ಸರಿ!

ರಾಜ್ಯಸಭೆಗೆ ಆಯ್ಕೆಯಾಗದಿರುವ ಹಿನ್ನೆಲೆಯಲ್ಲಿ ರಾಜೀನಾಮೆ ಕೊಟ್ಟ ನಂತರ ಮತ್ತೆ ಸ್ವಲ್ಪ ಸಮಯವಾದ ಮೇಲೆ ಪ್ರಣಬ್ ಪುನಃ ಸಂಪುಟಕ್ಕೆ ಸೇರಬಹುದು. ಆದರೆ ಅದರಲ್ಲಿ ಎಷ್ಟರ ಮಟ್ಟಿಗಿನ ಗೌರವವಿರುತ್ತದೆ. ಅದಲ್ಲದೆ ರಾಷ್ಟ್ರಪತಿಯವರಿಂದ ರಾಜ್ಯಸಭೆಗೆ ನಾಮಕರಣಗೊಳ್ಳುವ ವರ್ಗದಲ್ಲಿ ಮುಖರ್ಜಿ ರಾಜ್ಯಸಭೆಗೆ ನಾಮಕರಣಗೊಳ್ಳಬಹುದು. ಆದರೆ ನಾಮಕರಣಗೊಂಡ ಸದಸ್ಯರು ಸಚಿವರಾಗಬಹುದೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. (ಲೇಖಕರು, ಕಲಾವಿದರು, ವಿಜ್ಞಾನಿಗಳ ವರ್ಗಕ್ಕೆ ಸೇರಿದವರನ್ನು ರಾಜ್ಯಸಭೆಗೆ ನೇಮಕ ಮಾಡುವುದು ವಾಡಿಕೆಯಲ್ಲಿದೆ.)

ಅಂತೂ ಪ್ರಣಬ್ ಮುಖರ್ಜಿಯವರಿಗೆ ತ್ರಿಶಂಕು ಸ್ವರ್ಗದ ಸ್ಥಿತಿಯಾಗಿದೆ. ಇದರಿಂದ ತಪ್ಪಿಸಿಕೊಳ್ಳಲು ಅವರು ತಿಪ್ಪರಲಾಗ ಹೊಡೆಯುತ್ತಿದ್ದಾರೆ.

ಬೆಂಗಳೂರು ಅಧಿವೇಶನ ಬಯಲಿಗೆಳೆದ ಬಿಜೆಪಿಯ ನಿಜಸ್ವರೂಪ

ಪುಟ 5ರಿಂದ

ಈ ಸಾಮಾಜಿಕ ಹೇಳಿಕೆಯಲ್ಲಿರುವ ಬಿಜೆಪಿ ನಿಜಕ್ಕೂ ಅನುಷ್ಠಾನಕ್ಕೆ ತರಬಹುದಾದ ಒಂದೇ ಸಂಗತಿಯೆಂದರೆ ಅಲ್ಪಸಂಖ್ಯಾತರನ್ನು ಕುರಿತಾದದ್ದು. ಅಲ್ಪಸಂಖ್ಯಾತ ಆಯೋಗವನ್ನು ರದ್ದುಪಡಿಸಿ ಅದರ ಜಾಗದಲ್ಲಿ ಮಾನವ ಹಕ್ಕು ಆಯೋಗ ರಚಿಸಬೇಕು ಎನ್ನುತ್ತದೆ ಅದು. ಹಿಂದೂ ಶಾಸನಗಳಲ್ಲಿ, ಜಾತಿ ದಮನದಲ್ಲಿ ಅಡಕವಾಗಿರುವ ಅನ್ಯಾಯಗಳನ್ನು, ದಮನಗಳನ್ನು ನಿವಾರಿಸಲು ಯಾವುದೇ ತೀವ್ರ ಕ್ರಮಕ್ಕೆಗೊಳ್ಳದೇನೇ ಒಂದು ಸಮಾನ ನಾಗರಿಕ ಸಂಹಿತೆಯನ್ನು ತರುವುದಾಗಿ ಅದು ಹೇಳುತ್ತದೆ.

ಬಿಜೆಪಿಯ ಬೆಂಗಳೂರು ಅಧಿವೇಶನದ ವೇಳೆಗೇ ಹರಿದ್ವಾರದಲ್ಲಿ ವಿಹೆಚ್‌ಪಿ ಸಂಘಟಿಸಿದ ಸಾಧುಗಳ ಸಮ್ಮೇಳನ ಹಾಗೂ ನಾಗಪುರದಲ್ಲಿ ಆರ್.ಎಸ್.ಎಸ್. ಕಾರ್ಯಕಾರಿಣಿ ಸಭೆ ನಡೆಯಿತೆಂಬುದನ್ನು ಗಮನಿಸಬೇಕು. ನಾಲ್ಕು ರಾಜ್ಯಗಳಿಗೆ ಚುನಾವಣೆ ನಡೆಯಲಿರುವ ಹಿನ್ನಲೆಯಲ್ಲಿ ಅಯೋಧ್ಯಾ ಪ್ರಶ್ನೆಯ ಮೇಲೆ ಇನ್ನೊಂದು ಸುತ್ತಿನ ಕೋಮು ಸಂಘರ್ಷಕ್ಕೆ ಎಡೆಬಿಡದ ಪ್ರಯತ್ನ ಸಾಗಿದೆ.

ಈ ಅಧಿವೇಶನ ತಾವು ದೇಶವನ್ನು ಆಳಲು ಶಕ್ತವಾದ ಒಂದು ಪಕ್ಷ ಎಂಬುದನ್ನು ಜನಗಳ ಮನದಲ್ಲಿ ಬಿಂಬಿಸಬೇಕೆಂಬುದು ಬಿಜೆಪಿ ಮುಖಂಡರ ಅಪೇಕ್ಷಿಸಿದ್ದರೆ ಆ ನಿರೀಕ್ಷೆ ಹುಸಿಯಾಗುತ್ತದೆ. ಅಡ್ವಾಣಿಯವರ ನೀತಿ- ನಿರೂಪಣೆಗಳಲ್ಲಿನ ಚಾಕಚಕ್ಯತೆ ಏನೇ ಇದ್ದರೂ, ಸಾಮಾಜಿಕ ನೀತಿ ಹೇಳಿಕೆಯನ್ನು ಅಂಗೀಕರಿಸಿದ್ದರೂ ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಡುವಲ್ಲಿ ಕವಚ-ಕುಂಡಲ ಹಾಕಿಕೊಂಡು ಸಿದ್ಧರಾಗಿದ್ದೇವೆ ಎಂದು ಹೇಳಿಕೊಂಡರೂ ಈ ಅಧಿವೇಶನದ ನಂತರ ಬಿಜೆಪಿಯ ನಿಜ ಸ್ವರೂಪ ವೇನು ಎಂಬ ಬಗ್ಗೆ ಸಂಶಯವುಳಿಯುವುದಿಲ್ಲ.

ಅದು ಸಾಮಾಜಿಕವಾಗಿ ಪ್ರತಿಗಾಮಿಗಳ, ಅರ್ಥಿಕರಂಗದಲ್ಲಿ ದೊಡ್ಡ ಬಂಡವಾಳಶಾಹಿಗಳ ಸೇವೆಗೆ ನಿಂತ, ಅಧಿಕಾರ ಕಸಿದುಕೊಳ್ಳಲು ಕೋಮುವಾದೀ ಛಿದ್ರಕಾರೀ ಹಾಗೂ ಸಂಕುಚಿತ ರಾಷ್ಟ್ರವಾದೀ ಮಾರ್ಗ ಹಿಡಿಯುವ ಸಮಯಸಾಧಕ ಪಕ್ಷ ಎಂಬ ಅದರ ನಿಜ ಸ್ವರೂಪ ಎಲ್ಲರ ಮುಂದೆ ಬರುತ್ತಿದೆ. ಏನೇ ಪ್ರಚಾರ ನಡೆಸಿದರೂ ಭಾರತವನ್ನು ಅದು ಒಂದಾಗಿಡಬಲ್ಲದು, ಅಥವಾ ಕನಿಷ್ಠ 'ದಂಗೆಮುಕ್ತ' ಹಾಗೂ 'ಭ್ರಷ್ಟಚಾರ ಮುಕ್ತ' ಮಾಡಬಲ್ಲದು ಎಂದು ಯಾರೂ ನಂಬಲಾರದ ಪಕ್ಷವಾಗಿ ಅದು ಮೂಡಿಬಂದಿದೆ.

ವಿಶ್ವರಂಗಕ್ಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ: 12, 18ನೇ ಅಡ್ಡರಸ್ತೆ, ಶಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ.: 236462. ಸಂಪಾದಕರು : ಪಿ.ರಾಮಚಂದ್ರರಾವ್